

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 29 ಭಾನುವಾರ 2023

ಸಂಪುಟ: 43 | ಸಂಚಿಕೆ: 281 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮೈಸೂರಲ್ಲಿ 11 ಕ್ಷೇತ್ರ ಗೆಲ್ಲುವ ಹೇಳಿಕೆ ನೀಡುವ ಸಿದ್ದರಾಮಯ್ಯ ಕೋಲಾರಕ್ಕೆ ಏಕೆ ಪಲಾಯನ ಮಾಡುತ್ತಿದ್ದಾರೆ...



ನಂಜನಗೂಡು, ಜ. 28- ಕಾಂಗ್ರೆಸ್‌ನ ಪ್ರಜಾಧ್ವನಿ ಯಾತ್ರೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರು ಜಿಲ್ಲೆಯ 11 ವಿಧಾನ ಸಭಾ ಕ್ಷೇತ್ರಗಳನ್ನು ನಾವು ಗೆಲ್ಲುತ್ತೇವೆ ಎಂದು ಹೇಳಿಕೆ ▶ 6ನೇ ಪುಟಕ್ಕೆ



ಅಪರಾಧ ಕೃತ್ಯ ಪತ್ತೆ
ಸಾಬೀತಿಗೆ ಹಾಲಿ ಕಾಯ್ದೆಗೆ ತಿದ್ದುಪಡಿ

● ಕೇಂದ್ರ ಗೃಹ ಸಚಿವ ಅಮಿತ್ ಷಾ ಸ್ಪಷ್ಟನೆ ● ಧಾರವಾಡದಲ್ಲಿ ರಾಷ್ಟ್ರೀಯ ವಿವಿ ವಿಜ್ಞಾನ ವಿವಿಗೆ ಶಂಕುಸ್ಥಾಪನೆ ● 12ನೇ ತರಗತಿ ನಂತರ ಈ ವಿವಿಗೆ ಪ್ರವೇಶಾವಕಾಶ; ಪದವಿ ನಂತರ ಉದ್ಯೋಗ ಖಚಿತ



ಬೆಂಗಳೂರು, ಜ.28(ಕೆಎಂಶಿ)- ಅಪರಾಧ ಕೃತ್ಯಗಳನ್ನು ಪರಿಣಾಮಕಾರಿಯಾಗಿ ಪತ್ತೆ ಹಚ್ಚಿ ಸಾಬೀತು ಮಾಡಲು ಹಾಲಿ ಕಾಯ್ದೆಗಳಿಗೆ ತಿದ್ದುಪಡಿ ತರುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಷಾ ತಿಳಿಸಿದ್ದಾರೆ.

ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿರುವ ಅವರು ಧಾರವಾಡದಲ್ಲಿ ರಾಷ್ಟ್ರೀಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ರಾಷ್ಟ್ರದಲ್ಲಿ ಸದ್ಯ ಇರುವ ಐಪಿಸಿ ಸೇರಿದಂತೆ ಕೆಲವು ಸಾಕ್ಷ್ಯ ಕಾಯ್ದೆಗಳಿಗೆ ತಿದ್ದುಪಡಿ ತರುವುದಾಗಿ ತಿಳಿಸಿದರು. ಕಾಯ್ದೆಗಳಿಗೆ ಅಗತ್ಯ ಬದಲಾವಣೆ ತರುವುದರ ಜೊತೆಗೆ ವಿಧಿ-ವಿಜ್ಞಾನ, ತಂತಜ್ಞಾನ ಅಭಿವೃದ್ಧಿಪಡಿಸಿ ಬಲಿಷ್ಠ ರಾಷ್ಟ್ರ ನಿರ್ಮಿಸಲಾಗುವುದು ಎಂದರು. ಅಪರಾಧ ಕೃತ್ಯಗಳನ್ನು ಸಾಬೀತು ಮಾಡಲು ಮೂರನೇ ಡಿಗ್ರಿ ಕಾಲ ಈಗಿಲ್ಲ. ಆದರೆ ಕಾನೂನಾತ್ಮಕವಾಗಿ ಅಪರಾಧಿಗೆ ಶಿಕ್ಷೆ ವಿಧಿಸಲು ಅಗತ್ಯ ಕಾನೂನು ರೂಪಿಸಲಾಗುವುದು.


ಅಡ್ವಾಣಿ ಅವರು ಗೃಹ ಸಚಿವರಾಗಿದ್ದ ಸಂದರ್ಭದಲ್ಲಿ ವಿಧಿ-ವಿಜ್ಞಾನ ನಿರ್ದೇಶನಾಲಯ ಆರಂಭಿಸಿದರು. ನಂತರ ಇದರ ಉಪಯೋಗವನ್ನು ಎಲ್ಲ ಸರ್ಕಾರಗಳು ಪಡೆದುಕೊಳ್ಳುತ್ತಿವೆ. ▶ 9ನೇ ಪುಟಕ್ಕೆ







ಡಾ.ವಿಷ್ಣುವರ್ಧನ್ ಸ್ಮಾರಕ ಇಂದು ಲೋಕಾರ್ಪಣೆ



ಮೈಸೂರು, ಜ.28(ಆರ್‌ಕೆ)- ಅಭಿಮಾನಿಗಳ ಬಹು ನಿರೀಕ್ಷಿತ ಕನ್ನಡದ ಜನಪ್ರಿಯ ನಾಯಕ ನಟ ದಿ.ಡಾ.ವಿಷ್ಣುವರ್ಧನ್ ಅವರ ಸ್ಮಾರಕವನ್ನು ನಾಳೆ (ಜ.29) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ.

ಮೈಸೂರು ತಾಲೂಕು, ಹಾಲಾಳು ಗ್ರಾಮದ ಬಳಿ ಹೆಚ್.ಡಿ.ಕೋಟೆ ರಸ್ತೆಯ ಉದ್ಬೂರು ಗೇಟ್ ಎದುರು 5 ಎಕರೆ ಪ್ರದೇಶದಲ್ಲಿ ನಿರ್ಮಿಸಿರುವ ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಸ್ಮಾರಕವನ್ನು ಭಾನುವಾರ ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿಗಳು ಲೋಕಾರ್ಪಣೆ ಮಾಡುವರು.

ವಿಶೇಷ ಆಹ್ವಾನಿತರಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಾರ್ಯಕ್ರಮದಲ್ಲಿ ಭಾವಹಿಸಲಿದ್ದು, ಶಾಸಕ ಜಿ.ಟಿ. ದೇವೇಗೌಡರು ಅಧ್ಯಕ್ಷತೆ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಡಾ.ವಿಷ್ಣುವರ್ಧನ್ ಪತ್ನಿ ಡಾ. ಭಾರತಿ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಸುಮಲತಾ ಅಂಬರೀಷ್ ಹಾಗೂ ಇನ್ನಿತರ ಗಣ್ಯರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು.

ಡಾ.ವಿಷ್ಣುವರ್ಧನ್ ಸ್ಮಾರಕ ಟ್ರಸ್ಟ್ ಹಾಗೂ ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ 11 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಸ್ಮಾರಕದಲ್ಲಿ ಬೃಹತ್ ಸಭಾಂಗಣ, ಫೋಟೋ ಗ್ಯಾಲರಿ, ಉದ್ಯಾನ, ದೊಡ್ಡ ಕೊಳ, ಅದರ ಮಧ್ಯೆ ಡಾ. ವಿಷ್ಣು ಅವರು ಬಳಸುತ್ತಿದ್ದ ಕೈಬಳೆ (ಕಡಗ) ಮಾದರಿಗಳನ್ನು ನಿರ್ಮಿಸಲಾಗಿದೆ. ಗ್ಯಾಲರಿಯಲ್ಲಿ ಡಾ.ವಿಷ್ಣುವರ್ಧನ್ ಜೀವನ ಪಯಣ, ನಟಿಸಿರುವ ಸಿನಿಮಾಗಳ 600 ಫೋಟೋಗಳನ್ನು ಪ್ರದರ್ಶಿಸಲಾಗಿದ್ದು, ಖ್ಯಾತ ಚಲನಚಿತ್ರಗಳ ಪೋಸ್ಟರ್‌ಗಳನ್ನು ಅಭಿಮಾನಿಗಳು ಹಾಗೂ ಪ್ರವಾಸಿಗರ ವೀಕ್ಷಣೆಗೆ ಪ್ರದರ್ಶಿಸಿ, ▶ 6ನೇ ಪುಟಕ್ಕೆ





ಶೀಘ್ರ ಮೈಸೂರು ಟೂರಿಸಂ ಸರ್ಕ್ಯೂಟ್ ಅನುಷ್ಠಾನ

● ಪ್ರವಾಸೋದ್ಯಮ ಇಲಾಖೆಯಿಂದ ಯೋಜನೆ ಸಿದ್ಧ; ಕೆಎಸ್‌ಟಿಡಿಸಿಯಿಂದ ಜಾರಿ
● ಪಾರಂಪರಿಕ, ಸಾಂಸ್ಕೃತಿಕ, ಸಾಹಸಮಯ, ಆಧ್ಯಾತ್ಮಿಕ, ವನ್ಯಜೀವಿಗಳ ಒಳಗೊಂಡ ಸರ್ಕ್ಯೂಟ್







ಮೈಸೂರು, ಜ. 28(ಆರ್‌ಕೆ)- ಕಳೆದ ವರ್ಷ ರಾಜ್ಯ ಬಜೆಟ್‌ನಲ್ಲಿ ಘೋಷಣೆಯಾಗಿದ್ದ ಮೈಸೂರು ಟೂರಿಸಂ ಸರ್ಕ್ಯೂಟ್ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರವಾಸೋದ್ಯಮ ಇಲಾಖೆಯು ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 2022ರ ಮಾರ್ಚ್ 4ರಂದು ಹಂಪಿ-ಬಾದಾಮಿ-ಐಹೊಳೆ-ಪಟ್ಟದಕಲ್ಲು-ವಿಜಯಪುರದೊಂದಿಗೆ ಮೈಸೂರು-ಶ್ರೀರಂಗಪಟ್ಟಣ-ಹಾಸನ-ಬೇಲೂರು-ಹಳೇಬೀಡು ಟೂರಿಸಂ ಸರ್ಕ್ಯೂಟ್ ಯೋಜನೆಯನ್ನು ರಾಜ್ಯ ಆಯ-ವ್ಯಯದಲ್ಲಿ ಘೋಷಿಸಿದ್ದರು. ಈ ಕುರಿತು ಪ್ರವಾಸೋದ್ಯಮ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕರ ಕಚೇರಿಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳ ಪ್ರವಾಸಿ ತಾಣಗಳನ್ನೊಳಗೊಂಡ ಸರ್ಕ್ಯೂಟ್ ಮಾರ್ಗ, ಅದರಲ್ಲಿ ಬರುವ ಪ್ರವಾಸಿ ತಾಣಗಳ ಭೇಟಿ, ದರ ನಿಗದಿ, ಸೌಲಭ್ಯಗಳು, ಪ್ರವಾಸದ ಅವಧಿ ಮುಂತಾದ ವಿವರಗಳನ್ನು ಪ್ರಸ್ತಾವನೆಯಲ್ಲಿ ನೀಡಿ ಯೋಜನೆ ರೂಪಿಸುವಂತೆ ಕೋರಲಾಗಿತ್ತು. ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರು ಬೆಂಗಳೂರಿನಲ್ಲಿ ಅಧಿಕಾರಿಗಳೊಂದಿಗೆ ಹಲವು ಬಾರಿ ಸಭೆ ನಡೆಸಿ ಅಗತ್ಯ ಮಾಹಿತಿಗಳನ್ನು ಕಲೆಹಾಕಿ ಪ್ರಥಮ ಬಾರಿ ರಾಜ್ಯದಲ್ಲಿ ಮೈಸೂರು-ಶ್ರೀರಂಗಪಟ್ಟಣ-ಬೇಲೂರು-ಹಳೇಬೀಡು ಟೂರಿಸಂ ಸರ್ಕ್ಯೂಟ್ ಅನ್ನು ಅನುಷ್ಠಾನಗೊಳಿಸುವ ಬಗ್ಗೆ ಡಿಪಿಆರ್ ತಯಾರಿಸಿ ಸರ್ಕಾರಕ್ಕೆ ಅಗತ್ಯ ಮಾಹಿತಿಯೊಂದಿಗೆ ಸಲ್ಲಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯ ಮಯೂರ ಹೊಯ್ಸಳ ಹೋಟೆಲ್ ಆವರಣದ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕರ ಕಚೇರಿಯನ್ನು ಕೇಂದ್ರವಾಗಿಸಿಕೊಂಡು ಅರಮನೆ, ಜಗನ್ಮೋಹನ ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ಉತ್ತನಹಳ್ಳಿಯ ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನ, ನಂಜನಗೂಡಿನ, ತಲಕಾಡು, ಸೋಮನಾಥಪುರ, ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಬೃಂದಾವನ, ರಂಗನತಿಟ್ಟು ಪಕ್ಷಿಧಾಮ, ಶ್ರೀರಂಗಪಟ್ಟಣದ ಶ್ರೀ ರಂಗನಾಥಸ್ವಾಮಿ ದೇವಸ್ಥಾನ, ಟಿಪ್ಪು ಸುಲ್ತಾನ್, ದರಿಯಾ ದೌಲತ್, ನಿಮಿಷಾಂಭ ದೇವಸ್ಥಾನ, ಮೇಲುಕೋಟೆ, ಹಾಸನ ಜಿಲ್ಲೆಯ ಬೇಲೂರು-ಹಳೇಬೀಡು ಪ್ರವಾಸಿ ತಾಣಗಳನ್ನು ಟೂರಿಸಂ ಸರ್ಕ್ಯೂಟ್‌ನಲ್ಲಿ ಸೇರಿಸಲಾಗಿದೆ. ದಕ್ಷಿಣ ಕರ್ನಾಟಕದ ಪಾರಂಪರಿಕ, ▶ 6ನೇ ಪುಟಕ್ಕೆ



ಮೈಸೂರು ಮಿತ್ರ ಭಾನುವಾರ 29 ಜನವರಿ 2023

ಮೈಸೂರಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪರ ಜನ್ಮದಿನಾಚರಣೆ

ಮುಂದಿನ ದಿನಗಳಲ್ಲಿ ಅದ್ದೂರಿಯಾಗಿ ಕಾರ್ಯಪ್ಪರ ಜನ್ಮದಿನ ಆಚರಿಸೋಣ; ಶಾಸಕ ಎಲ್.ನಾಗೇಂದ್ರ



ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ವೃತ್ತದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕೆ.ಎಂ.ಕಾರ್ಯಪ್ಪ ಅವರ ಜನ್ಮದಿನಾಚರಣೆಯಲ್ಲಿ ಅವರ ಪ್ರತಿಮೆಗೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ಮೈಸೂರು,ಜ.28(ಪಿಎಂ)–ಕೊಡವ ಸಮಾಜ ಮೈಸೂರು, ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಮೈಸೂರು ಮತ್ತು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅಭಿಮಾನಿ ಬಳಗದ ಸಂಯುಕ್ತಾಶ್ರಯದಲ್ಲಿ ಶನಿವಾರ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ 124ನೇ ಜನ್ಮದಿನ ಆಚರಿಸಲಾಯಿತು.

ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತದಲ್ಲಿ (ಮೆಟ್ರೋ ಪೋಲ್ ವೃತ್ತ) ಕಾರ್ಯಪ್ಪರ ಪ್ರತಿಮೆಗೆ ಪುಷ್ಪನಮನ ಸಲ್ಲಿಸುವ ಮೂಲಕ ಭಾರತ ಸೇನೆಯ ಪ್ರಥಮ ಮಹಾ ದಂಡನಾಯಕರನ್ನು ಸ್ಮರಿಸಲಾಯಿತು.

ಇದೇ ವೇಳೆ ಪುಷ್ಪ ನಮನ ಸಲ್ಲಿಸಿದ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ನಾಡು ಕಂಡ ಹೆಮ್ಮೆಯ ಪುತ್ರರು. 1899ರಲ್ಲಿ ಕೊಡಗಿನಲ್ಲಿ ಜನಿಸಿದ ಅವರು, 1949ರಲ್ಲಿ ಭಾರತ ಸೇನೆಯ ಮೊದಲ ಜನರಲ್ ಆದರು. ದೇಶದ ರಕ್ಷಣೆಗಾಗಿ ಅಪಾರ ಸೇವೆ ಸಲ್ಲಿಸಿದವರು ಕಾರ್ಯಪ್ಪ ಎಂದು ಸ್ಮರಿಸಿದರು.

ಕಾರ್ಯಪ್ಪನವರ ಜನ್ಮದಿನಾಚರಣೆ ಇನ್ನೂ ಅದ್ದೂರಿಯಾಗಿ ಆಚರಿಸಲ್ಪಡಬೇಕು. ಮುಂದಿನ ದಿನಗಳಲ್ಲಿ ಬೃಹತ್ ಕಾರ್ಯಕ್ರಮವಾಗಿ ಅವರ ಜನ್ಮದಿನಾಚರಣೆ ಆಚರಿಸೋಣ. ದೇಶದ ರಕ್ಷಣೆಗೆ ಮಹತ್ವದ ಸೇವೆ ಸಲ್ಲಿಸಿರುವ ಕಾರ್ಯಪ್ಪನವರು ಕೊಡಗು ಮಾತ್ರವಲ್ಲದೇ ಇಡೀ ದೇಶದ ವೀರ ಪುತ್ರರು. ಹೆಚ್ಚು ಮಂದಿ ಸೇನೆಗೆ ಸೇರಿ ಸೇವೆ ಸಲ್ಲಿಸುವ ಹಿರಿಮೆಯನ್ನು ಕೊಡಗು ಜಿಲ್ಲೆ ಹೊಂದಿದೆ ಎಂದು ನುಡಿದರು.

ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಕಾರ್ಯಪ್ಪನವರು ದೇಶದ ರಕ್ಷಣೆಗೆ ಮಹತ್ವದ ಪಾತ್ರ ವಹಿಸಿದ್ದಾರೆ. ಇಂದಿನ ಯುವ ಜನರಿಗೆ ಅವರ ಹೋರಾಟದ ಬಗ್ಗೆ ತಿಳಿಸಬೇಕು. ಈ ನಿಟ್ಟಿನಲ್ಲಿ ಪ್ರತಿ ಜಯಂತಿ ಸಂದರ್ಭದಲ್ಲಿ ಅವರ ಇತಿಹಾಸದ ಪುಸ್ತಕಗಳನ್ನು ಮಕ್ಕಳು, ಯುವ ಜನತೆಗೆ ವಿತರಣೆ ಮಾಡಬೇಕು. ಕೊಡಗು ಮಣ್ಣಿನ ಶಕ್ತಿಯು ನಮ್ಮ ದೇಶದ ರಕ್ಷಣೆಗೆ ಮಹತ್ವದ ಕೊಡುಗೆ ನೀಡುತ್ತಿದೆ. ಕಾರ್ಯಪ್ಪನವರು ನಮ್ಮ ಸಮಾಜದ ಆದರ್ಶ. ಅವರನ್ನು ನಾವೆಲ್ಲರೂ ಸ್ಮರಿಸಬೇಕು ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ನಾನು ಸೇನೆಗೆ ಸೇರಲು ಕಾರ್ಯಪ್ಪನವರೇ ಪ್ರೇರಣೆ. ಸೇನೆಯಲ್ಲಿ ಪ್ರತಿದಿನ ಸಂಜೆ 7ಕ್ಕೆ ಪರೇಡ್ ಮಾಡಿಸುತ್ತಾರೆ. ಈ ವೇಳೆ ದೇಶಭಕ್ತಿ ಬಗ್ಗೆ ಭಾಷಣ ಮಾಡಲಾಗುತ್ತದೆ. ಕೊನೆಗೆ 'ಲೀವ್ ದಿ ಮಾರ್ಕ್' ಎಂದು ಹೇಳುತ್ತಾರೆ. ಅಂದರೆ ಭೂಮಿಯಲ್ಲಿ ಒಳ್ಳೆಯ ಗುರುತು ಬಿಟ್ಟು ಹೋಗಬೇಕೆಂಬ ಸಂದೇಶ ನೀಡುತ್ತಾರೆ. ಅಂತೆಯೇ ಕಾರ್ಯಪ್ಪನವರು ಒಳ್ಳೆಯ ಗುರುತು ಬಿಟ್ಟಿದ್ದಾರೆ. ಅವರ ಜನ್ಮದಿನ ಆಚರಣೆಯು ರಾಜ್ಯ ಮಟ್ಟದ ಕಾರ್ಯಕ್ರಮವಾಗಿ ಆಚರಿಸಲ್ಪಡಬೇಕು ಎಂದು ಒತ್ತಾಯಿಸಿದರು.

ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಮಾತನಾಡಿ, ನಾನು ಪಾಲಿಕೆ ಸದಸ್ಯನಾಗಿದ್ದ ಅವಧಿಯಲ್ಲಿ ಈ ವೃತ್ತದಲ್ಲಿ ಕಾರ್ಯಪ್ಪರ ಪ್ರತಿಮೆ ಸ್ಥಾಪನೆ ಕಾರ್ಯಕ್ಕೆ ನನಗೆ ಸಹಕಾರ ನೀಡಿದ ಎಲ್ಲರಿಗೂ ಅಭಿನಂದಿಸುತ್ತೇನೆ. ಮುಂದಿನ ದಿನಗಳಲ್ಲಿ ಪಾಲಿಕೆ ವತಿಯಿಂದಲೇ ಕಾರ್ಯಪ್ಪರ ಜನ್ಮದಿನಾಚರಣೆ ಮಾಡಬೇಕೆಂದು ಮೇಯರ್ ಅವರಲ್ಲಿ ಮನವಿ ಮಾಡುತ್ತೇನೆ ಎಂದು ಹೇಳಿದರು.

ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಮಾತನಾಡಿ, 'ಕೊಡವ ಮಾಜಿ ಸೈನಿಕರ ಸಂಘ'ದ ವತಿಯಿಂದ ಸಿಎ ನಿವೇಶನ ಕೋರಿ ಮುಡಾಗೆ ಅರ್ಜಿ ಸಲ್ಲಿಸಿದ್ದು, ಫೆ.4ರಂದು ನಡೆಯಲಿರುವ ಮುಡಾ ಸಭೆಯಲ್ಲಿ ಸದರಿ ಅರ್ಜಿ ವಿಲೇವಾರಿಗೆ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೊಡವ ಸಮಾಜ ಮೈಸೂರು ಅಧ್ಯಕ್ಷ ಮೇಚಂಡ ಶಶಿ ಪೊನ್ನಪ್ಪ, 34 ವರ್ಷಗಳ ಕಾಲ ಸೇನೆಯಲ್ಲಿ ಸೇವೆ ಸಲ್ಲಿಸಿದ ಕಾರ್ಯಪ್ಪನವರು, 1949ರಿಂದ 53ರವರೆಗೆ ಜನರಲ್ ಆಗಿ ಸೇವೆ ಸಲ್ಲಿಸಿದರು. ಭಾರತ ಸೇನೆಯ ಪ್ರಥಮ ಫೀಲ್ಡ್ ಮಾರ್ಷಲ್ ಆದ ಅವರ ಸೇವೆಯ ವೈಖರಿ, ಸಮಯ ಪ್ರಜ್ಞೆ ಮತ್ತು ಶಿಸ್ತು ಪಾಲನೆಯನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಳ್ಳಬೇಕು ಎಂದರು.

ಮೇಯರ್ ಶಿವಕುಮಾರ್, ಪಾಲಿಕೆ ಸದಸ್ಯರಾದ ಎಂ.ಯು.ಸುಬ್ಬಯ್ಯ, ಪ್ರಮೀಳಾ ಭರತ್, ರಂಗಸ್ವಾಮಿ, ರವೀಂದ್ರ, ಬಿಜೆಪಿ ಮುಖಂಡ ಕವೀಶ್‌ಗೌಡ, ಕೊಡವ ಸಮಾಜ ಮೈಸೂರು ಉಪಾಧ್ಯಕ್ಷ ಮಲಚೀರ ಪೊನ್ನಪ್ಪ, ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಮೈಸೂರು ಅಧ್ಯಕ್ಷ ಕುಟ್ಟಿಮಡ ಡಿ.ಮುತ್ತಪ್ಪ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅಭಿಮಾನಿ ಬಳಗದ ಅಧ್ಯಕ್ಷ ನಾಯಕಂಡ ತಿಮ್ಮಯ್ಯ ಮತ್ತಿತರರು ಹಾಜರಿದ್ದರು.

ನಗರಪಾಲಿಕೆಯಿಂದ ಕಾರ್ಯಪ್ಪರ ಪ್ರತಿಮೆಗೆ ಮತ್ತಷ್ಟು ವಿಶೇಷ ಮೆರಗು

ಮೇಯರ್ ಶಿವಕುಮಾರ್ ಘೋಷಣೆ

ಮೈಸೂರು,ಜ.28(ಪಿಎಂ)–ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತದಲ್ಲಿ (ಮೆಟ್ರೋಪೋಲ್ ವೃತ್ತ) ಕಾರ್ಯಪ್ಪರ ಪ್ರತಿಮೆ ಮತ್ತು ಆವರಣಕ್ಕೆ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಇನ್ನಷ್ಟು ವಿಶೇಷ ಮೆರಗು ನೀಡಲಾಗುವುದು ಎಂದು ಮೇಯರ್ ಶಿವಕುಮಾರ್ ಪ್ರಕಟಿಸಿದರು.

ಕಾರ್ಯಪ್ಪನವರು ದೇಶದ ವರಪುತ್ರರು. ಸೇನೆಯ ದಂಡನಾಯಕನಾಗಿ ತಮ್ಮದೇ ಆದ ರೀತಿಯಲ್ಲಿ ದೇಶ ರಕ್ಷಣೆಗೆ ಸೇವೆ ಸಲ್ಲಿಸಿದ್ದಾರೆ. ಅಟಲ್ ಬಿಹಾರಿ ವಾಜಪೇಯಿ ಅವರ ಆಡಳಿತಾವಧಿಯಲ್ಲಿ ಕಾರ್ಗಿಲ್ ಯುದ್ಧ ನಡೆಯಿತು. ಇದಕ್ಕೂ ಪೂರ್ವದಲ್ಲೇ ಪಾಕಿಸ್ತಾನದವರು ಭಾರತದ ಮೇಲೆ ದಾಳಿ ಮಾಡಿದ್ದರು. ಅಂದು ಪಾಕಿಸ್ತಾನ ಸೇನೆಯನ್ನು ಕಾರ್ಯಪ್ಪನವರು ಅತ್ಯಂತ ಯಶಸ್ವಿಯಾಗಿ ಹಿಮ್ಮೆಟ್ಟಿಸಿದ್ದರು. ಇಂತಹ ಮಹಾನ್ ಚೇತನ ನಮ್ಮ ಕರ್ನಾಟಕದವರು. ಅದರಲ್ಲೂ ಮೈಸೂರು ನೆರೆಯ ಜಿಲ್ಲೆ ಕೊಡಗಿನವರು ಎಂಬುದು ಹೆಮ್ಮೆಯ ಸಂಗತಿ ಎಂದು ಸ್ಮರಿಸಿದರು.

1965ರ ಭಾರತ–ಪಾಕಿಸ್ತಾನ ಯುದ್ಧದಲ್ಲಿ ಪಾಕಿಸ್ತಾನ ಸೇನೆಯು ಕಾರ್ಯಪ್ಪನವರ ಪುತ್ರರನ್ನು ಯುದ್ಧಕೈದಿಯಾಗಿ ವಶಕ್ಕೆ ಪಡೆದಿತ್ತು. ಅಂದಿನ ಪಾಕಿಸ್ತಾನ ಅಧ್ಯಕ್ಷ ಅಯೂಬ್‌ಖಾನ್, ಕಾರ್ಯಪ್ಪರ ಪುತ್ರರನ್ನು ಮಾತ್ರ ಬಿಡುಗಡೆ ಮಾಡಲು ಮುಂದಾದಾಗ, ದೇಶದ ಪ್ರತಿಯೊಬ್ಬ ಯೋಧನೂ ನನ್ನ ಮಗನೇ. ಬಿಡುಗಡೆಗೊಳಿಸುವುದಾದರೆ ಎಲ್ಲಾ ಭಾರತೀಯ ಯುದ್ಧಕೈದಿಗಳನ್ನು ಬಿಡುಗಡೆಗೊಳಿಸಬೇಕು ಎಂದು ಖಡಕ್ ಆಗಿ ಸಂದೇಶ ನೀಡಿದ್ದರು ಎಂದರು. ಇಂತಹ ಮಹನೀಯರ ಪ್ರತಿಮೆ ಇಲ್ಲಿ ಅನಾವರಣಗೊಂಡಿರುವುದು ಸಂತಸ. ಇಲ್ಲಿಗೆ ಪಾಲಿಕೆ ವತಿಯಿಂದ ಇನ್ನು ವಿಶೇಷ ರೀತಿಯಲ್ಲಿ ಮೆರಗು ನೀಡಲು ಕ್ರಮ ವಹಿಸಲಾಗುವುದು. ಕೊಡಗಿನಲ್ಲಿ ವೀರವನಿತೆಯರೂ ಇದ್ದಾರೆ. ವೀರಪುತ್ರರೂ ಇದ್ದಾರೆ. ಸೇನೆ ಎಂದಾಕ್ಷಣ ಕೊಡಗು ಜಿಲ್ಲೆ ನೆನಪಾಗುತ್ತದೆ ಎಂದರು.



ಮೈಸೂರಿನ ಪ್ರಜ್ಞಾವಂತ ನಾಗರಿಕ ವೇದಿಕೆ ವತಿಯಿಂದ ಫೀಲ್ಡ್ ಮಾರ್ಷಲ್ ಕೆ ಎಂ ಕಾರ್ಯಪ್ಪ ವೃತ್ತದಲ್ಲಿ ಕೆ.ಎಂ.ಕಾರ್ಯಪ್ಪ 124ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಲಾಯಿತು. ಈ ವೇಳೆ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್, ಪಾಲಿಕೆ ನಾಮ ನಿರ್ದೇಶಿತ ಸದಸ್ಯ ಜಗದೀಶ್, ಬಿಜೆಪಿ ಮುಖಂಡರಾದ ಪರಮೇಶ್‌ಗೌಡ, ಸಂದೀಪ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ. ರಾಮಕೃಷ್ಣ, ಕೇಬಲ್ ಕಿಟ್ಟಿ, ಸುರೇಂದ್ರ, ಅನುಜ್, ಸುರೇಶ್ ಗೋಲ್ಡ್, ನವೀನ್, ಶ್ರೀನಿವಾಸ್, ಮೋಹನ್‌ಕುಮಾರ್‌ಗೌಡ, ಸುಚೇಂದ್ರ ಇನ್ನಿತರರು ಉಪಸ್ಥಿತರಿದ್ದರು.

ಉಚಿತ ಹೃದ್ರೋಗ ತಪಾಸಣೆ ಶಿಬಿರ

ಮೈಸೂರು,ಜ.28–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಜ.30ರಿಂದ ಫೆ. 4 ರವರೆವಿಗೆ ಉಚಿತ ಹೃದ್ರೋಗ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಹೃದಯ ಶಸ್ತ್ರ ಚಿಕಿತ್ಸಾ ತಜ್ಞವೈದ್ಯ ಡಾ.ಕೆ.ಆದಿತ್ಯ ಉಡುಪ ಹಾಗೂ ಡಾ.ಟಿ.ಎನ್.ರವಿಕುಮಾರ್ ನೇತೃತ್ವದಲ್ಲಿ ಉಚಿತ ಸಮಾಲೋಚನೆ ನಡೆಯಲಿದ್ದು, ವೈದ್ಯರು ಸೂಚಿಸುವ ಇ.ಸಿ.ಜಿ., ಲಿಪಿಡ್ ಪ್ರೊಫೈಲ್, ಆರ್.ಬಿ.ಎಸ್., ಎಕೋ ಸ್ಕ್ರೀನಿಂಗ್, ಟಿ.ಎಂ.ಟಿ ಪರೀಕ್ಷೆಗಳಿಗೆ ವಿಶೇಷ ಪ್ಯಾಕೇಜ್ ಲಭ್ಯವಿರುತ್ತದೆ. ಹೃದಯದ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಮಾಹಿತಿಗೆ 0821–2533600, 9986399862 ಸಂಪರ್ಕಿಸಬಹುದಾಗಿದೆ.

ನಿಧನ

ಡಿ. ಪ್ರಕಾಶ್



ಮೈಸೂರು, ಜ. 28– ಚಾಮರಾಜನಗರ ಜೆಎಸ್‌ಎಸ್ ಸ್ಕೂಲ್ ನಿವೃತ್ತ ಮುಖ್ಯೋಪಾಧ್ಯಾಯರು ಹಾಗೂ ಮೈಸೂರಿನ ತಿಲಕ್‌ನಗರದ ನಿವಾಸಿ ಡಿ.ಪ್ರಕಾಶ್ (69) ಶನಿವಾರ ಬೆಳಗ್ಗೆ ಅವರ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬನ್ನಿಮಂಟಪದ ಜೋಡಿ ತೆಂಗಿನ ಮರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಿರಣ್‌ಕುಮಾರ್



ಮೈಸೂರಿನ ಎನ್.ಆರ್.ಮೊಹಲ್ಲಾ ನಿವಾಸಿ ಕಿರಣ್‌ಕುಮಾರ್ (43) ಶುಕ್ರವಾರ ಹೃದಯಾಘಾತದಿಂದ ನಿಧನರಾದರು. ಅವರು ಮುಂಬೈನಲ್ಲಿ ಆರ್.ಎಸ್.ಎಸ್. ಪ್ರಧಾನ ಕಾರ್ಯದರ್ಶಿ ಮತ್ತು ಬಿಜೆಪಿ ಯುವ ಮೋರ್ಚಾದಲ್ಲಿ ಕಾರ್ಯನಿರ್ವಹಿಸಿದ್ದರು. ಮೃತರು ತಂದೆ, ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಎನ್.ಆರ್.ಮೊಹಲ್ಲಾದ ಗಣೇಶ್‌ನಗರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆನ್‌ಲೈನ್‌ನಲ್ಲಿ ಆಮಿಷ ತೋರಿ ಲಕ್ಷ ಲಕ್ಷ ವಂಚನೆ

ಮೈಸೂರು, ಜ.28–ಆನ್‌ಲೈನ್ ವಂಚಕರು ವಿವಿಧ ಆಮಿಷವೊಡ್ಡಿ ಮೂವರಿಗೆ ಲಕ್ಷಾಂತರ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಲಾಭದ ಆಸೆಗೆ 20 ಲಕ್ಷ ಹೋಯ್ತು: ರಾಜೀವ್‌ನಗರ ಮೊದಲನೇ ಹಂತದ ನಿವಾಸಿ ಕೆ.ಎಲ್.ಕುಮಾರ್(53) ಅವರಿಗೆ ಸುರೇಶ್ ಎಂಬಾತ ಪರಿಚಯವಾಗಿ ವೆಬ್‌ಸೈಟ್‌ವೊಂದರಲ್ಲಿ ಹಣ ಹೂಡಿಕೆ ಮಾಡಿದರೆ ಲಾಭ ಬರುತ್ತದೆ ಎಂದು ತಿಳಿಸಿದ ಮೇರೆಗೆ ಅವರು ಸದರಿ ವೆಬ್‌ಸೈಟ್‌ಗೆ 20 ಲಕ್ಷ ರೂ.ಗಳನ್ನು ಹೂಡಿಕೆ ಮಾಡಿದ್ದಾರೆ. ಆದರೆ 2022ರ ಅಕ್ಟೋಬರ್‌ನಿಂದ ವೆಬ್‌ಸೈಟ್ ಬ್ಲಾಕ್ ಆಗಿದ್ದು, ಕುಮಾರ್ ಅವರಿಗೆ ಹೂಡಿಕೆ ಹಣವಾಗಲೀ, ಲಾಭವಾಗಲೀ ಬಂದಿಲ್ಲ.

ಬಟ್ಟೆಗಾಗಿ 3.61 ಲಕ್ಷ ಟೋಪಿ: ವಿಜಯನಗರ 4ನೇ ಹಂತದ ನಿವಾಸಿ ಹೆಚ್.ಎಸ್.ರಾಜಶೇಖರ್(61) ಎಂಬುವರು ಯೂ–ಟ್ಯೂಬ್ ಮುಖಾಂತರ ಬಟ್ಟೆ ಖರೀದಿಸಲು ಎತನಿಕ್ ವೆಬ್ ಎಂಬ ಸೈಟ್‌ಗೆ 598 ರೂ. ವರ್ಗಾವಣೆ ಮಾಡಿದ್ದರು. ಅವರು ಬುಕ್ ಮಾಡಿದ್ದ ಬಟ್ಟೆ ಡೆಲಿವರಿ ಆಗದ ಕಾರಣ ಸದರಿ ವೆಬ್‌ಸೈಟ್‌ನ ಕಸ್ಟಮರ್ ಕೇರ್ ಸಂಖ್ಯೆಯನ್ನು ಗೂಗಲ್‌ನಲ್ಲಿ ಸರ್ಚ್ ಮಾಡಿ ಸದರಿ ಸಂಖ್ಯೆಗೆ ಕರೆ ಮಾಡಿದಾಗ ಮಾತನಾಡಿದ ವಂಚಕ ಎನಿಡೆಸ್ಕ್ ಎಂಬ ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡಿಕೊಳ್ಳಲು ತಿಳಿಸಿದ್ದಲ್ಲದೇ, ಅವರ ಎಟಿಎಂ ಕಾರ್ಡ್ ಫೋಟೋ ಮತ್ತು ಪಿನ್ ನಂಬರ್ ಪಡೆದಿದ್ದು, ರಾಜಶೇಖರ್ ಅವರ ಬ್ಯಾಂಕ್ ಖಾತೆಯಿಂದ 3,61,700 ರೂ. ಅಕ್ರಮವಾಗಿ ವರ್ಗಾವಣೆಯಾಗಿದೆ.

ಪಾರ್ಟ್ ಟೈಂ ಜಾಬ್ ವಂಚನೆ: ಮಂಡಿ ಮೊಹಲ್ಲಾ ನಿವಾಸಿ ಎಂ.ಎಸ್. ಸುಪ್ರೀತಾ(32) ಎಂಬುವರ ವಾಟ್ಸಾಪ್‌ಗೆ ಪಾರ್ಟ್ ಟೈಂ ಜಾಬ್ ಬಗ್ಗೆ 2022ರ ಅ.17ರಂದು ಲಿಂಕ್ ಬಂದಿದ್ದು, ಸದರಿ ಲಿಂಕ್ ಓಪನ್ ಮಾಡಿದಾಗ ಟೆಲಿಗ್ರಾಂನಲ್ಲಿ ಶಾಪಿಂಗ್ ಮಾಲ್ ಎಂಬ ಪೇಜ್ ತೆರೆದುಕೊಂಡಿದೆ. ಅದರ ಮೂಲಕ ಹಣ ಹೂಡಿಕೆ ಮಾಡಿದರೆ ಲಾಭ ಬರುತ್ತದೆ ಎಂದು ತಿಳಿಸಿದ ಮೇರೆಗೆ ಸುಪ್ರೀತಾ 63,990 ರೂ. ಹೂಡಿಕೆ ಮಾಡಿ ವಂಚನೆಗೊಳಗಾಗಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರತ್ಯೇಕ ದೂರುಗಳು ದಾಖಲಾಗಿವೆ.

ಕಾರ್ಖಾನೆ ಬೀಗ ಮುರಿದು ಇಂಜಿನಿಯರಿಂಗ್ ಐಟಂ ಕಳವು

ಮೈಸೂರು,ಜ.28–ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದ ಕಾರ್ಖಾನೆಯೊಂದರ ಬೀಗ ಮುರಿದು ಮೆಕ್ಯಾನಿಕಲ್ ಇಂಜಿನಿಯರಿಂಗ್ ಐಟಂಗಳು ಸೇರಿದಂತೆ ಕೆಲ ವಸ್ತುಗಳನ್ನು ಕಳವು ಮಾಡಲಾಗಿದೆ. ಹೆಬ್ಬಾಳ ಕೈಗಾರಿಕಾ ಪ್ರದೇಶದ ಪ್ಲಾಟ್ ನಂ.428ರಲ್ಲಿ ಇರುವ 'ಮೇಕ್ ಫ್ಯಾಬ್' ಫ್ಯಾಕ್ಟರಿಯಲ್ಲಿ ಇಂಜಿನಿಯರಿಂಗ್ ಐಟಂಗಳು, ಗೇರ್ ಬಾಕ್ಸ್, ಕೇಸಿಂಗ್‌ನಂತಹ ವಸ್ತುಗಳನ್ನು ರಿಪೇರಿ ಮಾಡಲಾಗುತ್ತದೆ. ಈ ಕಾರ್ಖಾನೆಯ ಮಾಲೀಕ ಶಿವದಾಸ್ ಎ.ನಾಯರ್ ಎಂಬುವರು ಜ.21ರಂದು ಕಾರ್ಖಾನೆಗೆ ಬೀಗ ಹಾಕಿಕೊಂಡು ಹೋಗಿದ್ದು, ಜ.23ರಂದು ಹಿಂದಿರುಗಿದಾಗ ಕಾರ್ಖಾನೆಯ ಬೀಗ ಮುರಿದು ವಿಕೆಸಿ ಕಂಪೆನಿಯ ನಾಲ್ಕು ಶೂ ಮೋಲ್ಡ್, ಕಾರ್ಖಾನೆಯಲ್ಲಿದ್ದ ಮೆಕ್ಯಾನಿಕಲ್ ಇಂಜಿನಿಯರಿಂಗ್ ಐಟಂಗಳು, ಗೇರ್ ಬಾಕ್ಸ್ ಕೇಸಿಂಗ್‌ಗಳು, ರಿಪೇರಿ ಮತ್ತು ನಿರ್ವಹಣೆಗೆ ಬಳಸುವ ಟೂಲ್‌ಗಳನ್ನು ಕಳವು ಮಾಡಲಾಗಿದೆ. ಈ ಸಂಬಂಧ ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿವೇಶನ ಕೊಡಿಸುವುದಾಗಿ ರೈತ ಮಹಿಳೆಗೆ ಐದು ಲಕ್ಷ ವಂಚನೆ

ಬನ್ನೂರು, ಜ.28–ನಿವೇಶನ ಕೊಡಿಸುವುದಾಗಿ ರೈತ ಮಹಿಳೆಗೆ 5 ಲಕ್ಷ ರೂ. ವಂಚಿಸಿದ್ದಲ್ಲದೇ, ಹಣ ವಾಪಸ್ ಕೇಳಿದಾಗ ಆಕೆಯ ಮೇಲೆ ಹಲ್ಲೆ ನಡೆಸಿ ಮಾಂಗಲ್ಯ ಸರವನ್ನು ಕಿತ್ತ ಬಗ್ಗೆ ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಸಂಬಂಧ 2022ರ ಅಕ್ಟೋಬರ್ ತಿಂಗಳಲ್ಲೇ ರೈತ ಮಹಿಳೆ ದೂರು ನೀಡಿದ್ದರೂ, ಪೊಲೀಸರು ಅದನ್ನು ದಾಖಲಿಸಿಕೊಂಡಿರಲಿಲ್ಲ. ಜ.25ರಂದು ಮತ್ತೊಮ್ಮೆ ದೂರು ಪಡೆದು ದಾಖಲಿಸಿಕೊಂಡಿದ್ದಾರೆ. ತಿ.ನರಸೀಪುರ ತಾಲೂಕು ಗೊರವನಹಳ್ಳಿ ನಿವಾಸಿಗಳಾದ ಮಂಚಿಗಯ್ಯ ಮತ್ತು ಆತನ ಪತ್ನಿ ಲಕ್ಷ್ಮಿ ಆರೋಪಕ್ಕೆ ಗುರಿಯಾದವರಾಗಿದ್ದು, ಮಂಡ್ಯ ಜಿಲ್ಲೆ ಮದ್ದೂರು ತಾಲೂಕು ಅಟಗೂರು ಗ್ರಾಮದ ರೈತ ಮಹಿಳೆ ವಿ.ಡಿ.ಸುಜಾತಾ(43) ವಂಚನೆಗೊಳಗಾದವರು.

ವಿವರ: ಸುಜಾತಾ ಅವರಿಗೆ ಪರಿಚಯವಾದ ಗೊರವನಹಳ್ಳಿ ಗ್ರಾಮದ ಮಂಚಿಗಯ್ಯ ಸರ್ಕಾರದಿಂದ ನಿವೇಶನ ಕೊಡಿಸುವುದಾಗಿ ನಂಬಿಸಿ 2018ರ ಜುಲೈ 10ರಂದು 5 ಲಕ್ಷ ರೂ.ಗಳನ್ನು ಸುಜಾತಾ ಅವರಿಂದ ಪಡೆದಿದ್ದಾನೆ. ನಿವೇಶನಕ್ಕೆ 6.50 ಲಕ್ಷ ರೂ. ನೀಡಬೇಕಾಗುತ್ತದೆ ಎಂದು ತಿಳಿಸಿದ್ದ ಆತ, ನಿವೇಶನ ಮಂಜೂರಾತಿಗೆ ಸಂಬಂಧಿಸಿದ ಕಡತ ವಿಲೇವಾರಿಗೆ ಸಮಯ ಹಿಡಿಯುತ್ತದೆ ಎಂದು ಸಬೂಬು ಹೇಳಿ ಕಾಲಹರಣ ಮಾಡಿದ್ದಾನೆ. ತಾನು ಮೋಸ ಹೋಗಿರುವುದು ಮನವರಿಕೆ ಆಗಿದ್ದರಿಂದ ಸುಜಾತಾ ಅವರು 2022ರ ಅಕ್ಟೋಬರ್ 20ರಂದು ಗೊರವನಹಳ್ಳಿಗೆ ತೆರಳಿ ಮಂಚಿಗಯ್ಯನ ಬಳಿ ಹಣ ಹಿಂತಿರುಗಿಸುವಂತೆ ಕೇಳಿದಾಗ ಆತ ಮತ್ತು ಆತನ ಪತ್ನಿ ಲಕ್ಷ್ಮಿ ಸುಜಾತಾ ಮೇಲೆ ಹಲ್ಲೆ ನಡೆಸಿ ಅವರ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡಿದ್ದಲ್ಲದೇ, ಪ್ರಾಣ ಬೆದರಿಕೆ ಹಾಕಿದ್ದಾರೆ.

ಅಂದೇ ಸುಜಾತಾ ಬನ್ನೂರು ಠಾಣೆಗೆ ದೂರು ಸಲ್ಲಿಸಿದರಾದರೂ, ಪೊಲೀಸರು ಅದನ್ನು ದಾಖಲಿಸಿಕೊಳ್ಳದೇ ಆರೋಪಿಗಳನ್ನು ಕರೆಸಿ ಮಾತನಾಡುತ್ತೇವೆ ಎಂದು ಸಬೂಬು ಹೇಳಿ ಅವರನ್ನು ಸಾಗಹಾಕಿದ್ದಾರೆ. ಸುಜಾತಾ ಆಗಿಂದಾಗ್ಗೆ ಠಾಣೆಗೆ ಭೇಟಿ ನೀಡಿ ತಮ್ಮ ದೂರಿನ ಬಗ್ಗೆ ವಿಚಾರಿಸಿದಾಗ ಕೊನೆಗೆ ಜ.25ರಂದು ಮತ್ತೊಮ್ಮೆ ದೂರು ಬರೆದುಕೊಡಿ ಎಂದು ಬರೆಸಿಕೊಂಡು ಮಂಚಿಗಯ್ಯ ಮತ್ತು ಆತನ ಪತ್ನಿ ಲಕ್ಷ್ಮಿ ವಿರುದ್ಧ ಭಾರತೀಯ ದಂಡ ಸಂಹಿತೆ 420, 504, 506, 323, 327, 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಮೂವರು ಮಹಿಳೆಯರ ಸರ ಕಳವು

ಸುತ್ತೂರು,ಜ.28–ಸುತ್ತೂರು ಜಾತ್ರಾ ಮಹೋತ್ಸವದ ವೇಳೆ ಜನ ಜಂಗುಳಿಯಲ್ಲಿ ಸರಗಳ್ಳರು ಕೈಚಳಕ ತೋರಿಸಿದ್ದು, ಈ ಸಂಬಂಧ ಎರಡು ಪ್ರಕರಣಗಳು ದಾಖಲಾಗಿವೆ. ಮೈಸೂರಿನ ಶಂಕರ ಮಠ ರಸ್ತೆಯ ನಿವಾಸಿ ಅಂಬಿಕಾ(71) ಎಂಬುವರು ಮಕ್ಕಳೊಂದಿಗೆ ಜ.22ರಂದು ಸುತ್ತೂರು ಜಾತ್ರಾ ಮಹೋತ್ಸವಕ್ಕೆ ತೆರಳಿದ್ದರು.



ಸುತ್ತೂರು ಬಸ್ ನಿಲ್ದಾಣದ ಸಮೀಪ ಅಂಗಡಿ ಸಾಲುಗಳ ಬಳಿ ಜನ ಜಂಗುಳಿ ನಡುವೆ ಮಧ್ಯಾಹ್ನ 1.30ರ ಸುಮಾರಿನಲ್ಲಿ ಅವರು ತೆರಳಿದಾಗ ಕತ್ತಿನಲ್ಲಿದ್ದ 32 ಗ್ರಾಂ ತೂಕದ ಚಿನ್ನದ ಸರ ಕಳುವಾಗಿದೆ. ಮತ್ತೊಂದು ಪ್ರಕರಣದಲ್ಲಿ ಕೊಳ್ಳೇಗಾಲ ತಾಲೂಕು ತೇರಂಬಳ್ಳಿ ಗ್ರಾಮದ ಪದ್ಮಾ(45) ಎಂಬುವರು ತಮ್ಮ ಗ್ರಾಮದ ಐವರು ಮಹಿಳೆಯರೊಂದಿಗೆ ಸುತ್ತೂರು ಜಾತ್ರೆಗೆ ಜ.22ರಂದು ತೆರಳಿದ್ದು, ಅಂದು ಮಧ್ಯಾಹ್ನ 1.30ರ ಸುಮಾರಿನಲ್ಲಿ ಕಾಡು ಮಠದ ದೇವಸ್ಥಾನದ ಗದ್ದಿಗೆ ಮುಂಭಾಗದ ಗೇಟ್‌ನಲ್ಲಿ ಜನ ಜಂಗುಳಿ ನಡುವೆ ಅವರ ಕತ್ತಿನಲ್ಲಿದ್ದ 32 ಗ್ರಾಂನ ಚಿನ್ನದ ಸರವನ್ನು ಕಳವು ಮಾಡಲಾಗಿದೆ. ಇವೆರಡೂ ಪ್ರಕರಣಗಳು ಬಿಳಿಗೆರೆ ಠಾಣೆಯಲ್ಲಿ ದಾಖಲಾಗಿವೆ. ಅದೇ ದಿನ ಮಧ್ಯಾಹ್ನ 2.30ರಲ್ಲಿ ಸುತ್ತೂರಿನ ವಸ್ತುಪ್ರದರ್ಶನದ ಗೇಟ್ ಬಳಿ ಬಡಗಲಪುರ ಗ್ರಾಮದ ವಿಮಲ ಎಂಬುವರ ಮಾಂಗಲ್ಯ ಸರ ಕಳವು ಮಾಡಿರುವ ಬಗ್ಗೆ ಈ ಹಿಂದೆಯೇ ಪ್ರಕರಣ ದಾಖಲಾಗಿತ್ತು.

ಬಸ್‌ನಲ್ಲಿ ಗೃಹಿಣಿ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 1.65 ಲಕ್ಷ ರೂ. ನಗದು ಕಳವು

ನಂಜನಗೂಡು, ಜ.28–ಬಸ್‌ನಲ್ಲಿ ಪ್ರಯಾಣಿಸುವಾಗ ಗೃಹಿಣಿಯ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 1.65 ಲಕ್ಷ ರೂ. ಕಳವು ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.



ನಂಜನಗೂಡಿನ ಕೆಂಪೇಗೌಡ ಲೇಔಟ್ ನಿವಾಸಿ ಭಾಗ್ಯ ಲಕ್ಷ್ಮಿ(47) ಎಂಬುವರು ತಮ್ಮ ಮಗನಿಗೆ ಕಾಲೇಜು ಶುಲ್ಕ ಪಾವತಿಸುವ ಸಲುವಾಗಿ 1.65 ಲಕ್ಷ ರೂ.ಗಳನ್ನು ತಮ್ಮ ವ್ಯಾನಿಟಿ ಬ್ಯಾಗ್‌ನಲ್ಲಿ ಇಟ್ಟುಕೊಂಡು ಮೈಸೂರಿಗೆ ಹೋಗಲು ಜನವರಿ 23ರಂದು ಸಂಜೆ 6.15ರಲ್ಲಿ ಹುಲ್ಲಹಳ್ಳಿ ಸರ್ಕಲ್ ಬಳಿ ಕೆಎಸ್‌ಆರ್‌ಟಿಸಿ ಬಸ್ (ಕೆಎ 01 ಎಫ್ 0380) ಹತ್ತಿದ್ದಾರೆ. ಈ ಬಸ್ ಕಡಕೊಳ ಬಳಿ ಸಂಚರಿಸುವ ಮಾರ್ಗ ಮಧ್ಯೆ ಅವರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಹಣವನ್ನು ಕಳವು ಮಾಡಲಾಗಿದೆ. ನಂಜನಗೂಡು ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.1.2023 ಭಾನುವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಭರಣಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು–ಲೇಖನ ಡಾ. ಶ್ರೀ ರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆಗಳು–ಕಸ್ತೂರಿ ಶಂಕರ್

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಮಾದಶೆಟ್ಟಿ ಮತ್ತು ತಂಡ, 1.20 ಭಾವಗೀತೆ– ಪಾವನ ಕಾಶಿನಾಥ್, 3.30 ಮಕ್ಕಳ ಮಂಟಪ – ಮುಖಾಮುಖಿ–ಇಂಗ್ಲೀಷ್ ಭಾಷೆ ಕಲಿಕೆ ಮಹತ್ವ ಕುರಿತು ಮಕ್ಕಳಿಗೆ ಉತ್ತರಿಸಿದ್ದಾರೆ ಆರ್. ಸದಾನಂದ, 4.00 ನೆನಪಿನಂಗಳ–ತ.ರಾ.ಸು. ಅವರ ನೆನಪುಗಳು– ಮಾತನಾಡಿರುವವರು ಡಾ.ಹಾ.ಮ.ನಾಯಕ್, 6.50 ಕೃಷಿರಂಗ–"ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 8.00 ಯುವವಾಣಿ, 9.15 ಸಿರಿ ಭೂವಲಯ–ಸಾಹಿತ್ಯ ಲೋಕದ ಅಚ್ಚರಿ–ಮಾತನಾಡುತ್ತಾರೆ, ಡಾ. ಹೆಚ್.ಪಿ. ಮೋಹನ್ ಕುಮಾರ್ ಶಾಸ್ತ್ರಿ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಮಾಯಂಕ್ ರೈನ–ಸಿತಾರ್ ವಾದನ

- **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ಶ್ರೀ ಶ್ಯಾಮಲಾ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಶ್ರೀಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ಕ್ಕೆ ಶ್ರೀ ದಶಶ್ಯಾಮಲಾ ಹೋಮ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮಿಪುರಂ.
- **ಮೈಸೂರು ಜವಳಿ ಮತ್ತು ಸಿದ್ಧ ಉಡುಪುಗಳ ವರ್ತಕರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಸ್ಥಳ: ಶ್ರೀ ಕನ್ಯಾಕಾ ಮಹಲ್, ಅಶೋಕ ರಸ್ತೆ, ಬೆಳಗ್ಗೆ 11ಕ್ಕೆ.
- **ಮೈಸೂರು ನಗರ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸಾಹಿತ್ಯ ಕಲಾಕೂಟ :** ಕಾತ ಚಿಕ್ಕಣ್ಣನವರ 'ಪುರಾಣ ಕನ್ಯೆ ಕಾದಂಬರಿ ಒಂದು ಅವಲೋಕನ, ಸಾಹಿತ್ಯ ಮತ್ತು ಸಮಾಜ–ಸಂವಾದ, ಅಧ್ಯಕ್ಷತೆ: ಡಾ.ಹಿ.ಶಿ.ರಾಮಚಂದ್ರೇಗೌಡ, ಪುರಾಣ ಕನ್ಯೆ ಕುರಿತು–ಡಾ.ಭಾರತಿದೇವಿ, ಡಾ.ತ್ರಿವೇಣಿ, ಸಂವಾದ: ಸಾಹಿತ್ಯ ಮತ್ತು ಸಮಾಜ, ದಿಕ್ಸೂಚಿ: ಸಿ.ಬಸವಲಿಂಗಯ್ಯ, ನಿರ್ವಹಣೆ: ಡಾ.ಉಮಾಶಂಕರ್, ಉಪಸ್ಥಿತರು: ಕಾದಂಬರಿಕಾರ ಕಾತ ಚಿಕ್ಕಣ್ಣ, ಮಡ್ಡೀಕೆರೆ ಗೋಪಾಲ್, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 11ಕ್ಕೆ.
- **ಪ್ರೊ.ಪಿ.ಜಯರಾಮಯ್ಯ ಅಭಿಮಾನಿಗಳ ಬಳಗ:** ಪ್ರೊ.ಪಿ.ಜಯರಾಮಯ್ಯ ಅವರ 88ನೇ ವರ್ಷದ ಹುಟ್ಟುಹಬ್ಬ ಸಾಕ್ಷ್ಯಚಿತ್ರದ ಬಿಡುಗಡೆ, ಅಧ್ಯಕ್ಷತೆ: ನಿವೃತ್ತ ವಿಶೇಷ ಕಾರ್ಯದರ್ಶಿ ಡಾ.ಪಿ.ಬೋರೇಗೌಡ, ಮುಖ್ಯ ಅತಿಥಿಗಳು: ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ, ವಿಶೇಷ ಜಿಲ್ಲಾಧಿಕಾರಿ ಬಾಲಚಂದ್ರ, ಮೈಸೂರು ವಿವಿ ಕುಲಸಚಿವೆ ಶೈಲಜಾ, ಗೌರವ ಅತಿಥಿಗಳು : ಪ್ರೊ.ಎಂ.ಕೃಷ್ಣೇಗೌಡ, ಡಾ.ಎಸ್.ಟಿ. ಪುಟ್ಟರಾಜು, ವಾಣಿಜ್ಯ ತೆರಿಗೆ ಇಲಾಖೆ ಉಪಆಯುಕ್ತ ಕುಮಾರ್, ಹಾಸನ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಟ್ಟರಾಜು, ಸ್ಥಳ : ರಾಣಿ ಬಹದ್ದೂರ್ ಸಭಾ ಭವನ, ಮಧ್ಯಾಹ್ನ 12ಕ್ಕೆ.
- **ನಕ್ಷತ್ರ :** ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ. ಕೆ.ಸಿ. ಬೆಳ್ಳಿಯಪ್ಪ, ಗೌರವ ಅತಿಥಿಗಳು : ಎನ್‌ಐಇ ನಿವೃತ್ತ ಪ್ರಾಧ್ಯಾಪಕ ಡಾ. ಕೆ.ಎಸ್. ಚಂದ್ರಶೇಖರ್, ಅಡ್ವಾನ್ಸ್‌ಡ್ ಇಂಜಿನಿಯರಿಂಗ್ ಗ್ರೂಪ್ ಪ್ರಾಚಾರ್ಯ ಡಾ. ಬಿ.ಪಿ. ಶ್ರೀಕಾಂತ ಗುಪ್ತ, ಸ್ಥಳ: ಮೈಸೂರು ಮೆಡಿಕಲ್ ಕಾಲೇಜು ಸಭಾಂಗಣ, ಜೆ.ಕೆ. ಮೈದಾನ, ಮಧ್ಯಾಹ್ನ 2ಕ್ಕೆ.
- **ಸರ್ಕಾರ್ ಮೆಹಬೂಬ್ ಎ–ಸುಭಾನಿ ಫೌಂಡೇಷನ್ :** ಅಜ್ಮೇರ್ ಷರೀಫ್ ಅವರ 811ನೇ ವಾರ್ಷಿಕ ಗಂಧದ ಉರುಸ್ ಅಂಗವಾಗಿ ಮೆರವಣಿಗೆ, ಅಧ್ಯಕ್ಷತೆ : ಸರ್‌ಖಾಜಿ, ಸ್ಥಳ: ಅಸೀದಿ ಅಜಮ್ ಮರ್ಕಾಜ್ ಅಹಲೆ ಸುನ್ನತೋ ಜಮಾತ್, ಲಷ್ಕರ್ ಮೊಹಲ್ಲಾ, ಮಧ್ಯಾಹ್ನ 2.45ಕ್ಕೆ.
- **ಸಿಲ್ವರ್‌ಫಿಸ್:** ಪುಸ್ತಕ ಬಿಡುಗಡೆ ಸಮಾರಂಭ, ಉದ್ಘಾಟನೆ: ರಂಗಾಯಣ ಮಾಜಿ ನಿರ್ದೇಶಕ ಬಸವಲಿಂಗಯ್ಯ, ಪುಸ್ತಕ ಬಿಡುಗಡೆ : ಲೇಖಕ ಡಾ. ಬಸವರಾಜ ಸಬರದ್, ಉಪಸ್ಥಿತರು : ಸಂಸ್ಕೃತಿ ಚಿಂತಕ ಪ್ರೊ.ಎಂ.ಎಸ್.ಶೇಖರ್, ಡಾ.ವಿಜಯಶ್ರೀ ಸಬರದ, ಕುವೆಂಪು ಅಧ್ಯಯನ ಕೇಂದ್ರದ ಪ್ರೊ. ಎನ್.ಕೆ.ಲೋಲಾಕ್ಷಿ, ವೇದರಾಜ್, ಸ್ಥಳ: ಸಿಲ್ವರ್ ಬುಕ್ಸ್, ಕಾಳಿದಾಸ ರಸ್ತೆ, ಸಂಜೆ 4ಕ್ಕೆ.
- **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಪಂಡಿತ್ ಕಲ್ಯ ಶ್ರೀಕಾಂತಾಚಾರ್ ಅವರಿಂದ ಸುಮಧ್ವ ವಿಜಯ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.
- **ನಕ್ಷತ್ರ ಫೌಂಡೇಷನ್ :** ನಕ್ಷತ್ರ ನಾಟಕೋತ್ಸವ, ನಾಟಕ, ನೃತ್ಯ, ಸಂಗೀತ, ಮೈಸೂರು ಫಿಲಂ ಇನ್ಸ್‌ಟಿಟ್ಯೂಟ್ ವಿದ್ಯಾರ್ಥಿಗಳಿಂದ ಪೊನ್ನಾಚಿ ಪ್ರೌಢಶಾಲೆ ನಾಟಕ ಪ್ರದರ್ಶನ, ಎಸ್.ಆರ್. ಆಕ್ಟಿವಿಟಿ ಸೆಂಟರ್ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ, ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ವಿದ್ಯಾರ್ಥಿಗಳಿಂದ ಜನಪದ ನೃತ್ಯಗಳ ಪ್ರದರ್ಶನ ಹಾಗೂ ಮಿನುಗುವ ನಕ್ಷತ್ರ ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 5.30ಕ್ಕೆ.
- **ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ :** ಪ್ರತಿಭಾ ಪುರಸ್ಕಾರ, ಉದ್ಘಾಟನೆ : ಮೇಯರ್ ಶಿವಕುಮಾರ್, ಅಧ್ಯಕ್ಷತೆ : ಸಂಸ್ಥೆ ಅಧ್ಯಕ್ಷ ಎಸ್. ಆನಂದಮೂರ್ತಿ, ಪ್ರಾಸ್ತಾವಿಕ ನುಡಿ: ಸಂಸ್ಥೆ ಕಾರ್ಯದರ್ಶಿ ಎಂ.ಕೆ. ರೇವಣ್ಣ, ಮುಖ್ಯ ಅತಿಥಿಗಳು : ಪ್ರೊ. ಕೆ. ಕೆಂಪರಾಜ್, ಪ್ರೊ. ರಮೇಶ್, ಶ್ರೀಮತಿ ಪಲ್ಲವಿ ಬೇಗಂ, ಭುವನೇಶ್ವರಿ ಪ್ರಭುಮೂರ್ತಿ, ಶಾರದಮ್ಮ ಈಶ್ವರ್, ಸ್ಥಳ: ಸರ್ಕಾರಿ ಪ್ರೌಢಶಾಲೆ, ಡಾ. ಬಿ.ಆರ್. ಅಂಬೇಡ್ಕರ್ ಪಾರ್ಕ್ ಎದುರು, ಅಶೋಕಪುರಂ, ಸಂಜೆ 6ಕ್ಕೆ.
- **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಪಶ್ಚಿಮ, ಮೈಸೂರು :** ಶ್ರುತಿಮಂಜರಿ ರಜತ ಸಂಭ್ರಮ, 25ನೇ ವಾರ್ಷಿಕ ಸಂಗೀತೋತ್ಸವ, ಬೆಳಗ್ಗೆ 10ಕ್ಕೆ ಶ್ರೀ ಪುರಂದರ ಹಾಗೂ ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವ, ನಾಡಿನ ಪ್ರಸಿದ್ಧ ವಿದ್ವಾಂಸರು ಹಾಗೂ ವಿದುಷಿಯವರಿಂದ ಗೋಷ್ಠಿ ಗಾಯನ, ಸಂಜೆ 6ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ ಮತ್ತು ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ವಾದ್ಯ ಸಂಗೀತ–ಲಯ–ಲಾವಣ್ಯ, ಸ್ಥಳ:ರೋಟರಿ ಪಶ್ಚಿಮ ಸಭಾಂಗಣ, ಸರಸ್ವತಿಪುರಂ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ನಿರಂತರ ಫೌಂಡೇಷನ್ :** ನಿರಂತರ ರಂಗ ಉತ್ಸವದ ಸಮಾರೋಪ ಸಮಾರಂಭ, ಉಪಸ್ಥಿತರು : ಕವಿ ಆರಿಫ್ ರಾಜಾ, ಬಿಬಿಎಂಪಿ ವಿಶೇಷ ಆಯುಕ್ತ ಜಯರಾಮ್ ರಾಯಪುರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಸುದರ್ಶನ್, ನಿರಂತರದ ಶ್ರೀನಿವಾಸ್ ಪಾಲಹಳ್ಳಿ, ಬೆಂಗಳೂರಿನ ಜಂಗಮ ಕಲೆಕ್ಟಿವ್ ಅವರಿಂದ ದಕ್ಲಕಥಾ ದೇವಿಕಾವ್ಯ ನಾಟಕ ಪ್ರದರ್ಶನ, ರಚನೆ ಮತ್ತು ನಿರ್ದೇಶನ : ಕೆ.ಪಿ. ಲಕ್ಷ್ಮಣ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.
- **ಧಾರ್ಮಿಕ ದತ್ತಿ ಇಲಾಖೆ, ಮೈಸೂರು ಅರಮನೆ ಕೋಟೆಯಲ್ಲಿರುವ ಶ್ರೀ ತ್ರಿಣೇಶ್ವರಸ್ವಾಮಿ ದೇವಸ್ಥಾನ :** ಬ್ರಹ್ಮೋತ್ಸವ, ರಾತ್ರಿ 7ಕ್ಕೆ ಮೂಷಕ ವಾಹನೋತ್ಸವ ನಂತರ ಅಂಕುರಾರ್ಪಣ, ಸ್ಥಳ: ದೇವಸ್ಥಾನ, ಮೈಸೂರು ಅರಮನೆ ಆವರಣ.

2 BHK MUDA APPROVED 30x40
NEW HOUSE FOR SALE
NEAR ST. JOSEPH SCHOOL, ILWALA, MYSORE.
8217851695


Hi! TAXI
ONLY ONE WAY **TAXI CHARGE**
MYSORE to BANGALORE
City drop or Pick up
BANGALORE to MYSORE Airport drop or Pick up
Shakthi Nagar MYSURU
9611177599


Do you have Drinking Problem ?
For Free Help
Alcoholics Anonymous [A.A]
SUNDAY: 11AM to 12 Noon
St. Mary's School
Helpline: 9008948589

MUDA APPROVED SITE FOR SALE
20'x30'
attached to Panchacharya Layout & Vijaynagar 4th Stage, Mysore.
Call: 96204-61052

ಬೇಕಾಗಿದ್ದಾರೆ
ಮೈಸೂರು ನಗರ, ಸಿದ್ಧಾರ್ಥ ಬಡಾವಣೆಯಿಂದ ಬನ್ನೂರು ರಸ್ತೆಯಲ್ಲಿರುವ ಹೆಚ್.ಪಿ.ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ನಿರ್ವಹಿಸಲು ಆಸಕ್ತಿ ಇರುವ ಯುವಕರು ಬೇಕಾಗಿದ್ದಾರೆ.
ಸಂಪರ್ಕಿಸಿ 9611022435 9886209339

ವಧು ಬೇಕಾಗಿದೆ
ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವ ತಿಂಗಳಿಗೆ 85,000 ವರಮಾನವಿರುವ 34 ವರ್ಷದ ವರನಿಗೆ (ಮೊದಲ ಮದುವೆ) ಸುಂದರ ವಧು ಬೇಕಾಗಿದೆ. ಜಾತಿ ಅಭ್ಯಂತರವಿಲ್ಲ. ಸಂಪರ್ಕಿಸಿ:
9945418652

ಒಂದನೇ ವರ್ಷದ ಸವಿನೆನಪು



ರಾಮೇಗೌಡ ಉ॥ ಕರೀಗೌಡರು
ನಿಧನ: 09.02.2022 (ಜಿಲ್ಲಾ ಪತ್ರ ಬರಹಗಾರರು)
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವ
ದುಃಖತಪ್ತರು: ಪತ್ನಿ ಶ್ರೀಮತಿ ಪುಟ್ಟಮ್ಮ ಮಕ್ಕಳಾದ ಪುಟ್ಟರಾಜು, ಪಾಪಣ್ಣ, ಗಿರಿಯಣ್ಣ, ಆರ್.ಪುಟ್ಟಣ್ಣ, ಹೆಣ್ಣುಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು, ಮೇಗಳಾಪುರ

ಮನೆ ಬಾಡಿಗೆಗೆ (10K)
2BHK ನ್ಯಾಯಾಂಗ ಬಡಾವಣೆ, (ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹಿಂಭಾಗ) (ಸ್ವತಂತ್ರ) ಮೊದಲ ಮಹಡಿ, ಕಾರ್ ಪಾರ್ಕಿಂಗ್ ಬೋರ್‌ವೆಲ್, ಸೋಲಾರ್, ಸಿಟ್ ಔಟ್ ಇತ್ಯಾದಿ. (12 ಚದರ)
9945810480

SITE FOR SALE
30x61 Near Christ School Rajarajeshwari Nagara Mysore, contact
7795830863
Interested people Contact immediately

HOUSE FOR SALE
30x40 Duplex. 20x30 Duplex, Vijayanagar 4th Stage, Mysore
8147929991


ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

13ನೇ ವರ್ಷದ ಸವಿನೆನಪು



N.P. ಸಿದ್ದೇಗೌಡ್ರು
ಯರಗನಹಳ್ಳಿ
ನಿಧನ : 29.01.2010
ಸೂರ್ಯನಂತೆ ಮಿಂಚಿ ಹೋದ ನೀವು ಇಂದಿಗೆ ನಮ್ಮನ್ನಗಲಿ 13 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು
ಪತ್ನಿ N.T. ಶೈಲಜಾ, ಮಕ್ಕಳು: ತೇಜಸ್, ಜಗದೀಶ್ ಮತ್ತು ಕುಟುಂಬವರ್ಗದವರು

ನಿಧನ



ಶ್ರೀಮತಿ ಮುದ್ದಮ್ಮನವರು (ಮೂಗಾಟಿ)
(ಬಸಪ್ಪನವರ ಧರ್ಮಪತ್ನಿ)
ಇವರು ದಿನಾಂಕ: 28.01.2023, ಕೆ.ಜಿ ಕೊಪ್ಪಲು, ಮೈಸೂರು ಇಲ್ಲಿ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ದಿನಾಂಕ : 29-1-2023ರಂದು 12ಗಂಟೆಗೆ ಕಾವೇರಿ ಸ್ಕೂಲ್ ಪಕ್ಕದ ಕೆ.ಜಿ ಕೊಪ್ಪಲ್ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರವನ್ನು ನೆರವೇರಿಸಲಾಗುವುದು
ದುಃಖತಪ್ತರು: ಕುಟುಂಬವರ್ಗದವರು

3ನೇ ವರ್ಷದ ಸವಿನೆನಪು



ವೈ.ಆರ್.ದಿವ್ಯಾ
ನಿಧನ:29.01.2020
ನೀನು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ಸದಾ ನಿನ್ನ ನೆನಪಿನಲ್ಲಿರುವ
ದುಃಖತಪ್ತರು: ತಂದೆ ರಂಗಸ್ವಾಮಿ, ತಾಯಿ ನಾಗರತ್ನ, ಪತಿ: ಚಂದೇಗೌಡ, ಮಗಳು ಗಾನ್ಯ, ತಮ್ಮ ದೊಡ್ಡಸ್ವಾಮಿ ಹಾಗೂ ಕುಟುಂಬ ವರ್ಗದವರು ಮತ್ತು ಬಂಧು ಮಿತ್ರರು, ಭುಗತಗಳ್ಳಿ

ಮನೆ ಭೋಗ್ಯಕ್ಕೆ ಇದೆ
30x40 ಕಾರ್ನರ್ ಮನೆ, 4 ಬೆಡ್ ರೂಂ ಹೊಂದಿದ ಡೂಪ್ಲೆಕ್ಸ್, ರಿಂಗ್ ರಸ್ತೆ ಪಕ್ಕ, ಸಿದ್ದಲಿಂಗೇಶ್ವರ ಬಡಾವಣೆ 2ನೇ ಹಂತ, ಜೆ.ಪಿ.ನಗರ, ಮೈಸೂರು. ಸಂಪರ್ಕಿಸಿ:
9900565459

ಬಾಡಿಗೆಗೆ ಇದೆ
30x40, 2BHK
ಸರಸ್ವತಿಪುರಂ, ಟಿ.ಟಿ.ಎಲ್ ಕಾಲೇಜು ಹತ್ತಿರ
9964100927 / 9141720869

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಕರ್ನಾಟಕ ಸರ್ಕಾರ
ತೋಟಗಾರಿಕೆ ಇಲಾಖೆ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ),
ಕರ್ಜನ್ ಪಾರ್ಕ್, ಮೈಸೂರು–570001
Telephone No:0821-2977572 E-mail:sadhssmysore@gmail.com
ಸಂಖ್ಯೆ: ಹಿಸತೋನಿ/ರಾವ/ಮೈ/ತಾಸ//2022–23 ದಿನಾಂಕ:25.01.2023

ಇ ಹರಾಜು/ ಟೆಂಡರ್– ಯಾ–ಬಹಿರಂಗ– ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಮೈಸೂರು ಜಿಲ್ಲೆಯ ಕೆ.ಎಸ್.ಹೆಚ್.ಡಿ.ಎ. ವ್ಯಾಪ್ತಿಯ ತೋಟಗಾರಿಕೆ ಕ್ಷೇತ್ರಗಳಲ್ಲಿನ ಫಸಲುಗಳನ್ನು **ದಿನಾಂಕ:01.01.2023 ರಿಂದ 31.12.2023** ರವರೆಗೆ ತೆಂಗು, ಮಾವು, ಗೋಡಂಬಿ, ಹಲಸು, ಕಮರಾಕ್ಷಿ ಮತ್ತು ಹುಣಸೆ ಹಾಗೂ 1ನೇ ಅವಧಿಯ ಸಪೋಟ ಮತ್ತು ಸೀಬೆ ಫಸಲುಗಳನ್ನು ಅವಧಿಯವರೆಗೆ ಇ ಹರಾಜು/ಟೆಂಡರ್–ಯಾ–ಬಹಿರಂಗ–ಹರಾಜು ಪ್ರಕಟಣೆ ಮೂಲಕ ವಿಲೇವಾರಿ ಮಾಡಲು ಕ್ರಮ ಕೈಗೊಂಡಿದ್ದು, ಇಚ್ಛೆಯುಳ್ಳವರು ಟೆಂಡರ್ ನಲ್ಲಿ ಭಾಗವಹಿಸಿ ಫಸಲನ್ನು ಪಡೆಯಬಹುದಾಗಿರುತ್ತದೆ. ಈ ಸಂಬಂಧ **ದಿನಾಂಕ: 27.01.2023 ರಿಂದ 28.02.2023** ರವರೆಗೆ ವಿವಿಧ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುವುದು. ಹೆಚ್ಚಿನ ವಿವರಗಳಿಗೆ ಈ ಕೆಳಕಂಡ ಸಹಿದಾರರನ್ನು ಸಂಪರ್ಕಿಸಲು ಕೋರಿದೆ.

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ರಾಜ್ಯವಲಯ, ಮೈಸೂರು.
DIPR/DDMYS/KSMCA/930/2022-23

G20 ಭಾರತ 2023 INDIA
ಸ್ವಾತಂತ್ರ್ಯದ ಅಮೃತಮಹೋತ್ಸವ
ನವ ಭಾರತಕ್ಕಾಗಿ ನವ ಕರ್ನಾಟಕ



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಡಾ. ವಿಷ್ಣುವರ್ಧನ್ ಸ್ಮಾರಕ ಲೋಕಾರ್ಪಣೆ

29ನೇ ಜನವರಿ 2023, ಭಾನುವಾರ, ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಹಾಲಾಳು ಗ್ರಾಮ, ಉದ್ಬೂರು ಕ್ರಾಸ್
ಹೆಚ್.ಡಿ. ಕೋಟೆ ರಸ್ತೆ, ಮೈಸೂರು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು



ಸಾಹಸಸಿಂಹ, ಅಭಿನಯ ಭಾರ್ಗವ ಎಂದೇ ಪ್ರಖ್ಯಾತರಾಗಿದ್ದ ಕನ್ನಡಿಗರ ಅಚ್ಚುಮೆಚ್ಚಿನ ಚಲನಚಿತ್ರ ನಟ ದಿವಂಗತ ಡಾ. ವಿಷ್ಣುವರ್ಧನ್ ಅವರ ಸ್ಮಾರಕವನ್ನು ಮೈಸೂರಿನ ಹೆಚ್.ಡಿ. ಕೋಟೆ ರಸ್ತೆಯಲ್ಲಿರುವ ಉದ್ಬೂರು ಬಳಿಯ ಹಾಲಾಳು ಗ್ರಾಮದಲ್ಲಿ ನಿರ್ಮಿಸಲಾಗಿದೆ.

- ಸ್ಮಾರಕ ಕಟ್ಟಡದ ವಿಸ್ತೀರ್ಣ: 27 ಸಾವಿರ ಚದರಡಿ
- ಒಟ್ಟು ಮೊತ್ತ: ರೂ.11.00 ಕೋಟಿ
- 5 ಎಕರೆಗಳ ವಿಶಾಲ ಜಾಗ
- ಒಟ್ಟು ಮಹಡಿಗಳು: ತಳಮಹಡಿ, ನೆಲಮಹಡಿ
- 700 ಫೋಟೋಗಳ ಗ್ಯಾಲರಿ
- ಡಾ. ವಿಷ್ಣುವರ್ಧನ್ ಅವರ 6.5 ಅಡಿ ಎತ್ತರದ ಪ್ರತಿಮೆ
- ನೀರಿನ ಕಾರಂಜಿ
- 240 ಆಸನಗಳ ಸುಸಜ್ಜಿತ ಸಭಾಂಗಣ
- ವಿಶಾಲವಾದ ಉದ್ಯಾನ
- ಭೂದೃಶ್ಯ
- ಕಲಿಕಾ ಕೇಂದ್ರ
- ತರಬೇತಿ ಕೊಠಡಿ







"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಉದ್ಘಾಟನೆ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಉಪಸ್ಥಿತರು
ಶ್ರೀ ಎಸ್.ಟಿ. ಸೋಮಶೇಖರ್
ಮಾನ್ಯ ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು

ಡಾ. ಭಾರತಿ ವಿಷ್ಣುವರ್ಧನ್
ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಪ್ರಖ್ಯಾತ ಬಹುಭಾಷಾ ಚಲನಚಿತ್ರ ನಟಿ

ಶ್ರೀ ಅನಿರುದ್ಧ ಜತಕರ
ಪ್ರಖ್ಯಾತ ನಟ, ಗಾಯಕ, ಲೇಖಕ, ನಿರ್ದೇಶಕ ಹಾಗೂ ಸಾಮಾಜಿಕ ಕಾರ್ಯಕರ್ತ

ವಿಶೇಷ ಆಹ್ವಾನಿತರು
ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಶ್ರೀ ಜಿ.ಟಿ. ದೇವೇಗೌಡ
ಮಾನ್ಯ ಶಾಸಕರು (ಚಾಮುಂಡೇಶ್ವರಿ ಕ್ಷೇತ್ರ)

ಮುಖ್ಯ ಅತಿಥಿಗಳು
ಶ್ರೀ ಪ್ರತಾಪ್ ಸಿಂಹ
ಮಾನ್ಯ ಲೋಕಸಭಾ ಸದಸ್ಯರು, ಮೈಸೂರು ಕ್ಷೇತ್ರ

ಶ್ರೀ ವಿ. ಶ್ರೀನಿವಾಸ್ ಪ್ರಸಾದ್
ಮಾನ್ಯ ಲೋಕಸಭಾ ಸದಸ್ಯರು, ಚಾಮರಾಜನಗರ ಕ್ಷೇತ್ರ

ಶ್ರೀಮತಿ ಸುಮಲತಾ ಅಂಬರೀಷ್
ಮಾನ್ಯ ಲೋಕಸಭಾ ಸದಸ್ಯರು, ಮಂಡ್ಯ ಕ್ಷೇತ್ರ

ಜಿಲ್ಲೆಯ ಎಲ್ಲಾ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಸ್ಥಳೀಯ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳು, ಗಣ್ಯರು, ಅಭಿಮಾನಿ ಬಂಧುಗಳು ಹಾಗೂ ಸರ್ವರಿಗೂ ಸುಸ್ವಾಗತ

ಡಾ. ವಿಷ್ಣುವರ್ಧನ್ ಪ್ರತಿಷ್ಠಾನ (ರಿ)



ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಕ್ಕರೆ ಅದೇ ಸ್ವರ್ಗ

ಟೀಚರ್ : ಯಾಕೆ ಲೇಟ್?
ಸುಬ್ಬ : ಕೋಳಿ ಕೂಗೋದು ಲೇಟಾಯ್ತು
ಟೀಚರ್ : ನಮ್ಮನೆ ಹತ್ತಿರ ಕೋಳಿ 5 ಗಂಟೆಗೆ ಕೂಗುತ್ತೆ.
ಸುಬ್ಬ : ಆ ಕೋಳಿ ನಮ್ಮ ಮನೆ ಹತ್ತಿರ ಬರೋಕೆ 8 ಗಂಟೆ ಆಗುತ್ತೆ ಮೇಡಂ

ಮೈಸೂರು ಮಿತ್ರ
ಭಾನುವಾರ, 29 ಜನವರಿ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನತದೃಷ್ಟನಾದವನ ಮುಂದೆ ನಿನ್ನ ಅದೃಷ್ಟದ ಬಗ್ಗೆ ಕೊಚ್ಚಿಕೊಳ್ಳಬೇಡ –ಫ್ಲೂಟಾರ್ಕ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅರಗು ಬಂಗಾರ ತಿಂತು / ಕೊರಗು ತನ್ನ ತಿಂತು

ನಿಮ್ಮ ಪತ್ರಗಳು

ಮನೋಜ್ಞ ಅಭಿನಯದ ಅಭಿನೇತ್ರಿ ಜಮುನಾ

ಮಾನ್ಯರೆ,

ಇತ್ತೀಚೆಗೆ ತಮ್ಮ 86 ನೇ ವಯಸ್ಸಿನಲ್ಲಿ ನಿಧನ ಹೊಂದಿರುವ ಹಿರಿಯ ನಟಿ ಹಾಗೂ ಮಾಜಿ ಸಂಸದೆ ಶ್ರೀಮತಿ ಜಮುನಾರವರ ಸಾವು ನೋವಿನ ಸಂಗತಿ. ಬಹು ಭಾಷಾ ತಾರೆಯಾಗಿದ್ದ ಶ್ರೀಮತಿ ಜಮುನ, ತಮಿಳು, ತೆಲುಗು, ಕನ್ನಡ ಹಿಂದಿ ಸೇರಿದಂತೆ ಹಲವಾರು ಭಾಷೆಗಳ ಚಿತ್ರಗಳಲ್ಲಿ ನಾಯಕ ನಟಿಯಾಗಿ ನಟಿಸಿ ಜನಪ್ರಿಯತೆಯ ಉತ್ತುಂಗಕ್ಕೆ ಏರಿದ್ದರು. ವಿಶೇಷವಾಗಿ ತೆಲುಗು ಚಿತ್ರರಂಗದಲ್ಲಿ ಅಪಾರವಾದ ಜನಮನ್ನಣೆ ಗಳಿಸಿದ್ದರು. ಭಾರತೀಯ ಚಿತ್ರರಂಗದ ದಿಗ್ಗಜರಾದ ಡಾ.ರಾಜಕುಮಾರ್, ಎನ್.ಟಿ.ರಾಮರಾವ್, ಎಂ.ಜಿ.ರಾಮಚಂದ್ರನ್, ಶಿವಾಜಿ ಗಣೇಶನ್, ಮುಂತಾದ ಸುಪ್ರಸಿದ್ಧ ನಾಯಕ ನಟರಿಗೆ ನಾಯಕಿಯಾಗಿ ನಟಿಸಿದ ಹೆಗ್ಗಳಿಕೆ ಅವರದು. ಜಮುನಾ ಅಂದಾಕ್ಷಣ ಕನ್ನಡದ ಸುಪ್ರಸಿದ್ಧ ನಾಯಕ ನಟ ಡಾ.ರಾಜಕುಮಾರ್ ನಟಿಸಿರುವ, ಚಿತ್ರಬ್ರಹ್ಮ ದಿವಂಗತ ಎಸ್. ಆರ್.ಪುಟ್ಟಣ್ಣ ಕಣಗಾಲ್ ನಿರ್ದೇಶನದ "ಸಾಕ್ಷಾತ್ಕಾರ" ಕಣ್ಮುಂದೆ ಬಂದು ನಿಲ್ಲುತ್ತದೆ. ಕಣಗಾಲ್ ಪ್ರಭಾಕರ ಶಾಸ್ತ್ರಿಗಳು ರಚಿಸಿರುವ ಈ ಚಿತ್ರದ ಎಲ್ಲಾ ಹಾಡುಗಳು ಪಿ.ಬಿ.ಶ್ರೀನಿವಾಸ್ ಮತ್ತು ಪಿ.ಸುಶೀಲಾ ಅವರ ಮಧುರ ಧ್ವನಿಯಲ್ಲಿ ಅಮರತ್ವ ಪಡೆದುಕೊಂಡಿವೆ. ಈ ಚಿತ್ರದಲ್ಲಿ ಡಾ.ರಾಜಕುಮಾರ್ ಅವರಿಗೆ ಸರಿಸಾಟಿಯಾಗಿ ಪ್ರಾರಂಭದಿಂದ ಅಂತ್ಯದವರೆಗೂ ಜಮುನಾರವರು ಅತ್ಯಂತ ಮನೋಜ್ಞ ಮತ್ತು ಪ್ರಬುದ್ಧವಾಗಿ ಅಭಿನಯಿಸಿದ್ದಾರೆ. ಅದೇ ರೀತಿ ಉದಯಕುಮಾರ್ ನಾಯಕತ್ವದ "ರತ್ನಗಿರಿ ರಹಸ್ಯ" ಚಿತ್ರದಲ್ಲೂ ಅವರು ನಾಯಕಿಯಾಗಿ ಅಭಿನಯಿಸಿದ್ದಾರೆ. ಈ ಚಿತ್ರದ "ಅಮರ ಮಧುರ ಪ್ರೇಮ ನೀ ಬಾ ಬೇಗ ಚಂದಮಾಮ ಬಾ ಬೇಗ ಚಂದ ಮಾಮ" ಎಂಬ ಕಣಗಾಲ್ ಪ್ರಭಾಕರ ಶಾಸ್ತ್ರಿ ವಿರಚಿತ ಗೀತೆ ಪಿ.ಸುಶೀಲಾರವರ ಸುಮಧುರ ಧ್ವನಿಯಲ್ಲಿ ಹಾಗೂ ಟಿ.ಜಿ.ಲಿಂಗಪ್ಪನವರ ಸಂಗೀತ ನಿರ್ದೇಶನದಲ್ಲಿ ಕೇಳಿದಷ್ಟೂ ಇನ್ನೂ ಕೇಳಬೇಕೆಂಬ ತವಕ ಹುಟ್ಟಿಸಿ ಇಂದಿಗೂ ಕೂಡ ತನ್ನ ಜನಪ್ರಿಯತೆ ಉಳಿಸಿಕೊಂಡಿದೆ. "ಭೂ ಕೈಲಾಸ" ಎಂಬ 50ರ ದಶಕದ ಮತ್ತೊಂದು ಚಿತ್ರದಲ್ಲಿ ರಾವಣನ ಪತ್ನಿ ಮಂಡೋದರಿಯಾಗಿ ಅಭಿನಯಿಸಿರುವ ಜಮುನಾ, 50,60 ಮತ್ತ 70ರ ದಶಕಗಳಲ್ಲಿ ನಾಯಕಿಯಾಗಿ ವಿವಿಧ ಭಾಷೆಗಳ ಹಲವಾರು ಯಶಸ್ವಿ ಚಿತ್ರಗಳಲ್ಲಿ ಅದರಲ್ಲೂ ಪ್ರಮುಖವಾಗಿ ಪೌರಾಣಿಕ ಚಿತ್ರಗಳಲ್ಲಿ ಅಭಿನಯಿಸುವ ಮೂಲಕ ಭಾರತೀಯ ಚಿತ್ರರಂಗಕ್ಕೆ ಅನುಪಮ ಸೇವೆ ಸಲ್ಲಿಸಿದ್ದಾರೆ. 1953ರಲ್ಲಿ ತೆಲುಗು ಚಿತ್ರ "ಪುಟ್ಟಿಲು" ಮೂಲಕ ಚಿತ್ರರಂಗ ಪ್ರವೇಶಿಸಿದ ಜಮುನಾ, 1955ರಲ್ಲಿ ಬಿಡುಗಡೆಯಾದ "ಮಿಸ್ಸಮ್ಮ" ಚಿತ್ರದ ಮೂಲಕ ಪ್ರೇಕ್ಷಕರ ಗಮನ ಸೆಳೆದರು. ವಿವಿಧ ಭಾಷೆಗಳ ಸುಮಾರು 198 ಚಿತ್ರಗಳಲ್ಲಿ ಅಭಿನಯಿಸಿರುವ, ಜಮುನಾ ಕೆಲವು ವರ್ಷಗಳ ಕಾಲ ರಾಜಕೀಯದಲ್ಲೂ ಸಕ್ರಿಯರಾಗಿ 9ನೇ ಲೋಕಸಭೆಯ ಸದಸ್ಯೆಯಾಗಿದ್ದರು (1989–91). ಎನ್ ಟಿ ರಾಮರಾವ್ ಅವರ ರಾಷ್ಟ್ರೀಯ ಪ್ರಶಸ್ತಿ, ಬಿ.ಸರೋಜಾದೇವಿ ಪ್ರಶಸ್ತಿ ಸೇರಿದಂತೆ ನೂರಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುವ ಜಮುನಾರವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ನಗರ ಪ್ರದೇಶದಲ್ಲಿ ಗಲ್ಲಿ ಗಲ್ಲಿಯಲ್ಲಿರುವ ಆಸ್ಪತ್ರೆ ಸೌಲಭ್ಯ ಗ್ರಾಮೀಣ ಪ್ರದೇಶದಲ್ಲಿ ಇಲ್ಲ ಏಕೆ?

ಮಾನ್ಯರೆ,

ನಗರ ಪ್ರದೇಶದಲ್ಲಿ ಗಲಿ ಗಲ್ಲಿಯಲ್ಲಿರುವ ವೈದ್ಯಕೀಯ ಆಸ್ಪತ್ರೆ ಸೌಲಭ್ಯ ಗ್ರಾಮೀಣ ಪದೇಶದ ಹಳ್ಳಿಗಳಲ್ಲಿ ಇಲ್ಲ ಏಕೆ? ರಾಷ್ಟ್ರದ ಜನಸಂಖ್ಯೆಯ ಗಮನಾರ್ಹ ಅಂಶವೆಂದರೆ ಹೆಚ್ಚಾಗಿ ಹಳ್ಳಿಯಲ್ಲಿ ವಾಸಿಸುವ ದೇಶವಾಗಿದೆ.

ಜೀವನದಲ್ಲಿ ಆರೋಗ್ಯವೇ ಸಂಪತ್ತು ಎಂಬುದು ಬಹಳ ಸತ್ಯ. ಯಾವುದೇ ಕೆಟ್ಟ ಅಥವಾ ಒಳ್ಳೆಯ ಸಂದರ್ಭಗಳಲ್ಲಿ ನಮ್ಮೊಂದಿಗೆ ಉಳಿಯುವುದು ನಮ್ಮ ಉತ್ತಮ ಆರೋಗ್ಯ ಮಾತ್ರ. ಆರೋಗ್ಯ ರಕ್ಷಣೆ ಶ್ರೀಮಂತ ಜನರಿಗೆ ಮಾತ್ರವಲ್ಲ, ಅದು ಪ್ರತಿಯೊಬ್ಬ ವ್ಯಕ್ತಿಯ ಹಕ್ಕು. ಗ್ರಾಮೀಣ ಪ್ರದೇಶದಲ್ಲಿ ಸೌಲಭ್ಯಗಳ ಕೊರತೆ ಮತ್ತು ಅಸಮರ್ಪಕ ನಿರ್ವಹಣೆಯಿಂದ ಹಳ್ಳಿಗಳಲ್ಲಿ ವಾಸಿಸುವ ಜನರು ವಿವಿಧ ದೀರ್ಘಕಾಲದ ಕಾಯಿಲೆಗಳಿಂದ ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಆದರೆ ನಗರ ಪ್ರದೇಶಗಳಲ್ಲಿ ನಾವು ನೋಡುವುದಾದರೆ ಒಂದೇ ಬೀದಿಯಲ್ಲಿ ಐದರಿಂದ ಆರು ಆಸ್ಪತ್ರೆ, ವಿವಿಧ ವೈದ್ಯರು ಸೇವೆ ನೀಡುತ್ತಾರೆ. ಆದರೆ ಗ್ರಾಮದ ಹಳ್ಳಿಯಲ್ಲಿ ಈ ಸೌಲಭ್ಯ ಇರುವುದಿಲ್ಲ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿ ಅಥವಾ ನಗರ ಪ್ರದೇಶಕ್ಕೆ ಜನರು ಬಂದು ಚಿಕಿತ್ಸೆ ಪಡೆಯು2ವ ಸಂದರ್ಭ ಕೆಲವು ಕಡೆ ಇದೆ. ತುರ್ತು ಪರಿಸ್ಥಿತಿಯಲ್ಲಿ ಸರಿಯಾದ ಚಿಕಿತ್ಸೆ ಪಡೆಯದೇ ಜನರ ಪ್ರಾಣಪಕ್ಷಿ ಹಾರಿಹೋಗಿರುವ ಉದಾಹರಣೆಗಳಿವೆ. ಗ್ರಾಮ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯಗಳು ಶೋಚನೀಯ ಪರಿಸ್ಥಿತಿ ಇದೆ. ಗುಣಮಟ್ಟದ ಆರೋಗ್ಯ ಸೇವೆಗಳು ಪ್ರತಿ ಗ್ರಾಮವನ್ನು ತಲುಪಬೇಕು ಮತ್ತು ಆರ್ಥಿಕ ಸ್ಥಿತಿಯನ್ನು ಲೆಕ್ಕಿಸದೆ ಪ್ರತಿಯೊಬ್ಬರೂ ಈ ಪ್ರಯೋಜನಗಳನ್ನು ಪಡೆಯಬೇಕು. ಭಾರತದ ಗ್ರಾಮೀಣ ಪ್ರದೇಶಗಳಿಗೆ ಉತ್ತಮ ಗುಣಮಟ್ಟದ–ಆಧಾರಿತ ಆರೋಗ್ಯ ಸೌಲಭ್ಯಗಳು ತಲುಪ ಬೇಕು ಎಂದು ಖಚಿತಪಡಿಸಿಕೊಳ್ಳಲು ಹೊಸ ವಿಧಾನಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸುವುದು ತುರ್ತು ಅಗತ್ಯವಾಗಿದೆ. ದೇಶದ ಗ್ರಾಮೀಣ ಭಾಗಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕೊರತೆಯಿದೆ. ಆದರೆ ಕೆಲವೊಂದು ಸ್ವಯಂ ಸೇವಾ ಸಂಸ್ಥೆ, ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸುವ ಮೂಲಕ ಸೇವೆಯನ್ನು ಸಲ್ಲಿಸುತ್ತಿವೆ. ಅವರ ಈ ಕಾರ್ಯ ಶ್ಲಾಘನೀಯ. ಅವರಿಗೊಂದು ಸಲಾಂ. ಸರ್ಕಾರವು ಗ್ರಾಮ ಆಸ್ಪತ್ರೆಗಳು, ಸಂಚಾಲಿತ ಸಂಚಾರಿ ಆರೋಗ್ಯ ಸೇವೆಯನ್ನು ಅವಕಾಶ ವಂಚಿತ, ಆರೋಗ್ಯ ಸೇವಾ ಸೌಲಭ್ಯವಿಲ್ಲದ ಹಳ್ಳಿಗಳಲ್ಲಿ ಸೇವೆ ಒದಗಿಸಿದರೆ ಜನರಿಗೆ ಅನುಕೂಲವಾಗುತ್ತದೆ. ಉತ್ತಮ ಗುಣಮಟ್ಟದ–ಆಧಾರಿತ ಆರೋಗ್ಯ ಸೌಲಭ್ಯಗಳು ತಲುಪಬೇಕು ಎಂದು ಖಚಿತಪಡಿಸಿಕೊಳ್ಳಲು ಹೊಸ ವಿಧಾನಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸುವುದು ಈ ಸಮಯದ ತುರ್ತು ಅಗತ್ಯವಾಗಿದೆ.

– ಗೋವಿತ್ ಕಿರಣ್, ಮೈಸೂರು

ನಿರ್ಗಮನ

ಮಾನ್ಯರೆ,

ಕದನಗಳ ಕಲಿ ಎನ್ನಬಹುದಾದ ದಿವಂಗತ ಪ. ಮಲ್ಲೇಶ್ ಮತ್ತು ನಾನು ಮೂರು ವರ್ಷ ಸಹಪಾಠಿಗಳಾಗಿದ್ದೆವು. (ಮಹಾರಾಜ ಕಾಲೇಜು ಮತ್ತು ಮಾನಸಗಂಗೋತ್ರಿ) ಎಂಬುದು ಬಹಳ ಜನಕ್ಕೆ ತಿಳಿಯದು?

'ದಾಕ್ಷಿಣ್ಯಪರರಲ್ಲದ, 'ನ್ಯಾಯನಿಷ್ಠುರಿ' ಮಲ್ಲೇಶರ ವರ್ತನೆ ಒಮ್ಮೊಮ್ಮೆ ಅಹಂಕಾರದಂತೆ ಭಾಸವಾಗುತ್ತಿತ್ತು. ಅಹಂಕಾರ, ನಿಜ; ಆದರೆ ದುರಹಂಕಾರವಲ್ಲ!

ಸರಿಯಾಗಿ 12 ವರ್ಷಗಳ ಹಿಂದೆ (ಬಹಿರಂಗಕ್ಕೆ ಸಂಬಂಧಿಸಿದಂತೆ) ಅವರನ್ನೊಮ್ಮೆ ಕೇಳಿದೆ : "ಹಿಂದಿನಂತೆಯೇ ಇಂದಿಗೂ ಬದಲಾಗದೆ ಉಳಿದ್ದೀರಲ್ಲ?" ಎಂದು. "ಎಂದರೆ, ನಾನು ಬೆಳೆದೇ ಇಲ್ಲ ಎಂದು ಅರ್ಥವೆ?" ಎಂದು ನಕ್ಕರು. (ಇದುವರೆಗೂ ಹಾಗೆಯೇ ಇದ್ದರು). ಏನೇ ಇರಲಿ, ಮಲ್ಲೇಶರ ನಿರ್ಗಮನದಿಂದ ನಮ್ಮ ನಡುವೆ ಒಂದು ಕುಳಿ (lacuna) ನಿರ್ಮಿತವಾಗಿದೆ, ನಿಸ್ಸಂದೇಹವಾಗಿ!

ಎರಡು ವರ್ಗ :

ದೇಶದಲ್ಲಿ ಮುಖ್ಯವಾಗಿ ಎರಡು ವರ್ಗಗಳು; ಉಳ್ಳವರು, ಉಳುವವರು; ಉಳ್ಳವರೆ ಎಲ್ಲವನ್ನೂ 'ಗುಳುಂ' ಮಾಡಿದ ಬಳಿಕ, ಉಳುವವರಿಗೆ ಉಳಿಯುವುದೇನು? ಎಂದು?

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಭಾರತದೊಡನೆ ಚೀನಾ ಸ್ನೇಹ ಹಸ್ತ...!

ಏಷ್ಯಾದ ಎರಡು ಬೃಹತ್ ರಾಷ್ಟ್ರಗಳಾದ ಭಾರತ–ಚೀನಾ ನಡುವಿನ ಸಂಬಂಧಗಳಲ್ಲಿ ಗಡಿ ಘರ್ಷಣೆಗಳ ನಂತರ ಬಿರುಕು ಮೂಡಿದೆ. ಎರಡು ದೇಶಗಳ ನಡುವೆ ಚೀನಾ ಅತಿರೇಕದಿಂದಾಗಿ ಉದ್ಭವಿಸಿರುವ ಗಡಿ ಬಿಕ್ಕಟ್ಟು, ಅತಿಕ್ರಮಣ ಹಾಗೂ ಸೇನಾ ಘರ್ಷಣೆಗಳಿಂದ ಸಂಬಂಧಗಳು ಪಾತಾಳಕ್ಕಿಳಿದಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಭಾರತಕ್ಕೆ ಸಂಬಂಧಿಸಿದಂತೆ ಚೀನಾ ಆಳುವವರಲ್ಲಿ ಹಠಾತ್ ಪರಿವರ್ತನೆಯಾಗಿದೆ. ಚೀನಾ ಪರಸ್ಪರ ಸಹಕಾರದ ಮಾತುಗಳನ್ನಾಡುತ್ತಿದೆ. ಸ್ನೇಹ ಹಸ್ತ ಚಾಚಿದೆ. ಎರಡೂ ದೇಶ ಜಂಟಿಯಾಗಿ ಒಂದಾಗಿ ಸಾಗಬೇಕೆಂಬ ಮಾತುಗಳನ್ನಾಡುತ್ತಿದೆ. ಚೀನಿ ಆಳುವವರ ಬುದ್ಧಿಗೆ ಈ ಯೋಚನೆ ಹಠಾತ್ ಮೂಡಿದ್ದಲ್ಲ. ನಮ್ಮ ದೇಶದ ಶಕ್ತಿ, ಸಾಮರ್ಥ್ಯ ಅರ್ಥ ಮಾಡಿಕೊಂಡ ನಂತರವೇ ಈ ಜ್ಞಾನೋದಯವಾಗಿದೆ ಎನ್ನಬಹುದು.

ಭಾರತ ತೋರಿದ ರಾಜತಾಂತ್ರಿಕ ತಂತ್ರಗಾರಿಕೆ, ಗಡಿಯಲ್ಲಿ ಭಾರತೀಯ ಸೇನೆ ತೋರಿದ ಪರಾಕ್ರಮ, ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ತುಂಬಿರುವ ಭಾರತದ ಶಸ್ತ್ರಾಸ್ತ್ರ ಕೋಠಿ, ಕೋವಿಡ್ ನಂತರ ಚೀನಾದಲ್ಲಿ ಉಂಟಾಗಿರುವ ಆರ್ಥಿಕ ಬಿಕ್ಕಟ್ಟು ಅಸ್ತವ್ಯಸ್ತವಾಗಿರುವ ಚೀನಾದ ಸಾಮಾಜಿಕ ಪರಿಸ್ಥಿತಿ... ಇವೇ ಮೊದಲಾದ ಸಂಗತಿಗಳು ಭಾರತದೊಂದಿಗೆ ಸಂಬಂಧ ಸುಧಾರಿಸಲು ಚೀನಾವನ್ನು ವಿವಶಗೊಳಿಸಿದೆ.

ಡ್ರ್ಯಾಗನ್ ಜಾಗತಿಕ ನಾಯಕತ್ವ ಗಳಿಸಬೇಕೆಂಬ ಅತ್ಯಾತುರದಲ್ಲಿದ್ದ ಅಧ್ಯಕ್ಷ ಜಿನ್‌ಪಿಂಗ್‌ರಿಗೆ ಪ್ರಸ್ತುತ ತನ್ನ ಮುಂದಿರುವುದು 1962ರದ್ದಲ್ಲ 2023ರ ಭಾರತವೆಂದು ಸರಿಯಾಗಿ ಅರ್ಥವಾಗಿದೆ. 1954 ರಲ್ಲಿ ಅಂದಿನ ಭಾರತದ ಪ್ರಧಾನಿಯಾಗಿದ್ದ ನೆಹರುರವರು ಚೀನಾದೊಂದಿಗೆ ಮಾಡಿಕೊಂಡಿದ್ದ ಪಂಚಶೀಲ ಒಪ್ಪಂದದಿಂದಾಗಿ 1962ರಲ್ಲಿ ಚೀನಾವು ನಮ್ಮ ದೇಶದ ಶೀಲವನ್ನು ಹರಾಜು ಹಾಕಿತು ಎಂದು ನಮ್ಮಲ್ಲಿ ಹಿರಿಯರೊಬ್ಬರು ಹೇಳುತ್ತಿದ್ದರು.

1962ರ ಯುದ್ಧದ ಸಂದರ್ಭದಲ್ಲಿ ಭಾರತದ ಬಳಿ ಚೀನಾಕ್ಕಿಂತ ಶಕ್ತಿಶಾಲಿ ವಾಯುಪಡೆ ಇತ್ತು. ಆದರೆ ಭಾರತದ ದಿಲ್ಲಿಯಲ್ಲಿದ್ದ ನಾಯಕತ್ವ ವೈಮಾನಿಕ ದಾಳಿಗೆ ಅವಕಾಶ ನೀಡಲಿಲ್ಲ. ಈ ನಿರ್ಣಯದಿಂದ ಭಾರತೀಯ ಸೇನೆಯಲ್ಲಿ ಭಾರೀ ಪ್ರಮಾಣದ ಸಾವು–ನೋವು ಸಂಭವಿಸಿತು. ಪ್ರಾಯಶಃ ವಾಯುಪಡೆಗೆ ದಾಳಿಗೆ ಅವಕಾಶ ನೀಡಿದ್ದಲ್ಲಿ ಯುದ್ಧದ ಫಲಿತಾಂಶ ಬದಲಾಗಿ ಭಾರತ ವಿಜಯ ಗಳಿಸುತ್ತಿತ್ತು ಎಂಬುದು ಸೇನಾ ತಜ್ಞರ ದೃಢ ಅಭಿಪ್ರಾಯವಾಗಿತ್ತು. ವಾಯು ದಾಳಿಗೆ ಅವಕಾಶ ನೀಡದಿರುವುದಕ್ಕೆ ನೆಹರು ಪುಕ್ಕಲುತನವೇ ಅಥವಾ ಚೀನಿ ನಾಯಕತ್ವದ ಮೇಲಿದ್ದ ಅತಿಯಾದ ವ್ಯಾಮೋಹವೇ ಎಂಬುದು ಇಂದಿಗೂ ನಿಗೂಢವಾಗಿ ಉಳಿದಿದೆ. ಆದರೆ ಭಾರತದ ಪ್ರಸ್ತುತ ಪ್ರಧಾನಿ ಮೋದಿ ನೇತೃತ್ವದ ಸರಕಾರ ಚೀನಾದ ಯಾವುದೇ ರೀತಿಯ ಒತ್ತಡ ತಂತ್ರಕ್ಕೆ ಮಣಿಯುವುದಿಲ್ಲವೆಂದು ತಿಳಿದ ನಂತರ ಭಾರತದೆದುರು ಚೀನಾ ಮಂಡಿಯೂರ ತೊಡಗಿದೆ.

ಎರಡೂ ದೇಶಗಳು ಪರಸ್ಪರ ನೋಡಲಾಗದಷ್ಟು ಕಹಿ ಭಾವನೆಯಿಂದ ಕಟುವಾದ ಟೀಕಾ ಪ್ರಹಾರದಲ್ಲಿ ಕೆಲವು ತಿಂಗಳಿಂದ ಮಗ್ನವಾಗಿದ್ದವು. ಆದರೆ ತವಾಂಗ್ ಗಡಿ ಘರ್ಷಣೆಯಲ್ಲಿ ಪೆಟ್ಟು ತಿಂದು ಬುದ್ಧಿ ಬಂದಿರುವಂತೆ ಚೀನಾ ಮೆತ್ತಗಾಗಿದ್ದು ಸಂಧಾನದ ಪ್ರಸ್ತಾಪ ಆರಂಭಿಸಿದೆ. ಚೀನಿ ವಿದೇಶಾಂಗ ಸಚಿವರು ಇತ್ತೀಚೆಗೆ ನೀಡಿದ ಹೇಳಿಕೆಯಲ್ಲಿ ಚೀನಾ ಸ್ಥಿರ ಮತ್ತು ದೃಢವಾದ ರೀತಿಯಲ್ಲಿ ಭಾರತದೊಂದಿಗೆ ಬಾಂಧವ್ಯ ವೃದ್ಧಿಸಲು ಜತೆಗೂಡಿ ಕೆಲಸ ನಿರ್ವಹಿಸುವುದು ಎಂದರು. ಮತ್ತು ಮುಂದುವರಿದು ಗಡಿ ಪ್ರಶ್ನೆಗೆ ಸಂಬಂಧಿಸಿದಂತೆ ಚೀನಾ ಮತ್ತು ಭಾರತವು ರಾಜತಾಂತ್ರಿಕ ಮತ್ತು ಸೇನಾಧಿಕಾರಿಗಳ ಮಾಧ್ಯಮದಿಂದ ನಿರಂತರ ಸಂಪರ್ಕದಲ್ಲಿದ್ದು ಎರಡೂ ದೇಶಗಳು ಗಡಿಯಲ್ಲಿ ಶಾಂತಿ, ಸ್ಥಿರತೆ ಕಾಪಾಡಲು ಬದ್ಧವಾಗಿವೆ ಎಂದು ಉತ್ತರಿಸಿದರು. ಡಿಸೆಂಬರ್ 9ರಂದು ತವಾಂಗ್ ಅತಿಕ್ರಮಣದಲ್ಲಿ ಪೆಟ್ಟು ತಿಂದ ನಂತರ ಈ ಹೇಳಿಕೆ ಬಂದಿರುವುದು ಗಮನಾರ್ಹವಾಗಿದೆ.



> **ಈ ಶತಮಾನದಲ್ಲಿ ಪರಸ್ಪರ ಸಹಕಾರ ತತ್ವದ ಆಧಾರದಲ್ಲಿ ಸಾಗಬೇಕೇ ವಿನಃ ವಿಭಜನೆಯ, ಸಂಘರ್ಷ ಆಧಾರದಲ್ಲಲ್ಲ. ಪ್ರಸ್ತುತ ಭಾರತ–ಚೀನಾ ಸಹಿತ ಜಗತ್ತಿನ ಮುಂದೆ ಬಡತನ, ಭಯೋತ್ಪಾದನೆ, ಹವಾಮಾನ ಬದಲಾವಣೆ, ಜಾಗತಿಕ ತಾಪಮಾನದಲ್ಲಿ ಏರಿಕೆ, ನಿರುದ್ಯೋಗ, ಹಣದುಬ್ಬರ ಮೊದಲಾದ ಸಮಾನವಾಗಿ ಕಾಡುತ್ತಿರುವ ಸಮಸ್ಯೆಗಳಿವೆ. ಇವುಗಳನ್ನು ಸಹಕಾರ, ಸಹಬಾಳ್ವೆ ಆಧಾರದಲ್ಲಿ ಎದುರಿಸಲು ಸಾಧ್ಯ ವಿನಃ ವಿಘಟನಾವಾದಿ, ವಿಸ್ತಾರವಾದಿ ಭಾವನೆಗಳಿಂದಲ್ಲ. ಎರಡೂ ದೇಶಗಳು ಗಡಿ ಸಮಸ್ಯೆ ಮಾತ್ರವಲ್ಲ ಇತರ ಸಮಸ್ಯೆಗಳ ಕುರಿತು ರಾಜ ತಾಂತ್ರಿಕ ಮಟ್ಟದಲ್ಲಿ ಮಾತುಕತೆ ಮೂಲಕ ನಿವಾರಿಸುವತ್ತ ಹೆಜ್ಜೆ ಇಡಬೇಕಾಗಿದೆ.**

ಜಾಗತಿಕ ಭೂ ರಾಜಕೀಯದಲ್ಲಿ ಹೆಚ್ಚುತ್ತಿರುವ ಭಾರತದ ಪ್ರಾಬಲ್ಯ ಮೋದಿಯವರ ವರ್ಚಸ್ಸು ಹಾಗೂ ದೃಢವಾದ ಭಾರತದ ವಿದೇಶಾಂಗ ನೀತಿ ಚೀನಾವನ್ನು ಹತಾಶಗೊಳಿಸಿದೆ. ಜಿ–20ರ ಮೂಲಕ ಭಾರತಕ್ಕೆ ವಿಶ್ವ ನಾಯಕತ್ವ ದೊರೆತಿರುವುದು ಚೀನಾ ತನ್ನ ಉದ್ಧಟ ಮನೋಭಾವ ಬದಲಾಯಿಸುವಂತೆ ಮಾಡಿರುವುದು ಒಂದು ಅಸಾಧಾರಣ ಮಹತ್ವದ ವಿದ್ಯಮಾನವಾಗಿದೆ. ಪ್ರಾಚೀನ ಕಾಲದಿಂದ ಭಾರತ–ಚೀನಾ ಮಧ್ಯೆ ಉತ್ತಮ ಬಾಂಧವ್ಯವಿತ್ತು. ಏಷ್ಯಾದ ಈ ಎರಡು ಪುರಾತನ ದೇಶಗಳು ಧಾರ್ಮಿಕ, ಸಾಂಸ್ಕೃತಿಕ ಆಧಾರದಲ್ಲಿ ಪರಸ್ಪರ ಬೆಸೆದುಕೊಂಡಿದ್ದವು. ಎರಡೂ ದೇಶಗಳ ಮಧ್ಯೆ ಗಡಿಯೂ ಇರಲಿಲ್ಲ. ಶತ್ರುತ್ವವೂ ಇರಲಿಲ್ಲ. 20ನೇ ಶತಮಾನದ ಮಧ್ಯ ಭಾಗದಲ್ಲಿ ಚೀನಾದಲ್ಲಿ ಕ್ರಾಂತಿಯ ಮೂಲಕ ಅಧಿಕಾರಕ್ಕೇರಿದ ಕಮ್ಯೂನಿಸ್ಟ್ ಸರಕಾರ ಹಾಗೂ ಟಿಬೆಟ್‌ನ್ನು ಆಕ್ರಮಿಸಿದ ನಂತರ ಎರಡೂ ದೇಶಗಳ ನಡುವಿನ ಗಡಿ ಗುರುತಿಸುವಲ್ಲಾದ ವೈಫಲ್ಯದಿಂದಾಗಿ ಸಂಬಂಧ ಹದಗೆಟ್ಟಿತು. ಆದರೆ 21ನೇ ಶತಮಾನದಲ್ಲಿ ಉದ್ವಿಗ್ನತೆ, ಘರ್ಷಣೆ ಹಾಗೂ ಯುದ್ಧಗಳಿಗೆ ಅವಕಾಶವಿರಬಾರದೆಂದು ಚೀನಾ ಅರ್ಥೈಸಬೇಕಾಗಿದೆ. ಈ ಶತಮಾನದಲ್ಲಿ ಪರಸ್ಪರ ಸಹಕಾರ ತತ್ವದ ಆಧಾರದಲ್ಲಿ ಸಾಗಬೇಕೇ ವಿನಃ ವಿಭಜನೆಯ, ಸಂಘರ್ಷ ಆಧಾರದಲ್ಲಿಲ್ಲ. ಪ್ರಸ್ತುತ ಭಾರತ–ಚೀನಾ ಸಹಿತ ಜಗತ್ತಿನ ಮುಂದೆ ಬಡತನ, ಭಯೋತ್ಪಾದನೆ, ಹವಾಮಾನ ಬದಲಾವಣೆ, ಜಾಗತಿಕ ತಾಪಮಾನದಲ್ಲಿ ಏರಿಕೆ, ನಿರುದ್ಯೋಗ, ಹಣದುಬ್ಬರ ಮೊದಲಾದ ಸಮಾನವಾಗಿ ಕಾಡುತ್ತಿರುವ ಸಮಸ್ಯೆಗಳಿವೆ. ಇವುಗಳನ್ನು ಸಹಕಾರ, ಸಹಬಾಳ್ವೆ ಆಧಾರದಲ್ಲಿ ಎದುರಿಸಲು ಸಾಧ್ಯ ವಿನಃ ವಿಘಟನಾವಾದಿ, ವಿಸ್ತಾರವಾದಿ ಭಾವನೆಗಳಿಂದಲ್ಲ. ಎರಡೂ ದೇಶಗಳು ಗಡಿ ಸಮಸ್ಯೆ ಮಾತ್ರವಲ್ಲ ಇತರ ಸಮಸ್ಯೆಗಳ ಕುರಿತು ರಾಜತಾಂತ್ರಿಕ ಮಟ್ಟದಲ್ಲಿ ಮಾತುಕತೆ ಮೂಲಕ ನಿವಾರಿಸುವತ್ತ ಹೆಜ್ಜೆ ಇಡಬೇಕಾಗಿದೆ.

ಬದಲಾದ ಚೀನಿ ಧೋರಣೆ: ವಿಶ್ವಸಂಸ್ಥೆಯಲ್ಲಿ ಚೀನಾ ನಿರಂತರವಾಗಿ ಭಾರತ ವಿರೋಧಿ ನೀತಿ ಅನುಸರಿಸುತ್ತಿತ್ತು. ಕಳೆದ ಜೂನ್‌ನಲ್ಲಿ ಪಾಕ್ ಮೂಲದ ಲಷ್ಕರ್–ಎ–ತೊಯ್ಬಾ (ಎಲ್‌ಇಟಿ) ಭಯೋತ್ಪಾದಕ ಸಂಘಟನೆಯ ಉಪಾಧ್ಯಕ್ಷ ಅಬ್ದುಲ್ ರೆಹಮಾನ್ ಮಕ್ಕಿಯನ್ನು ಜಾಗತಿಕ ಉಗ್ರರ ಪಟ್ಟಿಗೆ ಸೇರಿಸುವಂತೆ ಭಾರತ–ಅಮೇರಿಕ ವಿಶ್ವಸಂಸ್ಥೆ ಭದ್ರತಾ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿದ್ದವು. ಆದರೆ ಪಾಕಿಸ್ತಾನದ ಆಪ್ತನೆನಿಸಿರುವ ಚೀನಾ ಕೊನೆ ಕ್ಷಣದಲ್ಲಿ ವಿಟೊ ಪ್ರಯೋಗಿಸಿ ತಡೆಯೊಡ್ಡಿತ್ತು. ಈತ ಎಲ್‌ಇಟಿ ಸಂಯೋಜಿತ ಭಯೋತ್ಪಾದನಾ ತರಬೇತಿ ಶಿಬಿರಕ್ಕಾಗಿ 2.48 ಲಕ್ಷ ಡಾಲರ್ ಹಾಗೂ ಮದರಸಾಗಳಿಗಾಗಿ 1.65 ಲಕ್ಷ ಡಾಲರ್ ನಿಧಿಯನ್ನು ಸಂಗ್ರಹಿಸಲು ಸಹಾಯ ಮಾಡಿದ್ದನು ಎಂದು 2010ರಲ್ಲಿ ಅಮೇರಿಕ ತಿಳಿಸಿತ್ತು. 2008ರ ಮುಂಬೈ ದಾಳಿ ನಂತರ ವಿಶ್ವಸಂಸ್ಥೆ ಭದ್ರತಾ ಮಂಡಳಿಯು ಎಲ್‌ಇಟಿ ಮತ್ತು ಜಮಾತ್–ಉದ್–ದವಾ ನಾಯಕನಾಗಿದ್ದ ಈತನನ್ನು ಭಯೋತ್ಪಾದಕ ಎಂದು ಪಟ್ಟಿ ಮಾಡಿದ ಹಿನ್ನೆಲೆಯಲ್ಲಿ ಗೃಹ ಬಂಧನದಲ್ಲಿಡಲಾಗಿತ್ತು. ಪ್ರಚೋದನಕಾರಿ ಭಾಷಣಗಳಿಗೆ ಪ್ರಖ್ಯಾತನಾಗಿರುವ ಮಕ್ಕಿ 2010ರಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಕಾಶ್ಮೀರ ಐಕ್ಯತಾ ರ್‍ಯಾಲಿಯಲ್ಲಿ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಹಸ್ತಾಂತರಿಸದ್ದಕ್ಕೆ ಭಾರತದಲ್ಲಿ ರಕ್ತದ ಹೊಳೆ ಹರಿಸುವ ಬೆದರಿಕೆ ಹಾಕಿದ್ದನು. ಇತ್ತೀಚೆಗೆ ಭಾರತದ ಬಗ್ಗೆ ಚೀನಾದ ಬದಲಾದ ಧೋರಣೆಗೆ ಪುರಾವೆ ಎಂಬಂತೆ ಈ ಬಾರಿ ಚೀನಾ ಪ್ರತಿನಿಧಿ ಮಕ್ಕಿ ಪರ ವಿಟೋ ಚಲಾಯಿಸಲಿಲ್ಲ. ಪರಿಣಾಮ ಈ ಬಾರಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿ, ದಿ. 16.1.2023 ರಂದು ಮಕ್ಕಿಯನ್ನು ಜಾಗತಿಕ ಭಯೋತ್ಪಾದಕನೆಂದು ಘೋಷಿಸಿ ಕಪ್ಪುಪಟ್ಟಿಗೆ ಸೇರಿಸಿದೆ. ಈ ಸಂದರ್ಭದಲ್ಲಿ ಮಕ್ಕಿಯನ್ನು ಭಯೋತ್ಪಾದಕರ ಪಟ್ಟಿಗೆ ಸೇರಿಸುವುದರಿಂದ ಜಾಗತಿಕ ಮಟ್ಟದಲ್ಲಿ ಭಯೋತ್ಪಾದನಾ ನಿಗ್ರಹಕ್ಕೆ ಸಹಕಾರ ಹೆಚ್ಚಿಸಲು ಅನುಕೂಲವಾಗಲಿದೆ ಎಂದು ಚೀನಾ ಪ್ರತಿನಿಧಿ ಹೇಳಿಕೆ ನೀಡಿದ್ದಾರೆ.

ಈ ರೀತಿ ಕೊನೆಗೂ ಚೀನಿ ನಾಯಕತ್ವವು ಭಾರತದೊಂದಿಗೆ ಹದಗೆಟ್ಟಿರುವ ರಾಜತಾಂತ್ರಿಕ ಸಂಬಂಧಗಳನ್ನು ಸುಧಾರಿಸಲು ಸಕಾರಾತ್ಮಕ ಸಂದೇಶ ನೀಡಿದೆ. ಆದರೆ ಸದಾ ಧೂರ್ತತನವೇ ತನ್ನ ವಿದೇಶಾಂಗ ನೀತಿಯ ಪ್ರಮುಖ ಅಸ್ತ್ರವಾಗಿ ಬಳಸುತ್ತಿರುವ ಚೀನಾದ ಬದಲಾದ ಧೋರಣೆಯನ್ನು ಭಾರತವು ಎಚ್ಚರಿಕೆಯಿಂದ ಗಮನಿಸುತ್ತಿದೆ. ಚೀನಾದ ಈ ಪರಿವರ್ತನೆ ಸದುದ್ದೇಶದಿಂದ ಕೂಡಿದೆಯೇ ಅಥವಾ ದುರುದ್ದೇಶದಿಂದ ಎಂಬ ಬಗ್ಗೆ ಭಾರತ ಕಾದು ನೋಡುವ ತಂತ್ರ ಅನುಸರಿಸುತ್ತದೆ.

ರಾಷ್ಟ್ರಪತಿ ಭವನದ 'ಮುಘಲ್ ಗಾರ್ಡನ್' ಇನ್ನು 'ಅಮೃತ ಉದ್ಯಾನ'

ನವದೆಹಲಿ, ಜ.28– ರಾಷ್ಟ್ರ ರಾಜಧಾನಿಯಲ್ಲಿರುವ ರಾಷ್ಟ್ರಪತಿ ಭವನದ 'ಮುಘಲ್ ಗಾರ್ಡನ್'ಗೆ ಕೇಂದ್ರ ಸರ್ಕಾರವು 'ಅಮೃತ ಉದ್ಯಾನ್' ಎಂದು ಇಂದು (ಶನಿವಾರ) ಮರುನಾಮಕರಣ ಮಾಡಿದೆ.

75ನೇ ಸ್ವಾತಂತ್ರ್ಯೋತ್ಸವವನ್ನು ಸ್ವಾತಂತ್ರ್ಯದ ಅಮೃತ ಮಹೋತ್ಸವವಾಗಿ ಆಚರಿಸುತ್ತಿರುವ ಸಂದರ್ಭದಲ್ಲಿ ರಾಷ್ಟ್ರಪತಿಗಳು ರಾಷ್ಟ್ರಪತಿ ಭವನದ ಉದ್ಯಾನಗಳಿಗೆ 'ಅಮೃತ ಉದ್ಯಾನ್' ಎಂಬ ಸಾಮಾನ್ಯ ಹೆಸರು ಇಟ್ಟಿದ್ದಾರೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಮಾಧ್ಯಮ ಕಾರ್ಯದರ್ಶಿ ನಾವಿಕಾ ಗುಪ್ತಾ ತಿಳಿಸಿದ್ದಾರೆ. ಉದ್ಯಾನವನಗಳನ್ನು ರಾಷ್ಟ್ರಪತಿಯವರು ನಾಳೆ (ಭಾನುವಾರ) ಉದ್ಘಾಟಿಸಲಿದ್ದಾರೆ. ಜನವರಿ 31 ರಿಂದ ಮಾರ್ಚ್ 26ರ ವರೆಗೆ ಸಾರ್ವಜನಿಕರಿಗೆ ಮುಕ್ತವಾಗಿರಲಿವೆ ಎಂದೂ ಗುಪ್ತಾ ಹೇಳಿದ್ದಾರೆ. ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್ ವರೆಗಿನ ರಸ್ತೆಯನ್ನು, ಕೇಂದ್ರ ಸರ್ಕಾರವು 2022ರ ಸೆಪ್ಟೆಂಬರ್‌ನಲ್ಲಿ 'ಕರ್ತವ್ಯಪಥ' ಎಂದು ಮರುನಾಮಕರಣ ಮಾಡಿತ್ತು. ಅದಕ್ಕೂ ಮುನ್ನ ಆ ರಸ್ತೆಯನ್ನು 'ರಾಜಪಥ' ಎಂದು ಕರೆಯಲಾಗುತ್ತಿತ್ತು.

ಡಿ.ದೇವರಾಜ ಅರಸು ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಜ.28– 2022 ನೇ ವರ್ಷದಲ್ಲಿ ಪದವಿ, ಸ್ನಾತಕೋತ್ತರ ಪದವಿ, ವೃತ್ತಿಪರ ಪದವಿ, ವೃತ್ತಿಪರ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ್ದು, ಸರಾಸರಿ ಶೇಕಡ 70 ಮತ್ತು ಅದಕ್ಕಿಂತ ಹೆಚ್ಚಿ ಅಂಕಗಳನ್ನು ಗಳಿಸಿರುವ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳಿಂದ ಡಿ.ದೇವರಾಜ ಅರಸು ಪ್ರತಿಭಾ ಪುರಸ್ಕಾರಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಯನ್ನು https://bcwd.karnataka.gov.in ಆನ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳು ಫೆ 8ರ ಸಂಜೆ 5 ಗಂಟೆಯೊಳಗೆ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ 8050770004 ಅನ್ನು ಸಂಪರ್ಕಿಸಬಹುದು

ಮೈಸೂರು ಕೆ.ಜಿ.ಕೊಪ್ಪಲ್ ವೃತ್ತದಲ್ಲಿ ಕಂಗೊಳಿಸಲಿದೆ ಕುಸ್ತಿ ಅಖಾಡ

ರೈಲ್ವೆ ಬ್ರಿಡ್ಜ್ ಪ್ರವೇಶಿಸುತ್ತಿದ್ದಂತೆ ಮನ ಸೆಳೆಯುವ ಸಾಹಸಿ ಕುಸ್ತಿಪಟುಗಳ ಪ್ರತಿಮೆ, ಸುವಿಶಾಲ ಅಂದದ ವೃತ್ತ ಶಾಸಕ ನಾಗೇಂದ್ರರ ಮತ್ತೊಂದು ನವ ಚಿಂತನೆ ಸಾಕಾರ





ಮೈಸೂರು, ಜ.28(ಎಂಕೆ)– ಮೈಸೂರಿನ ಕುಸ್ತಿ ಕಲೆಯನ್ನು ಮತ್ತಷ್ಟು ಜನಮಾನಸಗೊಳಿಸಲು ಕುಸ್ತಿ ಪೈಲ್ವಾನರು ಅಖಾಡದಲ್ಲಿ ಸದಾ ತೊಡೆ ತಟ್ಟಲಿದ್ದಾರೆ...!

ಒಂದೆರಡು ಗಂಟೆಗಳ ಕಾಲ ನಡೆಯುವ ಮಾರ್ಫಿಟ್ ಕುಸ್ತಿಯಲ್ಲ. ಬದಲಿಗೆ ದಿನ 24 ಗಂಟೆಯೂ ಕುಸ್ತಿ ಅಖಾಡದಲ್ಲೇ ಇದ್ದು, ಕುಸ್ತಿ ಪ್ರೇಮಿಗಳ ಕಣ್ಮನ ಸೆಳೆಯಲಿದ್ದಾರೆ. ಕುಸ್ತಿ ಜೊತೆಗೆ ದೈಹಿಕ ಕಸರತ್ತಿನೊಂದಿಗೆ ಆರೋಗ್ಯ ಕಾಳಜಿಯನ್ನು ತಿಳಿಸುತ್ತಾ ಮೈಸೂರಿನ ಕುಸ್ತಿ ಕಲೆಯನ್ನು ಎಲ್ಲೆಡೆ ಪಸರಿಸಲಿದ್ದಾರೆ...

ಹೌದು! ಮೈಸೂರಿನ ಕುಸ್ತಿ ಕಲಿಗಳ ಅಖಾಡವೆಂದೇ ಕರೆಯಲ್ಪಡುವ ಕೆ.ಜಿ. ಕೊಪ್ಪಲಿನಲ್ಲಿ ಕುಸ್ತಿ ಕಲೆಗೆ ಇನ್ನಷ್ಟು ಹಿರಿಮೆ–ಗರಿಮೆ ತರುವ ಕಾರ್ಯ ಸದ್ಯದಲ್ಲೇ ಆರಂಭಗೊಳ್ಳಲಿದೆ. ಕೆ.ಜಿ.ಕೊಪ್ಪಲಿನ ವೃತ್ತ(ಕನ್ನೇಗೌಡರ ವೃತ್ತ)ದಲ್ಲಿ ಕುಸ್ತಿ ಅಖಾಡವೇ ನಿರ್ಮಾಣಗೊಳ್ಳಲಿದೆ. ಅಸಲಿ ಅಖಾಡವಲ್ಲದಿದ್ದರೂ ಮಾದರಿ ಕುಸ್ತಿ ಅಖಾಡದಲ್ಲಿ ಸೆಣಸಾಡುತ್ತಿರುವ ಪೈಲ್ವಾನರು ಹಾಗೂ ಕಸರತ್ತು ನಡೆಸುತ್ತಿರುವ ಪೈಲ್ವಾನರ ಪ್ರತಿಮೆಗಳಿರುವ ವೃತ್ತ ಕ್ರೀಡಾಭಿಮಾನಿಗಳ ನೆಚ್ಚಿನ ತಾಣವಾಗಿ ಬದಲಾಗಲಿದೆ.

> **ಮೈಸೂರಿನ ಸಂಸ್ಕೃತಿ ಕುಸ್ತಿ...**
> **ಮೈಸೂರು ಮಹಾರಾಜರ ಪ್ರೋತ್ಸಾಹದಿಂದ ಜನಮಾನಸಗೊಂಡ ಕುಸ್ತಿ ಕ್ರೀಡೆ ಮೈಸೂರಿನ ಸಂಸ್ಕೃತಿಯಾಗಿದೆ. ಕಾಲಕ್ಕೆ ತಕ್ಕಂತೆ ಕುಸ್ತಿ ಕ್ರೀಡೆಯಲ್ಲಿ ಬದಲಾವಣೆಯಾಗುತ್ತಿದ್ದರೂ ಮಟ್ಟಿಯಲ್ಲಿ ಪೈಲ್ವಾನರು ಸೆಣಸಾಡುವ ನಾಡಕುಸ್ತಿ ಎಲ್ಲರಿಗೂ ಅಚ್ಚುಮೆಚ್ಚು. ಆದ್ದರಿಂದ ಕುಸ್ತಿ ಕಲೆಯನ್ನು ಇನ್ನಷ್ಟು ಜನಪ್ರಿಯಗೊಳಿಸಬೇಕು. ಕೆ.ಜಿ.ಕೊಪ್ಪಲು ಕುಸ್ತಿಯ ಗರಡಿ ಮನೆಯಂತಿರಬೇಕು ಎಂಬ ದೃಷ್ಟಿಯಿಂದ ಕೆ.ಜಿ.ಕೊಪ್ಪಲು ವೃತ್ತವನ್ನು ಪೈಲ್ವಾನರ ಪ್ರತಿಮೆಗಳೊಂದಿಗೆ ಅಭಿವೃದ್ಧಿ ಪಡಿಸಲಾಗುತ್ತಿದೆ.**
> **- ಎಲ್.ನಾಗೇಂದ್ರ, ಶಾಸಕ**

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರ ನೇತೃತ್ವದಲ್ಲಿ ವಿಶೇಷ ಅನುದಾನದಡಿ ಕುಸ್ತಿ ಪೈಲ್ವಾನರ ಪ್ರತಿಮೆಗಳು ನಿರ್ಮಾಣಗೊಳ್ಳಲಿವೆ. ಕೃಷ್ಣಮೂರ್ತಿಪುರಂ ಕಡೆಯಿಂದ ಕೆ.ಜಿ. ಕೊಪ್ಪಲಿಗೆ 'ರೈಲ್ವೆ ಬ್ರಿಡ್ಜ್' ಮಾರ್ಗದಲ್ಲಿ ಬರುವವರಿಗೆ ಸ್ವಾಗತ ಕೋರುವ ಪ್ರತಿಮೆ ಇದ್ದರೆ, ಕೆ.ಜಿ.ಕೊಪ್ಪಲಿನ ಕಡೆಗೆ(ವೃತ್ತ ಮತ್ತೊಂದು ಬದಿಯಲ್ಲಿ) ಕುಸ್ತಿ ಪೈಲ್ವಾನರು ಸೆಣಸಾಡುವ ಪ್ರತಿಮೆಗಳು ಇರಲಿವೆ.

ಅರಳಿಮರ ನೆರಳಲ್ಲಿ: ವೃತ್ತದಲ್ಲಿರುವ ಅರಳಿಮರ ಕುಸ್ತಿ ಪೈಲ್ವಾನರ ಪ್ರತಿಮೆಗಳಿಗೆ ನೆರಳನ್ನು ನೀಡಲಿದೆ. ಅರಳಿ ಮರಕ್ಕೆ ತೊಂದರೆಯಾಗದಂತೆ ವೃತ್ತದ ಅಭಿವೃದ್ಧಿ ಕಾರ್ಯ ನಡೆಯಲಿದ್ದು, ಪೈಲ್ವಾನರು ಹಾಗೂ ಸ್ವಾಗತ ಪ್ರತಿಮೆ ಸುಂದರವಾಗಿ ಮೂಡಿಬರಲಿದೆ. ಹಾಗೆಯೇ ಕೆ.ಜಿ.ಕೊಪ್ಪಲು ವೃತ್ತದ ಸುತ್ತಲೂ ವಿಶ್ರಾಂತಿ ಆಸನಗಳ ವ್ಯವಸ್ಥೆಯನ್ನು ಮಾಡಲಾಗುವುದು.

ಕುಸ್ತಿ ಪೈಲ್ವಾನರ ಕೆ.ಜಿ.ಕೊಪ್ಪಲು: ಬಸವಯ್ಯನ ಗರಡಿ, ಉಚ್ಚಯ್ಯನ ಗರಡಿ, ನಿಂಗೇಗೌಡರ ಗರಡಿ, ಮೊಟ್ಟೆ ಗರಡಿ ಸೇರಿದಂತೆ 5 ಕ್ಕೂ ಹೆಚ್ಚು ಗರಡಿ ಮನೆಗಳಿರುವ ಕೆ.ಜಿ.ಕೊಪ್ಪಲು ಕುಸ್ತಿ ಪೈಲ್ವಾನರಿಂದಲೇ ಹೆಸುವಾಸಿ ಮೈಸೂರು ಮಹಾರಾಜರ ಆಸ್ಥಾನದಲ್ಲಿದ್ದ ಪೈಲ್ವಾನ್ ಬಸವಯ್ಯ ಅವರ ಹೆಸರು ಇಂದಿಗೂ ಜೀವಂತವಾಗಿದೆ. ಹಾಗೆಯೇ ಕೆ.ಜಿ.ಕೊಪ್ಪಲಿನ ಅನೇಕ ಕುಸ್ತಿ ಪೈಲ್ವಾನರು ಕುಸ್ತಿ ಕಲೆಯನ್ನು ಉಳಿಸಿ–ಬೆಳೆಸುವ ನಿಟ್ಟಿನಲ್ಲಿ ಅಪಾರ ಕೊಡುಗೆ ನೀಡಿದ್ದಾರೆ.

ವಿಶೇಷ ಅನುದಾನ: ರಾಜ್ಯ ಸರ್ಕಾರ ನೀಡಿರುವ ವಿಶೇಷ ಅನುದಾನದಡಿ ಸುಮಾರು 1.60 ಕೋಟಿ ರೂ.ವೆಚ್ಚದಲ್ಲಿ ಕೆ.ಜಿ. ಕೊಪ್ಪಲು ವೃತ್ತ ಅಭಿವೃದ್ಧಿ ಪಡಿಸಲಾಗುವುದು. ಅಭಿವೃದ್ಧಿ ಕಾಮಗಾರಿಗೆ ಜ.30(ಸೋಮವಾರ) ಗುದ್ದಲಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಲಾಗುವುದು ಎಂದು ಶಾಸಕ ಎಲ್.ನಾಗೇಂದ್ರ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಮೈಸೂರಿನಲ್ಲಿಯೇ ಹೆಚ್ಚು ಗರಡಿ ಮನೆಗಳಿರುವ ಕೆ.ಜಿ.ಕೊಪ್ಪಲು ಹಿಂದಿನಿಂದಲೂ ಕುಸ್ತಿ ಕಲೆಗೆ ಪ್ರೋತ್ಸಾಹ ನೀಡುತ್ತಿದೆ. ಸಾಕಷ್ಟು ಮಂದಿ ಪೈಲ್ವಾನರು ದಸರಾ ನಾಡಕುಸ್ತಿ ಸೇರಿದಂತೆ ಹಲವಡೆ ನಡೆಯುವ ಕುಸ್ತಿ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಕೀರ್ತಿ ತಂದಿದ್ದಾರೆ. ಇದೆಲ್ಲವನ್ನು ಅವಿಸ್ಮರಣೀಯವನ್ನಾಗಿಸುವ ನಿಟ್ಟಿನಲ್ಲಿ ಮೈಸೂರಿನಲ್ಲಿ ಮೊದಲ ಬಾರಿಗೆ ಕುಸ್ತಿ ಪೈಲ್ವಾನರ ಪ್ರತಿಮೆಯುಳ್ಳ ವೃತ್ತವನ್ನು ನಿರ್ಮಾಣ ಮಾಡುತ್ತಿದ್ದೇವೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com


ಟಿ.ಕೆ.ಬಡಾವಣೆ ರಾಯರ ಮಠದಲ್ಲಿ ಜ.31ರಿಂದ ಟಿಟಿಡಿ ಕಾರ್ಯಕ್ರಮಗಳು

ಮೈಸೂರು, ಜ. 28– ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ಹಾಗೂ ಶ್ರೀ ಗುರು ರಾಘವೇಂದ್ರ ಸೇವಾ ಸಮಿತಿ, ಟಿ ಕೆ ಬಡಾವಣೆ, ಮೈಸೂರು ಇವುಗಳ ಸಂಯುಕ್ತಾಶ್ರಯದಲ್ಲಿ ಜನವರಿ 31ರಿಂದ ಫೆಬ್ರವರಿ 3ರವರೆಗೆ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಟಿ.ಕೆ. ಬಡಾವಣೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಏರ್ಪಡಿಸಲಾಗಿದೆ.

ಜ.31ರ ಸಂಜೆ 6 ಗಂಟೆಗೆ–ಹರೇ ಶ್ರೀನಿವಾಸ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, 7 ಗಂಟೆಗೆ–ಶ್ರೀ ಶ್ರೀಪಾದರಾಜಾಚಾರ್ಯರಿಂದ "ಶ್ರೀ ಪ್ರಹ್ಲಾದರಾಜರ ಅವತಾರ" ಪ್ರವಚನ. ಫೆ. 1ರ ಸಂಜೆ 6 ಗಂಟೆಗೆ–ಚಿನ್ಮಯಿ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, 7 ಗಂಟೆಗೆ–ಶೀ ಶ್ರೀಪಾದರಾಜಾಚಾರ್ಯರಿಂದ "ಶ್ರೀ ವ್ಯಾಸ ರಾಜರ ಅವತಾರ" ಪ್ರವಚನ. ಫೆ.2ರ ಸಂಜೆ 6 ಗಂಟೆಗೆ–"ಹರಿನಾಮ ಸಂಕೀರ್ತನೆ". ಗಾಯನ: ಕು॥ ನಾಗಶ್ರೀ ಶ್ರೀರಾಮ ಭಟ್, ಕೀ–ಬೋರ್ಡ್ : ಶ್ರೀ ರವಿಶಂಕರ್, ತಬಲಾ: ಸುಜಯೀಂದ್ರರಾವ್. ಫೆ.3ರ ಸಂಜೆ 6 ಗಂಟೆಗೆ–ಶ್ರೀ ವಿಶ್ವೇಶಕೃಷ್ಣ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, 7 ಗಂಟೆಗೆ–ಶ್ರೀ ಶ್ರೀಪಾದರಾಜಾ ಚಾರ್ಯರಿಂದ "ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಅವತಾರ" ಪ್ರವಚನ.

ಆದರ್ಶಗುರು ಪ್ರೊ.ಜಯರಾಮಯ್ಯ ಹುಟ್ಟುಹಬ್ಬ, ಸಾಕ್ಷ್ಯಚಿತ್ರ ಬಿಡುಗಡೆ

ಅಪಾರ ಶಿಷ್ಯರಿಂದ ಗುರು ನಮನ



ಮೈಸೂರು, ಜ. 28– ಮೈಸೂರು ವಿವಿಯ ಭೂಗೋಳಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿದ್ದ ದಿವಂಗತ ಪ್ರೊ. ಪಿ. ಜಯರಾಮಯ್ಯನವರ 88ನೇ ಹುಟ್ಟುಹಬ್ಬ ಹಾಗೂ ಅವರ ಕುರಿತ ಸಾಕ್ಷ್ಯಚಿತ್ರ ಬಿಡುಗಡೆ ಸಮಾರಂಭವನ್ನು ಅವರ ಅಪಾರ ಸಂಖ್ಯೆಯ ಶಿಷ್ಯವೃಂದ ಭಾನುವಾರ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಏರ್ಪಡಿಸಿದೆ.

ಶ್ರೀರಂಗಪಟ್ಟಣ ತಾಲೂಕು ನಗುವನಹಳ್ಳಿ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದ ಪ್ರೊ. ಜಯರಾಮಯ್ಯ ಅವರು, 1987ರಲ್ಲಿ ತಮ್ಮ ಸ್ವಗ್ರಾಮದಲ್ಲಿ ಕಾವೇರಿ ಶಾಲೆಯನ್ನು ಪ್ರಾರಂಭಿಸಿ ಸುತ್ತಮುತ್ತಲ ಹಳ್ಳಿಗಳ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮೂಲಕ ಸಾವಿರಾರು ಗ್ರಾಮೀಣ ಭಾಗದ ಯುವಕ–ಯುವತಿಯರನ್ನು ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಈ ಶಾಲೆಯಲ್ಲಿ ವ್ಯಾಸಂಗ ಮಾಡಿದ ನೂರಾರು ವಿದ್ಯಾರ್ಥಿಗಳು ದೇಶ–ವಿದೇಶದಲ್ಲಿ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರೊ. ಜಯರಾಮಯ್ಯನವರ ಚಿಂತನೆಗೆ ಸಾಕ್ಷೀಭೂತರಾಗಿದ್ದಾರೆ.

ಮಹಾರಾಜ ಕಾಲೇಜಿನ ಭೂಗೋಳಶಾಸ್ತ್ರ ಪ್ರಾಧ್ಯಾಪಕರಾಗಿ ನಂತರ ಮೈಸೂರು ವಿವಿಯ ಭೂಗೋಳಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ 36 ವರ್ಷಗಳ ಸುದೀರ್ಘ ಸೇವೆ ಸಲ್ಲಿಸುವ ಮೂಲಕ ಸಾವಿರಾರು ಮಂದಿ ಶಿಷ್ಯರನ್ನು ಹೊಂದಿರುವ ಇವರು, 2022ರ ಫೆಬ್ರವರಿ 19ರಂದು ನಿಧನರಾದರು. ಜಯರಾಮಯ್ಯ ಅವರ ಮೇಲೆ ಅಪಾರ ಪ್ರೀತಿ ವಿಶ್ವಾಸವನ್ನು ಹೊಂದಿರುವ ಶಿಷ್ಯವೃಂದ, 2022ರ ಮಾರ್ಚ್ 27ರಂದು ಅವರಿಗೆ ನುಡಿನಮನ ಸಲ್ಲಿಸಿದ್ದಲ್ಲದೇ, ಜಯರಾಮಯ್ಯನವರ ನೆನಪಿನಲ್ಲಿ 'ಒಬ್ಬ ವ್ಯಕ್ತಿ ಅಲ್ಲ ಶಕ್ತಿ' ಹೆಸರಿನಲ್ಲಿ ಅವರ ನೆಚ್ಚಿನ ಶಿಷ್ಯರಲ್ಲೊಬ್ಬರಾದ ರಾಜ್ಯ ಸರ್ಕಾರದ ನಿವೃತ್ತ ವಿಶೇಷ ಕಾರ್ಯದರ್ಶಿ ಡಾ.ಪಿ.ಬೋರೇಗೌಡ ಸಂಪಾದಕತ್ವದಲ್ಲಿ ಮೈಸೂರಿನ ಹೋಟೆಲ್ ಪೈವಿಸ್ತಾದಲ್ಲಿ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡುವ ಮೂಲಕ ಗೌರವ ಸಲ್ಲಿಸಿದ್ದರು. ಈ ಶಿಷ್ಯವೃಂದ ನಾಳೆ ತಮ್ಮ ಗುರುಗಳ ಹುಟ್ಟುಹಬ್ಬ ಮತ್ತು ಸಾಕ್ಷ್ಯಚಿತ್ರ ಬಿಡುಗಡೆ ಮಾಡುವ ಮೂಲಕ ಅಗಲಿದ ಮಹಾ ಗುರುವಿಗೆ ಗೌರವ ಸಲ್ಲಿಸಲಿದೆ.

ಫೆ.16ರಂದು ಬೆಂಗಳೂರಿಗೆ ಜನ ಚಳುವಳಿ ಸಂಯುಕ್ತ ಚಲೋ



ಮೈಸೂರು, ಜ.28(ಆರ್‌ಕೆ)– ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನ ಮತ್ತು ಮಹಿಳೆಯರ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಫೆ.16ರಂದು ಬೆಂಗಳೂರಿಗೆ ಜನ ಚಳುವಳಿಗಳ ಸಂಯುಕ್ತ ಚಲೋ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, ಅಂದು 20 ಸಾವಿರ ಮಂದಿ ಚಲೋದಲ್ಲಿ ಭಾಗವಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ ಮಾಡಲಾಗುವುದು ಎಂದರು.

ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದು ರೈತರ ಭೂಮಿಯನ್ನು ಕಪ್ಪು ಹಣ ಒಡೆಯರ ಪಾಲು ಮಾಡಿರುವ ಸರ್ಕಾರ, ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಾಡಿ ಎಪಿಎಂಸಿ ಮಾರುಕಟ್ಟೆ ಮುಚ್ಚುವಂತೆ ಮಾಡಿದೆ. ಹತ್ತಿ, ಕೊಬ್ಬರಿ, ತೆಂಗು, ಅಡಿಕೆ, ತೊಗರಿಬೇಳೆ ಬೆಲೆ ಕುಸಿದು ರೈತರು ಕಂಗಲಾಗಿದ್ದಾರೆ. ಕಬ್ಬು ಬೆಳೆಗಾರರ ಬೇಡಿಕೆಯನ್ನು ಈಡೇರಿಸದೇ ರೈತರಿಗೆ ಅನ್ಯಾಯ ಮಾಡುತ್ತಿರುವ ಸರ್ಕಾರದ ವಿರುದ್ಧ ಉಗ್ರ ಹೋರಾಟ ಅನಿವಾರ್ಯ ಎಂದು ಅವರು ತಿಳಿಸಿದರು.

ದಲಿತರು, ಕಾರ್ಮಿಕರ ಹಕ್ಕು ಕಸಿದು ವಿದ್ಯಾರ್ಥಿಗಳಿಗೆ ಭರವಸೆ ಇಲ್ಲದಂತಾಗಿದೆ ಯಾದ್ದರಿಂದ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಿಂದ ಬೆಂಗಳೂರು ಚಲೋದಲ್ಲಿ ಸಾವಿರಾರು ಮಂದಿ ಪಾಲ್ಗೊಂಡು ಸರ್ಕಾರದ ವಿರುದ್ಧ ಚಳುವಳಿ ಮಾಡಲಾಗುವುದು ಎಂದು ಬಡಗಲಪುರ ನಾಗೇಂದ್ರ ತಿಳಿಸಿದರು. ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮುಖಂಡರಾದ ಪ್ರಭಾಕರ, ಸ್ವಾಮಿಗೌಡ, ದಶರಥ, ಚಂದ್ರು, ಸಿದ್ದಪ್ಪ, ಪ್ರಕಾಶ್ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

2ನೇ ಮಹಾಯುದ್ಧದಲ್ಲಿ ಪಾಲ್ಗೊಂಡಿದ್ದ ಡಾ. ಕಾಂಡಂಡ ಕೆ. ಕುಟ್ಟಪ್ಪ ನಿಧನ

ಮೈಸೂರು, ಜ. 28– ಎರಡನೇ ಮಹಾಯುದ್ಧದಲ್ಲಿ ಪಾಲ್ಗೊಂಡಿದ್ದ ಯೋಧರು ಹಾಗೂ ಮೈಸೂರಿನ ವಿಜಯನಗರ ಮೊದಲ ಹಂತದ ನಿವಾಸಿ ಡಾ. ಕಾಂಡಂಡ ಕೆ. ಕುಟ್ಟಪ್ಪ (97) ಜ. 23ರ (ಸೋಮವಾರ) ಬೆಳಗ್ಗೆ ನಿಧನರಾದರು. ಇವರ ಪತ್ನಿ ಶಾಂತಿ ಕುಟ್ಟಪ್ಪ (87) ಜನವರಿ 22ರ ಭಾನುವಾರ ನಿಧನರಾಗಿದ್ದರು.

ಮೃತರು ಪುತ್ರ, ಲೆಫ್ಟಿನೆಂಟ್ ಕರ್ನಲ್ ರವಿ ಅಯ್ಯಪ್ಪ, ಪುತ್ರಿ ಮೀರಾ ಮಾದಪ್ಪ, ಸೊಸೆ ಲೇಖಾ ಅಯ್ಯಪ್ಪ, ಅಳಿಯ ಅರವಿಂದ್, ಮೊಮ್ಮಕ್ಕಳು, ಮರಿಮಗ (grandchild) ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ.



ಡಾ. ಕಾಂಡಂಡ ಕೆ. ಕುಟ್ಟಪ್ಪ

ಡಾ. ಕೆ.ಕೆ. ಕುಟ್ಟಪ್ಪ ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ಮನೋವಿಜ್ಞಾನ ವಿಷಯದಲ್ಲಿ ಪಿಎಚ್.ಡಿ. ಪಡೆದ ನಂತರ 1941–45ರ ಅವಧಿಯಲ್ಲಿ ಬರ್ಮಾದಲ್ಲಿ ರಾಯಲ್ ಆರ್ಮಿ ಸರ್ವೀಸ್ ಪಡೆಯಲ್ಲಿ (ಆರ್‌ಎಎಸ್‌ಸಿ) ಸೇವೆ ಸಲ್ಲಿಸಿದ್ದರು. ಬೆಂಗಳೂರಿನ ಎಸ್‌ಎಸ್‌ಬಿಯಿಂದ 1983ರಲ್ಲಿ ನಿವೃತ್ತಿಯಾಗುವ ಮುನ್ನ ಸುಮಾರು 30 ವರ್ಷಗಳ ಕಾಲ ಸೇವೆಗಳ ಆಯ್ಕೆ ಮಂಡಳಿಯಲ್ಲಿ (ಸರ್ವೀಸ್ ಸೆಲೆಕ್ಷನ್ ಬೋರ್ಡ್–ಎಸ್‌ಎಸ್‌ಬಿ) ಮನಃಶಾಸ್ತ್ರಜ್ಞರಾಗಿ ಸೇವೆ ಸಲ್ಲಿಸಿದ್ದರು.

ಅಲ್ಲದೆ ಪುಣೆಯ ಆರ್ಮ್ಡ್ ಫೋರ್ಸಸ್ ಮೆಡಿಕಲ್ ಕಾಲೇಜಲ್ಲಿ (ಎಎಫ್‌ಎಂಸಿ) ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದರು. ಬರ್ಮಾದಲ್ಲಿದ್ದ ಸಂದರ್ಭದಲ್ಲಿ ಜನರಲ್ ಕೆ.ಎಸ್.ತಿಮ್ಮಯ್ಯ ಅವರನ್ನು ಬಹಳ ಹತ್ತಿರದಿಂದ ಬಲ್ಲವರಾಗಿದ್ದರು. ಡಾ. ಕೆ.ಕೆ. ಕುಟ್ಟಪ್ಪ ಅವರು ಜನರಲ್ ಕೆ.ಎಸ್. ತಿಮ್ಮಯ್ಯನವರ ಅಭಿಮಾನಿಯಾಗಿದ್ದು, ಅವರ ಜೀವನದ ಸಾಕಷ್ಟು ಸಾಮಗ್ರಿಗಳನ್ನು ಸಂಗ್ರಹಿಸಿದ್ದರು. ಅವರ ಸಮಾಧಿಯನ್ನು ದಕ್ಷಿಣ ಕಮಾಂಡ್ ಕೇಂದ್ರ ಕಚೇರಿಯ ಸಹಯೋಗದೊಂದಿಗೆ ಆರ್ಮಿ ಸರ್ವೀಸ್ ಕಾರ್ಪ್ಸ್ (ಎಎಸ್‌ಸಿ)ಗೆ ಸ್ಥಳಾಂತರಿಸಲು ವಿಶೇಷವಾಗಿ ಶ್ರಮಿಸಿದ್ದರು. ಡಾ. ಕುಟ್ಟಪ್ಪ ಅವರು ಸಮಾಜ ಸೇವಕರು ಕೂಡ ಆಗಿದ್ದರು.

ಇವರ ಅಂತ್ಯಕ್ರಿಯೆ ಗೋಕುಲಂನಲ್ಲಿರುವ ಚಿರಶಾಂತಿಧಾಮದಲ್ಲಿ ಅಂದೇ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೇನಾ ಸಿಬ್ಬಂದಿ ಮುಖ್ಯಸ್ಥರು ಮತ್ತು ನವದೆಹಲಿಯ ಎನ್‌ಸಿಸಿ ಮಹಾನಿರ್ದೇಶಕರ ಪ್ರತಿನಿಧಿಗಳು ರೀತ್ ಇರಿಸಿ, ಶ್ರದ್ಧಾಂಜಲಿ ಸಲ್ಲಿಸುವುದರೊಂದಿಗೆ ಡಾ. ಕಾಂಡಂಡ ಕೆ. ಕುಟ್ಟಪ್ಪ ಅವರ ಆತ್ಮಕ್ಕೆ ಶಾಂತಿ ಕೋರಿದ್ದಾರೆ.

ಸ್ವಾವಲಂಬಿ, ಪ್ರಗತಿಪರ ಭಾರತ ನಿರ್ಮಾಣಕ್ಕೆ ಪಣ ತೊಡಿ

ಕೆ.ಆರ್.ಕ್ಷೇತ್ರದಲ್ಲಿ ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ ನೀಡಿ ಸಚಿವ ಡಾ.ಅಶ್ವತ್ಥನಾರಾಯಣ್ ಕಾರ್ಯಕರ್ತರಿಗೆ ಕರೆ





ಮೈಸೂರಿನ ಕೆ.ಆರ್ ಕ್ಷೇತ್ರದ ವಾರ್ಡ್ ನಂ.48ರಲ್ಲಿ ಅಂಗಡಿ ಮತ್ತು ವಾಹನಗಳ ಗೋಡೆಗಳ ಮೇಲೆ ಬಿಜೆಪಿ ಚಿಹ್ನೆಯುಳ್ಳ ಸ್ಟಿಕ್ಕರ್ ಅಂಟಿಸಿ, ವಿಜಯ ಸಂಕಲ್ಪ ಯಾತ್ರೆಗೆ ಸಚಿವ ಡಾ.ಅಶ್ವಥ್‌ನಾರಾಯಣ್ ಚಾಲನೆ ನೀಡಿದರು. ಶಾಸಕ ಎಸ್.ಎ.ರಾಮದಾಸ್, ಮೇಯರ್ ಶಿವಕುಮಾರ್, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಇದ್ದಾರೆ. ಬಲಚಿತ್ರದಲ್ಲಿ ಅಶ್ವಥ್ ನಾರಾಯಣ್‌ರಿಗೆ ಭಾರೀ ಗಾತ್ರದ ಸೇಬಿನ ಹಾರ ಹಾಕಲಾಯಿತು.

ಮೈಸೂರು, ಜ.28(ಎಂಟಿವೈ)–ಮೈಸೂರಿನ ಕೆ.ಆರ್. ವಿಧಾನಸಭಾ ಕ್ಷೇತ್ರದಲ್ಲಿ ವಿಜಯ ಸಂಕಲ್ಪ ಯಾತ್ರೆಗೆ ಸಚಿವ ಡಾ.ಅಶ್ವಥ್ ನಾರಾಯಣ್ ಚಾಲನೆ ನೀಡಿ, ಮನೆ ಮನೆಗೆ ಕಮಲ ಚಿಹ್ನೆಯುಳ್ಳ ಸ್ಟಿಕ್ಕರ್ ಅಂಟಿಸುವ ಮೂಲಕ ಮತ್ತೊಮ್ಮೆ ಬಿಜೆಪಿ ಬೆಂಬಲಿಸುವಂತೆ ಕೋರಿದರು.

> ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಪಕ್ಷದಲ್ಲಿ ಕೆಲವು ಬದಲಾವಣೆ ಮಾಡಲಾಗಿದೆ. ಅದೇ ರೀತಿ ಮಂಡ್ಯ ಜಿಲ್ಲೆಯ ಉಸ್ತುವಾರಿಯಲ್ಲೂ ಬದಲಾವಣೆ ತರಲಾಗಿದೆ. ಇದರಲ್ಲಿ ಯಾವುದೇ ಗೊಂದಲವೂ ಇಲ್ಲ. ಅಲ್ಲಿನ ಜವಾಬ್ದಾರಿಯನ್ನು ಈ ಹಿಂದೆ ಸಚಿವ ಕೆ.ಗೋಪಾಲಯ್ಯ ನೋಡಿಕೊಳ್ಳುತ್ತಿದ್ದರು. ಈಗ ಕಂದಾಯ ಸಚಿವ ಆರ್.ಅಶೋಕ್ ಅವರಿಗೆ ವಹಿಸಲಾಗಿದೆ. ಅಶೋಕ್ ಅವರು ಈ ಹಿಂದೆಯೂ ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಕೆಲಸ ಮಾಡಿರುವ ಅನುಭವವಿದೆ. ಚುನಾವಣೆಯ ಹಿತದೃಷ್ಟಿಯಿಂದ ಕೆಲವು ಬದಲಾವಣೆ ಮಾಡಲಾಗಿದೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ.
> – ಡಾ. ಸಿ.ಎನ್.ಅಶ್ವಥ್ ನಾರಾಯಣ್, ಉನ್ನತ ಶಿಕ್ಷಣ ಸಚಿವ

ಕೃಷ್ಣರಾಜ ವಿಧಾನಸಭಾ ಕ್ಷೇತ್ರ ಕನ್ನೇಗೌಡನ ಕೊಪ್ಪಲು ಬಡಾವಣೆಯ ಪಾಲಿಕೆಯ ವಾರ್ಡ್ ನಂ.48ರಲ್ಲಿ ಶನಿವಾರ ಆಯೋಜಿಸಿದ್ದ ವಿಜಯ ಸಂಕಲ್ಪ ಯಾತ್ರೆ ಅಭಿಯಾನದ ಕಾರ್ಯಕ್ರಮದಲ್ಲಿ ಭಾರತಾಂಬೆ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಕಾರ್ಯಕರ್ತರ ಮನೆ ಮನೆಗೆ, ಅಂಗಡಿ ಹಾಗೂ ವಾಹನಗಳ ಮೇಲೆ ಬಿಜೆಪಿ ಚಿಹ್ನೆಯುಳ್ಳ ಸ್ಟಿಕ್ಕರ್ ಅಂಟಿಸಿ ಚಾಲನೆ ನೀಡಿದರು.

ಬಳಿಕ ಸಚಿವ ಡಾ.ಅಶ್ವಥ್‌ನಾರಾಯಣ್ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ವತಿಯಿಂದ ನಡೆಸುತ್ತಿರುವ ವಿಜಯ ಸಂಕಲ್ಪ ಯಾತ್ರೆಗೆ ಉತ್ತಮ ರೀತಿಯಲ್ಲಿ ಜನ ಬೆಂಬಲ ವ್ಯಕ್ತವಾಗುತ್ತಿದೆ. ಸದೃಢ, ಸ್ವಾವಲಂಬಿ ಹಾಗೂ ಪ್ರಗತಿಪರ ಭಾರತ ನಿರ್ಮಾಣ ಮಾಡಲು ಪಣ ತೊಡಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಉತ್ತಮ ಯೋಜನೆಗಳನ್ನು ಪ್ರತಿಯೊಬ್ಬ ಕಾರ್ಯಕರ್ತರು ಎಲ್ಲಾ ಮನೆಗಳಿಗೆ ತಿಳಿಸಬೇಕು. ಮತ್ತೊಮ್ಮೆ ಬಿಜೆಪಿ ಬೆಂಬಲಿಸುವಂತೆ ಜನರಲ್ಲಿ ಮನವಿ ಮಾಡಬೇಕು ಎಂದು ಸಲಹೆ ನೀಡಿದರು.

ಚುನಾವಣೆಯಲ್ಲಿ ಕಾಂಗ್ರೆಸ್, ಜೆಡಿಎಸ್ ಸಮಾನ ಶತ್ರುಗಳಾಗಿವೆ. ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಯಾವ ಪಕ್ಷದೊಂದಿಗೂ ಒಳ ಒಪ್ಪಂದ ಮಾಡಿಕೊಳ್ಳುವುದಿಲ್ಲ. ಬಿಜೆಪಿ ಮೇಲೆ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಮಾಡುತ್ತಿರುವ ಆರೋಪ ನಿರಾಧಾರ. ಅವರಿಬ್ಬರು ಪುರುಸೊತ್ತಾಗಿದ್ದಾರೆ. ಹಾಗಾಗಿ ಸುಳ್ಳು ಆರೋಪ ಮಾಡುವ ಮೂಲಕ ಜನರಿಗೆ ಮನರಂಜನೆ ನೀಡುತ್ತಿದ್ದಾರೆ. ಇವರ ಮಾತಿಗೆ ಜನ ಮನ್ನಣೆ ಕೊಡುವುದಿಲ್ಲ. ಭ್ರಷ್ಟಾಚಾರ ಬೆಳೆಸಿದ್ದೇ ಕಾಂಗ್ರೆಸ್. ಈಗ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ನಾಡಿನ ಸಾಲದ ಹೊರೆಯನ್ನು ಹೆಚ್ಚಿಸುತ್ತಾರೆ. ಕಾಂಗ್ರೆಸ್‌ನಿಂದ ಜನಪರ ಕಾರ್ಯಕ್ರಮ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಸಿದ್ದರಾಮಯ್ಯನವರು ಅಧಿಕಾರದಲ್ಲಿದ್ದಾಗ ಮೈಸೂರು ಜಿಲ್ಲೆಗೆ ಒಂದೇ ಒಂದು ಒಳ್ಳೆಯ ಯೋಜನೆಯನ್ನೂ ಕೊಡಲಿಲ್ಲ. ಬದಲಿಗೆ ಕೋವಿಡ್ ಸಮಯದಲ್ಲಿ ಲಸಿಕೆ ತೆಗೆದುಕೊಳ್ಳದಂತೆ ಮುಗ್ಧ ಜನರನ್ನು ದಾರಿ ತಪ್ಪಿಸುತ್ತಿದ್ದರು. ಪ್ರಪಂಚದಲ್ಲೇ ಅತ್ಯುತ್ತಮವಾದ ಲಸಿಕೆ ಉತ್ಪಾದನೆ ಮಾಡಿ ಜನರ ಜೀವ ಉಳಿಸಲು ಮೋದಿ ಮುಂದಾಗಿದ್ದರೆ, ಕಾಂಗ್ರೆಸ್ ನಾಯಕರು ಟೀಕೆ ಮಾಡಿಕೊಂಡು ಕಾಲ ಕಳೆದರು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ದಶಕಗಳ ಕಾಲ ಆಳ್ವಿಕೆ ನಡೆಸಿದರೂ ಜನರಿಗೆ ಕುಡಿಯುವ ನೀರು, ಆಸ್ಪತ್ರೆ, ಗುಣಮಟ್ಟದ ಶಿಕ್ಷಣ, ರಸ್ತೆ ಸೇರಿದಂತೆ ಏನನ್ನೂ ಒದಗಿಸಲಿಲ್ಲ. ಈಗ ಸೋಲಿನ ಭೀತಿ ಮತ್ತು ಹತಾಶೆಯಲ್ಲಿ 200 ಯೂನಿಟ್ ವಿದ್ಯುತ್ ಸೇರಿದಂತೆ ಈಡೇರಿಸಲು ಸಾಧ್ಯವಿಲ್ಲದ ಭರವಸೆಗಳನ್ನು ಕೊಡುತ್ತಿದ್ದಾರೆ. ಜನಪರ ಕೆಲಸಗಳನ್ನು ಮಾಡುತ್ತಿರುವ ಬಿಜೆಪಿಯ ಬಲವರ್ಧನೆಗೆ ವಿಜಯ ಸಂಕಲ್ಪ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ಮೂಲಕ ಜನರ ಮನೆ ಮನೆಯನ್ನು ತಲುಪಲಾಗುವುದು. ನರೇಂದ್ರಮೋದಿ ಸರ್ಕಾರ ಮಹಿಳೆಯರ ಬಲವರ್ಧನೆಗೆ, ಕಲ್ಯಾಣಕ್ಕಾಗಿ ಶಾಶ್ವತ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುತ್ತಿದ್ದಾರೆ. ಆದರೆ, ಗೃಹಲಕ್ಷ್ಮೀ ಯೋಜನೆ ಜಾರಿಗೊಳಿಸಿ ಪ್ರತಿ ತಿಂಗಳು 2 ಸಾವಿರ ರೂ.ಕೊಡುತ್ತೇವೆಂದು ಹೇಳಿ ಮತ್ತಷ್ಟು ಬಡವರನ್ನಾಗಿ ಮಾಡುವ ಯತ್ನ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದರು.

ಬೃಹತ್ ಗಾತ್ರದ ಸೇಬಿನ ಹಾರ: ವಿಜಯ ಸಂಕಲ್ಪ ಯಾತ್ರೆ ಅಂಗವಾಗಿ ಕನ್ನೇಗೌಡನ ಕೊಪ್ಪಲಿನ ಜಯನಗರದ ಚಾಮುಂಡೇಶ್ವರಿ ವೃತ್ತದಿಂದ ಇಸ್ಕಾನ್ ರಸ್ತೆಯವರೆಗೆ ತೆರೆದ ಜೀಪಿನಲ್ಲಿ ಸಹಸ್ರಾರು ಕಾರ್ಯಕರ್ತರ ಘೋಷಣೆಗಳ ನಡುವೆ ಮೆರವಣಿಗೆ ನಡೆಯಿತು. ಮುಖ್ಯರಸ್ತೆಯಲ್ಲಿ ಕಾರ್ಯಕರ್ತರು ಸಚಿವರಿಗೆ ಜೆಸಿಬಿಯಿಂದ ಭಾರೀ ಗಾತ್ರದ ಸೇಬಿನ ಹಾರ ಹಾಕಿ ಸಂಭ್ರಮಿಸಿದರು.

ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್, ಮೇಯರ್ ಶಿವಕುಮಾರ್, ಮೈಸೂರು ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್.ಶ್ರೀವತ್ಸ, ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ಎಸ್‌ಸಿ ಮೋರ್ಚಾದ ಜಯರಾಮ್, ಯುವ ಮುಖಂಡ ಕವೀಶ್‌ಗೌಡ, ಕಾವೇರಿ ಫೌಂಡೇಷನ್‌ನ ಮುಖ್ಯಸ್ಥ ಡಾ. ಚಂದ್ರಶೇಖರ್, ಕೆ.ಆರ್.ಕ್ಷೇತ್ರದ ಅಧ್ಯಕ್ಷ ವಡಿವೇಲು ಇನ್ನಿತರರು ಹಾಜರಿದ್ದರು.

ಹೊಸ ಬೆಳಕು ಕವನ ಸಂಕಲನ ಬಿಡುಗಡೆ



ಮೈಸೂರು, ಜ.28(ಜಿಎ)– ಮೈಸೂರಿನ ವಿಜಯನಗರದಲ್ಲಿರುವ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಕವಯಿತ್ರಿ ಎನ್.ಶಾಂತಕುಮಾರಿ ರಚಿಸಿರುವ 'ಹೊಸ ಬೆಳಕು' ಕವನ ಸಂಕಲನವನ್ನು ಅಭಿರುಚಿ ಬಳಗದ ಸಂಸ್ಥಾಪಕರಾದ ಎನ್.ವಿ.ರಮೇಶ್ ಬಿಡುಗಡೆಗೊಳಿಸಿದರು.

ನಂತರ ಕೃತಿ ಕುರಿತು ಮಾತನಾಡಿದ ಅವರು, ಸಂಸಾರದ ಜಂಜಾಟದ ನಡುವೆ ಕವನ ಸಂಕಲನ ರಚಿಸಿರುವುದು ನಿಜಕ್ಕೂ ಶ್ಲಾಘನೀಯ. ತಮ್ಮ ಕುಟುಂಬ ಹಾಗೂ ನಿತ್ಯ ಜೀವನದಲ್ಲಿ ನಡೆಯುತ್ತಿರುವ ಘಟನೆಗಳನ್ನಾಧರಿಸಿ ಬರೆದಿರುವ ಕವನ ಸಂಕಲನ ಬಹಳ ವಿಶೇಷವಾಗಿದೆ. ಇಲ್ಲಿನ ಪ್ರತಿಯೊಂದು ಕವನವೂ ಅನುಭವದಿಂದ ಮೂಡಿಬಂದಿವೆ. ಕವಯಿತ್ರಿಯ ಭಾವತೀವ್ರತೆಯ ಪದಗಳು ಹೆಚ್ಚು ಕಾಡುತ್ತವೆ ಎಂದು ಪದ್ಯಗಳನ್ನು ಓದಿ ವಿವರಿಸಿ, ಈ ಕವನ ಸಂಕಲನ ರಚಿಸುವುದಕ್ಕೆ ಅವರ ಪತಿ ಪ್ರೊ.ನಾಗರಾಜ್ ಸಹಕಾರ ನೀಡಿದ್ದಾರೆ ಎಂದರು.

ಹಿರಿಯ ಸಾಹಿತಿಗಳ ನಡುವೆ ಹೊಸದಾಗಿ ಪುಸ್ತಕಗಳನ್ನು ಬರೆಯುತ್ತಿರುವ ಉದಯೋನ್ಮುಖ ಸಾಹಿತಿಗಳಿಗೆ ಅವಕಾಶ ಒದಗಿಸುವ ಕೆಲಸ ಆಗಬೇಕಿದೆ. ಇಂತಹ ಸಾಹಿತಿಗಳ ಪುಸ್ತಕಗಳನ್ನು ನಾವು ಓದಿ ತಿಳಿದುಕೊಳ್ಳಬೇಕಾದದ್ದು ಸಾಕಷ್ಟಿವೆ. ಸರ್ಕಾರ ಇಂತಹ ಹೊಸ ಸಾಹಿತಿಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕಿದೆ ಎಂದರು.


ಕಥೆ–ಕವನಗಳು ಜೀವನವನ್ನು ಬದಲಿಸುತ್ತವೆ. ಸಾಹಿತ್ಯಕ್ಕೆ ಜೀವ ನೀಡುವ ಶಕ್ತಿಯೂ ಇದೆ. ಅಂತಹ ಅಪರೂಪದ ಶಕ್ತಿಯುಳ್ಳ ಕವನಗಳನ್ನು ಇವರು ಬರೆದಿದ್ದಾರೆ. ಪುಸ್ತಕ ನೋಡಲು ಚಿಕ್ಕದಾಗಿ ಕಾಣುತ್ತಿದೆ ಆದರೆ, ಅನೇಕ ವಿಷಯಗಳನ್ನು ಈ ಕವನ ಸಂಕಲ ಒಳಗೊಂಡಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಉಪಾಧ್ಯಕ್ಷ ಎನ್. ಅನಂತ, ಜಂಟಿ ಕಾರ್ಯದರ್ಶಿ ಕೆಂಪಣ್ಣ, ತಾಲೂಕು ಅಧ್ಯಕ್ಷ ಎಸ್.ಮಂಜುನಾಥ್, ಹಗಲು ಯೋಗಕ್ಷೇಮ ಹಿರಿಯ ನಾಗರಿಕರ ಕೇಂದ್ರದ ಅಧ್ಯಕ್ಷ ಪ್ರಭುಸ್ವಾಮಿ, ಡಾ. ನಾಗರಾಜ್, ಪುಟ್ಟಸ್ವಾಮಿ, ಚಂದ್ರಕಲಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಜಯಂತೋತ್ಸವ

ಮೈಸೂರು: ಸ್ವತಂತ್ರ ಭಾರತದ ಭಾರತೀಯ ಸೇನೆಯ ಮೊಟ್ಟ ಮೊದಲ ಮಹಾದಂಡನಾಯಕರಾಗಿದ್ದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರ 124ನೇ ಜನ್ಮದಿನಾಚರಣೆ ಯನ್ನು ನಗರದ ಹೆಬ್ಬಾಳಿನ ಶ್ರೀಭೈರವೇಶ್ವರ ನಗರದ ಭೈರವೇಶ್ವರ ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಭಾನುವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ಭೈರವೇಶ್ವರ ಶಿಕ್ಷಣ ಸಂಸ್ಥೆ, ಕಾವೇರಿ ಬಳಗ ಹಾಗೂ ಹಿರಣ್ಮಯಿ ಪ್ರತಿಷ್ಠಾನ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಪ್ರೌಢಶಾಲೆಯ ಆವರಣದಲ್ಲಿ ನಡೆಯಲಿರುವ ಈ ಕಾರ್ಯಕ್ರಮದ ಅಧ್ಯಕ್ಷತೆ ಯನ್ನು ಭೈರವೇಶ್ವರ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಸೌಮ್ಯ ವಹಿಸುವರು. ಸಾಹಿತಿ ಹಾಗೂ ಪತ್ರಕರ್ತ ಬನ್ನೂರು ಕೆ.ರಾಜು ಮುಖ್ಯ ಭಾಷಣ ಮಾಡುವರು. ಲೇಖಕಿ ಹಾಗೂ ಕಲಾವಿದೆ ಡಾ.ಜಮುನಾರಾಣಿ ಮಿರ್ಲೆ, ಭೈರವೇಶ್ವರ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಪಂಚಾಕ್ಷರಿ, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷರೂ ಆದ ಶಿಕ್ಷಣ ತಜ್ಞ ಎ.ಸಂಗಪ್ಪ, ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ, ಚಿತ್ರಕಲಾ ಶಿಕ್ಷಕ ಎಂ.ಆರ್.ಮನೋಹರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಇದೇ ಸಂದರ್ಭ ದಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಸ್ಮರಣಾರ್ಥ ನಡೆಸಿದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ, ಅಭಿನಂದಿಸಲಾಗುವುದು.





2023ನೇ ಸಾಲಿನ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಪುರಾತತ್ವ ಶಾಸ್ತ್ರಜ್ಞ ಎಸ್.ಸುಬ್ಬರಾಮನ್ ಅವರನ್ನು ವಿಪ್ರ ಮುಖಂಡರಾದ ನಂ.ಶ್ರೀಕಂಠ ಕುಮಾರ್, ಹೊಯ್ಸಳ ಕರ್ನಾಟಕ ಸಂಘದ ಸಹಕಾರ್ಯದರ್ಶಿ ಎಸ್.ರಂಗನಾಥ, ಶಂಕರನಾರಾಯಣ್, ಡಾ.ಲಕ್ಷ್ಮೀದೇವಿ ಮತ್ತು ಎಸ್.ದಿನೇಶ್ ಅಭಿನಂದಿಸಿದರು.

ಮೈಸೂರಲ್ಲಿ ಎಬಿವಿಪಿ ಕೇಂದ್ರ ಕಾರ್ಯಕಾರಿ ಸಮಿತಿ ಸಭೆ ಆರಂಭ



ಮೈಸೂರು,ಜ.28(ಪಿಎಂ)–ಇಂದಿನಿಂದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ (ಎಬಿವಿಪಿ) ಕೇಂದ್ರ ಕಾರ್ಯಕಾರಿ ಸಮಿತಿ ಸಭೆ ಮೈಸೂರಿನಲ್ಲಿ ಆರಂಭವಾಗಿದ್ದು, ಜಿಡಿಪಿಯಲ್ಲಿ ಶೇ.6ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡಬೇಕೆಂಬುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಸರ್ಕಾರವನ್ನು ಒತ್ತಾಯಿಸಲು ನಿರ್ಣಯ ಕೈಗೊಳ್ಳಲಾಗುವುದು ಎಂದು ಎಬಿವಿಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಯಾಜ್ಞವಲ್ಕ್ಯ ಶುಕ್ಲಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಣಸೂರು ರಸ್ತೆಯ ಕರ್ನಾಟಕ ಕೃಷಿ ಮಾರಾಟ ಅಧ್ಯಯನ ಸಂಸ್ಥೆ ಸಭಾಂಗಣದಲ್ಲಿ ಇಂದು (ಜ.28) ಎಬಿವಿಪಿ ಕೇಂದ್ರ ಕಾರ್ಯಕಾರಿ ಸಮಿತಿ ಸಭೆ ಆರಂಭವಾಗಿದೆ. ನಾಳೆವರೆಗೆ (ಜ.29) ಸಭೆ ನಡೆಯಲಿದೆ. ಸಭೆಯಲ್ಲಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಹಲವು ಬೇಡಿಕೆಗಳ ಸಂಬಂಧ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದರು.

ಶಿಕ್ಷಣ ಕ್ಷೇತ್ರಕ್ಕೆ ಜಿಡಿಪಿಯ ಶೇ.6ರಷ್ಟು ಬಜೆಟ್ ಮೀಸಲಿಟ್ಟು, ಈ ಪೈಕಿ ಶೇ.2ರ ಬಜೆಟ್ ಅನ್ನು ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಮೀಸಲಿಡಬೇಕು. ಇದರೊಂದಿಗೆ ಶಿಕ್ಷಣ ನೀತಿಯಲ್ಲಿ ನಮೂದಿಸಿರುವ ವಿವಿಧ ಸಂಸ್ಥೆಗಳಿಗೆ ರೂಪ ನೀಡಲು ಕೇಂದ್ರ ಸರ್ಕಾರ ಹಂತ ಹಂತವಾಗಿ ಬಜೆಟ್ ಬಿಡುಗಡೆ ಮಾಡಬೇಕು. ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳ ಪ್ರಮಾಣಕ್ಕೆ ಅನುಗುಣವಾಗಿ ಸಂಪನ್ಮೂಲಗಳ ಒದಗಿಸಲು ಆಯಾಯ ರಾಜ್ಯ ಸರ್ಕಾರಗಳು ಕ್ರಮ ವಹಿಸಬೇಕೆಂದು ನಿರ್ಣಯ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ನೀಟ್–ಪಿಜಿ ಮತ್ತು ಎಇಇಗೆ ಸಂಬಂಧಿಸಿದ ಸಮಸ್ಯೆಗಳಿಗೆ ಶೀಘ್ರ ಪರಿಹಾರ ನೀಡಬೇಕು. ಪರೀಕ್ಷೆಗಳ ನಿರ್ವಹಣೆಯಲ್ಲಿನ ಸಾಂಸ್ಥಿಕ ಗೊಂದಲ, ತಾಂತ್ರಿಕ ದೋಷಗಳನ್ನು ಪರಿಹರಿಸಿ, ನಿಗದಿತ ಸಮಯಕ್ಕೆ ಪರೀಕ್ಷಾ ವೇಳಾಪಟ್ಟಿ ನೀಡಬೇಕೆಂದು ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಎಬಿವಿಪಿ ರಾಷ್ಟ್ರೀಯ ಕಾರ್ಯದರ್ಶಿ ಹರಿಕೃಷ್ಣ ನಾಗೊತು, ಕರ್ನಾಟಕ ದಕ್ಷಿಣ ಪ್ರಾಂತ್ಯದ ಕಾರ್ಯದರ್ಶಿ ಪ್ರೇಮಶ್ರೀ, ಸಹ ಕಾರ್ಯದರ್ಶಿ ವರುಣ್ ಮಲ್ಲೇಲು, ಜಿಲ್ಲಾ ಸಂಚಾಲಕ ಶಿವು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕಾರು ಬಹುಮಾನದ ಆಮಿಷ ತೋರಿ ಆನ್‌ಲೈನ್‌ನಲ್ಲಿ 25 ಸಾವಿರ ರೂ. ವಂಚನೆ

ಚಾಮರಾಜನಗರ, ಜ. 28– ಕಾರು ಬಹುಮಾನ ಬಂದಿದೆ ಎಂದು ಪೋಸ್ಟ್ ಕಳುಹಿಸಿ ಆನ್‌ಲೈನ್ ಮೂಲಕ ವ್ಯಕ್ತಿಯೋರ್ವನಿಗೆ 25,600 ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ. ಇರಸವಾಡಿ ಸಮೀಪದ ಸುತ್ತೂರು ಗ್ರಾಮದ ಎಸ್.ಎಂ.ರಘು ವಂಚನೆಗೊಳಗಾದವರಾಗಿದ್ದು, ಇವರ ವಿಳಾಸಕ್ಕೆ ಬಂದ ಸ್ಪೀಡ್ ಪೋಸ್ಟ್‌ನಲ್ಲಿ ಮಿಶೊ ಕಂಪನಿಯಿಂದ ಕಾರು ಬಹುಮಾನ ಬಂದಿರುವ ಕೂಪನ್ ರವಾನಿಸಲಾಗಿತ್ತು. ಅದರಲ್ಲಿದ್ದ ನಂಬರ್‌ಗೆ ಇವರು ಕರೆ ಮಾಡಿದಾಗ ಕಾರನ್ನು ಪಡೆಯಲು ಮೊದಲಿಗೆ 25,600 ರೂ. ಪಾವತಿಸಬೇಕೆಂದು ತಿಳಿಸಲಾಗಿದ್ದು, ಅದರಂತೆ ಅವರು ಗೂಗಲ್‌ಪೇ ಮೂಲಕ ಹಣ ರವಾನಿಸಿದ್ದಾರೆ. ಮತ್ತೆ 84,200 ರೂ. ವರ್ಗಾಯಿಸುವಂತೆ ಹೇಳಿದಾಗ ಅನುಮಾನಗೊಂಡ ರಘು, ಚಾಮರಾಜನಗರ ಜಿಲ್ಲಾ ಸೆನ್ ಠಾಣೆಗೆ ದೂರು ಸಲ್ಲಿಸಿದ್ದಾರೆ.


ಡಬಲ್ ಇಂಜಿನ್ ಸರ್ಕಾರದಿಂದಲೇ ಪ್ರಗತಿಪರ ಕೆಲಸಗಳು

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮರ್ಥನೆ

ಬೆಂಗಳೂರು, ಜ.28 (ಕೆಎಂಶಿ)–ಕೇಂದ್ರ ಮತ್ತು ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರ ಇರುವುದರಿಂದಲೇ ನಾವು ಪ್ರಗತಿಪರ ಕೆಲಸ ಮಾಡಲು ಸಾಧ್ಯವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರ ಇಡೀ ದೇಶ ನಾಡು ಕಟ್ಟಲು ಒಂದಾಗಿ ಕೆಲಸ ಮಾಡಿದರೆ ಈ ಕಾರ್ಯ ಯಶಸ್ವಿಯಾಗುತ್ತದೆ. ಯಶೋಗಾಥೆಯ ಪಥದಲ್ಲಿ ನಾವು ನಡೆಯುತ್ತೇವೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ಭಾರತ ದೇಶ ವಿಶ್ವದಲ್ಲಿ ಅತ್ಯಂತ ಸದೃಢ, ಸುರಕ್ಷಿತ ಮತ್ತು ಆರ್ಥಿಕವಾಗಿ ಬೆಳೆಯುತ್ತಿರುವ ರಾಷ್ಟ್ರ, ನಾವು ಅಮೃತ ಮಹೋತ್ಸವ ಮಾಡಿದ್ದೇವೆ. ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ಅದನ್ನು ಅಮೃತ ಕಾಲ ಎಂದು ಹೇಳಿದ್ದಾರೆ. ಮುಂದಿನ 25 ವರ್ಷಗಳಲ್ಲಿ ಯುವಕರ ಪಾತ್ರ ಬಹಳ ಮುಖ್ಯ. ಬಿವಿಬಿ ಕಾಲೇಜು, ಕೆಎಲ್‌ಇ ಸಂಸ್ಥೆ ನವ ಭಾರತದ ನಿರ್ಮಾಣದಲ್ಲಿ ಪಾತ್ರವಹಿಸಲು ಎಲ್ಲ ಸಿದ್ಧತೆ ಮಾಡಿಕೊಂಡಿದೆ. ಸಂಸ್ಥೆಯ ಸಾಧನೆಯಿಂದ ನನಗೆ ಬಹಳ ಸಂತೋಷವಾಗಿದ್ದು, ಈ ಸಂಸ್ಥೆ ದೇಶ ಕಟ್ಟುವುದರಲ್ಲಿ ಪ್ರಮುಖ ಸಂಸ್ಥೆಯಾಗಿ ಹೊರ ಹೊಮ್ಮಲಿ ಎಂದು ಆಶಿಸಿ, ನಾವು ಬದುಕಿನಲ್ಲಿ ಎಷ್ಟೇ ದೊಡ್ಡ ಸ್ಥಾನಕ್ಕೆ ಹೋದರೂ, ನಾವು ಕಲಿತ ಶಾಲೆ, ಗುರುಗಳನ್ನು ಎಂದು ಕೂಡ ಮರೆಯಬಾರದು. ಅದು ನಮ್ಮ ಧರ್ಮ ಎಂದರು. ಕರ್ನಾಟಕ ಅತ್ಯಂತ ಪ್ರಗತಿಪರ ರಾಜ್ಯ. ಪ್ರಧಾನಿಯವರು ಐದು ಟ್ರಿಲಿಯನ್ ಆರ್ಥಿಕತೆಯ ಬಗ್ಗೆ ಹೇಳಿದ್ದಾರೆ. ಅದರಲ್ಲಿ ನಮ್ಮ ರಾಜ್ಯದಿಂದ 1 ಟ್ರಿಲಿಯನ್ ಆರ್ಥಿಕತೆ ಗುರಿಯ ಸಾಧನೆಯನ್ನು 2025ರೊಳಗೆ ಮಾಡಬೇಕು ಎನ್ನುವ ಕ್ರಮಗಳನ್ನು ನಾವು ಮಾಡಿದ್ದೇವೆ ಎಂದರು.



ಆರ್ಥಿಕವಾಗಿ ಒಂದು ರಾಜ್ಯ ಬೆಳೆದರೆ, ಶೈಕ್ಷಣಿಕವಾಗಿ ಆರೋಗ್ಯದಿಂದ ನಮ್ಮ ಯುವಕರ ಕೈಗೆ ಕೆಲಸ ಸಿಗುತ್ತದೆ. ಸ್ವಾವಲಂಬನೆ ಬದುಕು ಬದುಕಲು ಸಾಧ್ಯ ವಾಗುತ್ತದೆ. ಆ ನಿಟ್ಟಿನಲ್ಲಿ ನಮ್ಮ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ ಎಂದರು. ಕರ್ನಾಟಕ ಪ್ರಗತಿಯಲ್ಲಿ ಇಡೀ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಫಾರಿನ್ ಡೈರೆಕ್ಟ್ ಇನ್ವೆಸ್ಟ್‌ಮೆಂಟ್‌ನಲ್ಲಿ ಇಡೀ ದೇಶದಲ್ಲಿಯೇ ಕರ್ನಾಟಕ ಮುಂಚೂಣಿಯಲ್ಲಿದೆ. ಮೊದಲ ಸೆಮಿ ಕಂಡಕ್ಟರ್, ಮೊದಲ ಆರ್ ಆಂಡ್ ಡಿ ಪಾಲಸಿಯನ್ನು ಕರ್ನಾಟಕದಲ್ಲಿ ತಂದಿದ್ದೇವೆ. ಮೊದಲ ಎಂಪ್ಲಾಯ್ಮೆಂಟ್ ಪಾಲಿಸಿಯನ್ನು ಮಾಡಿದ್ದೇವೆ ಎಂದರು.

ಅಮಿತ್ ಶಾ ಅವರು ಗೃಹ ಇಲಾಖೆಯಲ್ಲಿ ಬಹಳ ದೊಡ್ಡ ಬದಲಾವಣೆ ಮಾಡಿದ್ದಾರೆ. ಕರ್ನಾಟಕಕ್ಕೆ ಫೊರೆನ್ಸಿಕ್ ಲ್ಯಾಬ್ ಯೂನಿವರ್ಸಿಟಿಯನ್ನು ಕೊಟ್ಟಿದ್ದಾರೆ. ಅಲ್ಲದೇ ಮಹಿಳೆಯರ ರಕ್ಷಣೆಗಾಗಿ ಸುಮಾರು 700 ಕೋಟಿ ಅನುದಾನ ನೀಡಿದ್ದಾರೆ. ವಿಶೇಷವಾಗಿ ಬೆಂಗಳೂರಿನಲ್ಲಿ 450 ಕೋಟಿ ರೂ ಯೋಜನೆ ಕೊಟ್ಟಿದ್ದಾರೆ. ಅಮಿತ್ ಶಾ ಅವರು ಸಹಕಾರ ಸಚಿವರಾಗಿದ್ದಾರೆ. ಸಹಕಾರ ಕ್ಷೇತ್ರದಲ್ಲಿಯೂ ಕ್ರಾಂತಿಯಾಗಿ, ಕರ್ನಾಟಕ ಮತ್ತು ಗುಜರಾತಿನಲ್ಲಿ ದೊಡ್ಡ ಪ್ರಮಾಣದ ಶಕ್ತಿಯಾಗಿ ಹೊರಹೊಮ್ಮಿ, ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ಹೇಳಿದರು.

ಮೇಲುಕೋಟೆಯಲ್ಲಿ ರಥಸಪ್ತಮಿ ಸಂಭ್ರಮ

ಚೆಲುವನ ವೈಭವದ ಸೂರ್ಯಮಂಡಲ ವಾಹನೋತ್ಸವ

24ನೇ ರಾಜ್ಯಮಟ್ಟದ ಜಾನಪದ ಕಲಾಮೇಳಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಚಾಲನೆ





ಜಾನಪದ ಕಲಾಮೇಳದಲ್ಲಿ ವಿದೇಶಿಯರು

ಮೇಲುಕೋಟೆ: ಜಾನಪದ ಕಲಾಮೇಳದಲ್ಲಿ ಮೇಲುಕೋಟೆ ಐಯ್ಯಂಗಾರ್ ಉಡುಪಿನೊಂದಿಗೆ ವಿದೇಶಿಯರು ಭಾಗವಹಿಸಿ ಕಲಾಮೇಳ ಆಸ್ವಾದಿಸಿದ್ದು ಗಮನ ಸೆಳೆಯಿತು. ಆಧ್ಯಾತ್ಮ ಗುರು ಡಾ.ಶೆಲ್ವಪ್ಪಿಳ್ಳೆ ಅಯ್ಯಂಗಾರ್‌ರೊಡನೆ ಅಮೆರಿಕಾ, ಲಂಡನ್, ನ್ಯೂಜೆರ್ಸಿಯಲ್ಲಿ ಹಿಂದೂ ಧರ್ಮಪ್ರಸಾರ ಮಾಡುತ್ತಿರುವ ಅಮರ, ಕಲ್ಕಿ ಮತ್ತಿತರರು ಹನುಮಾನ್ ಹಾಗೂ ಜನಪದ ಕಲಾ ತಂಡಗಳೊಡನೆ ಫೋಟೋ ತೆಗೆದುಕೊಂಡರು.

ಮೇಲುಕೋಟೆ, ಜ.28– ರಥಸಪ್ತಮಿ ಅಂಗವಾಗಿ ಶ್ರೀಚೆಲುವನಾರಾಯಣಸ್ವಾಮಿ ಸ್ವರ್ಣಲೇಪಿತ ಸೂರ್ಯಮಂಡಲ ವಾಹನೋತ್ಸವ ಶನಿವಾರ ಸ್ಥಾನೀಕಂ ನಾಗರಾಜಯ್ಯಂಗಾರ್ ಸಾಂಸ್ಕೃತಿಕ ವೇದಿಕೆ ಏರ್ಪಡಿಸಿದ್ದ 24ನೇ ರಾಜ್ಯಮಟ್ಟದ ಜಾನಪದ ಕಲಾಮೇಳದೊಂದಿಗೆ ವೈಭವದಿಂದ ನೆರವೇರಿತು.

ಶಾಸಕ ಸಿ.ಎಸ್.ಪುಟ್ಟರಾಜು ಚಂಡೆ ಬಾರಿಸುವ ಮೂಲಕ ಕಲಾಮೇಳ ಉದ್ಘಾಟಿಸಿ, ರಥ ಎಳೆಯುವ ಮೂಲಕ ರಥಸಪ್ತಮಿಗೆ ಚಾಲನೆ ನೀಡಿದರು.

ರಥಸಪ್ತಮಿ ಜಾನಪದ ಜಾತ್ರೆಯಲ್ಲಿ ಕರ್ನಾಟಕದ ವೈವಿಧ್ಯಮಯ ಕಲಾ ತಂಡಗಳು ಆಗಮಿಸಿ ಚೆಲುವ ನಾರಾಯಣನಿಗೆ ಕಲಾರಾಧನೆ ಸೇವೆ ನೆರವೇರಿಸಿದವು. ಈ ವೇಳೆ ಇಡೀ ಉತ್ಸವ ಬೀದಿ ಜಾನಪದ ಕಲೆಗಳಿಗೆ ವೇದಿಕೆಯಾಗಿತ್ತು. ಮುಂಜಾನೆ 7.30ಕ್ಕೆ ಕನ್ನಡ ಸಂಸ್ಕೃತಿ ಇಲಾಖೆ, ಭಾರತ ಸರ್ಕಾರದ ಎಸ್‌ಜೆಡ್‌ಸಿಸಿ ಸಹಯೋಗದೊಂದಿಗೆ ಸ್ಥಾನೀಕಂ ನಾಗರಾಜಯ್ಯಂಗಾರ್ ಸಾಂಸ್ಕೃತಿಕ ವೇದಿಕೆ ಏರ್ಪಡಿಸಿದ್ದ 24ನೇ ರಾಜ್ಯಮಟ್ಟದ ಜಾನಪದ ಕಲಾಮೇಳದಲ್ಲಿ ಕೇರಳದ ಚಂಡೆ, ಬೃಹತ್ ಹನುಮಾನ್, ದಕ್ಷಿಣ ಕನ್ನಡದ ಯಕ್ಷಗಾನ ಗೊಂಬೆಗಳು, ಚಿಲಿಪಿಲಿ ಗೊಂಬೆಗಳು, ಕೋಲಾಟ, ಡೊಳ್ಳು ಕುಣಿತ, ವೀರಭದ್ರ ನೃತ್ಯ, ಗ್ರಾಮೀಣ ಬ್ಯಾಂಡ್, ನಾಸಿಕ್ ಡೋಲ್, ಪೂಜಾ ಕುಣಿತ, ಪಟ ಕುಣಿತ, ಮರಗಾಲು ಕುಣಿತ, ಗಾರುಡಿ ಗೊಂಬೆಗಳು, ಹುಲಿ ವೇಶ, ದೊಣ್ಣೆವರಸೆ, ಚಿಟ್ಟಿಮೇಳ, ಬ್ರಾಸ್ ಬ್ಯಾಂಡ್, ತಮಟೆ ಮೇಳ, ಕೊಂಬು ಕಹಳೆ, ನಂದಿಕಂಬ, ಬೆಂಕಿ ಭರಾಟೆ, ಜಾಂಜ್ ಮೇಳ, ಸೋಮನ ಕುಣಿತ, ಕರಡಿ ಮಜಲು, ಚಕ್ರಾದಿ ಬಳೆ, ಖಡ್ಗ ಪವಾಡ, ಜಡೆ ಕೋಲಾಟ, ಮೈಸೂರು ನಗಾರಿ ಸೇರಿದಂತೆ 40ಕ್ಕೂ ಹೆಚ್ಚು ಜಾನಪದ ಕಲಾ ತಂಡಗಳ 600ಕ್ಕೂ ಹೆಚ್ಚು ಕಲಾವಿದರು ಕಲಾಪ್ರದರ್ಶನ ನೀಡಿದರು. 3 ಗಂಟೆಗಳ ಕಾಲ ನಡೆದ ರಥಸಪ್ತಮಿ ಹಾಗೂ ಕಲಾಮೇಳವನ್ನು ಸಾವಿರಾರು ಭಕ್ತರು ವೀಕ್ಷಿಸಿದರು.

ಈ ವರ್ಷ ಜಾನಪದ ಮೇಳದಲ್ಲಿ ವಿಶೇಷ ಮಹಿಳಾ ತಂಡಗಳು ಗಮನ ಸೆಳೆದವು. ಚಿಕ್ಕಮಗಳೂರಿನ ಮಹಿಳಾ ವೀರಗಾಸೆ, ಮಂಡ್ಯದ ಮಹಿಳಾ ಡೊಳ್ಳು ಕುಣಿತ, ತಳಗವಾದಿ ವನಿತೆಯರ ಕೋಲಾಟ, ಕಾಲೇಜು ವಿದ್ಯಾರ್ಥಿನಿಯರ ಡೊಳ್ಳು ಕುಣಿತ ಜಾನಪದ ಕಲಾ ತಂಡಗಳು ಆಕರ್ಷಕ ಪ್ರದರ್ಶನ ನೀಡಿದವು. ಪಾಂಡವಪುರದ ವಿಜಯ ಪ್ರೌಢಶಾಲೆ ಬ್ಯಾಂಡ್ ತಂಡ, ಮೇಲುಕೋಟೆ ಸರ್ಕಾರಿ ಬಾಲಕರು, ಬಾಲಕಿಯರು ಯದುಶೈಲಾ ಪ್ರೌಢಶಾಲೆ, ಎಸ್‌ಇಟಿ ಶಾಲೆ ನೂರಾರು ಮಕ್ಕಳಿಂದ 101 ಕಳಸ, ಬ್ಯಾಂಡ್, ತಮಟೆ ಬ್ಯಾಂಡ್ ಪ್ರದರ್ಶನದಲ್ಲಿ ತಮ್ಮ ಪ್ರತಿಭೆ ಅನಾವರಣಗೊಳಿಸಿದರು. ರಾಮಾನುಜಾಚಾರ್ಯರು ಆರಂಭಿಸಿದ ದಾಸ ಪರಂಪರೆ ಬಿಂಬಿಸುವ ದಾಸಯ್ಯರ ದರ್ಶನದಲ್ಲಿ ಸುತ್ತಮುತ್ತಲ ದಾಸಯ್ಯರು ಸ್ವಾಮಿ ಉತ್ಸವದಲ್ಲಿ ಭಾಗಿಯಾಗಿದ್ದರು.

ಕಲಾಮೇಳದಲ್ಲಿ ಚಿಕ್ಕಮಗಳೂರು ತಪೋವನದ ಶ್ರೀಜಯವಿಭವಸ್ವಾಮಿ, ಜಯಬಸವಾನಂದ ಸ್ವಾಮೀಜಿ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷ ನಾಗಣ್ಣಗೌಡ, ಸಂಘಟಕ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ, ಪತ್ರಕರ್ತೆ ಸೌಮ್ಯ ಸಂತಾನಂ, ಕಲಾವಿದ ಆರ್.ಶಿವಣ್ಣಗೌಡ, ಸಮಾಜ ಸೇವಕಿ ಅಶ್ವಿನಿ, ಇತಿಹಾಸ ತಜ್ಞ ಡಾ.ಶೆಲ್ವಪ್ಪಿಳ್ಳೆ ಅಯ್ಯಂಗಾರ್, ಗ್ರಾಪಂ ಅಧ್ಯಕ್ಷ ಸೋಮಶೇಖರ್, ಉಪಾಧ್ಯಕ್ಷ ತಿರುಮಲೆ ವಿದ್ವಾನ್ ಆನಂದಾಳ್ವಾರ್, ಅವ್ವ ಗಂಗಾಧರ್, ದೇವಾಲಯದ ಅಧಿಕಾರಿ ಮಹೇಶ್ ಇದ್ದರು. ಸಮಾಜ ಸೇವಕ ಡಾ.ಇಂದ್ರೇಶ್ ಕಲಾವಿದರಿಗೆ ಬಹುಮಾನ ವಿತರಿಸಿದರು. ರಥಸಪ್ತಮಿ ಪ್ರಯುಕ್ತ ದೇವಾಲಯದ ಗೋಪುರ ಮತ್ತು ರಾಜಬೀದಿಗೆ ದೀಪಾಲಂಕಾರ ಮಾಡಿ ರಂಗವಲ್ಲಿ ತಳಿರು ತೋರಣಗಳಿಂದ ಇಡೀ ಆವರಣ ಸಿಂಗಾರ ಮಾಡಲಾಗಿತ್ತು. ಮೇಲುಕೋಟೆ ಇನ್ಸ್‌ಪೆಕ್ಟರ್ ಸುಮಾರಾಣಿ ಹೆಚ್ಚಿನ ಸಿಬ್ಬಂದಿಯೊಂದಿಗೆ ಹಾಜರಿದ್ದು ಭದ್ರತೆ ನೀಡಿದ್ದರು.

ಅದ್ದೂರಿ ಶ್ರೀ ಕಲ್ಯಾಣ ವೆಂಕಟರಮಣಸ್ವಾಮಿ ಬ್ರಹ್ಮ ರಥೋತ್ಸವ



ಕೆ.ಆರ್.ಪೇಟೆ, ಜ.28– ತಾಲೂಕಿನ ಹೇಮಗಿರಿ ಶ್ರೀ ಕಲ್ಯಾಣ ವೆಂಕಟರಮಣಸ್ವಾಮಿ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು.

ಸಚಿವ ಡಾ.ಕೆ.ಸಿ.ನಾರಾಯಣಗೌಡ ಮತ್ತು ತಹಸೀಲ್ದಾರ್ ಎಂ.ವಿ.ರೂಪಾ ರಥಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ಈ ವೇಳೆ ಬಂಡಿಹೊಳೆ ಗ್ರಾಪಂ ಅಧ್ಯಕ್ಷ ಸುನೀಲ್, ಗ್ರೇಡ್–2 ತಹಸೀಲ್ದಾರ್ ವಿಶಾಲ್ ಅಹಮದ್, ಕಸಬಾ ಹೋಬಳಿ ರಾಜಸ್ವ ನಿರೀಕ್ಷಕಿ ಚಂದ್ರಕಲಾ, ಗ್ರಾಮ ಲೆಕ್ಕಾಧಿಕಾರಿ ಪೂಜಾ, ಸ್ಫೂರ್ತಿ, ಮಂಡ್ಯ ಜಿಲ್ಲಾ ಗ್ರಾಮ ಲೆಕ್ಕಾಧಿಕಾರಿಗಳ ಸಂಘದ ಅಧ್ಯಕ್ಷ ಹರೀಶ್, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಜಿ.ತಮ್ಮಣ್ಣ, ಮುಖಂಡರಾದ ಅಶೋಕ್, ಕಾಯಿ ಮಂಜೇಗೌಡ, ಮಂಜೇಗೌಡ, ರಾಮೇಗೌಡ, ಶೇಷಾದ್ರಿ, ಕುಮಾರಸ್ವಾಮಿ ಸೇರಿದಂತೆ ಸಾವಿರಾರು ಭಕ್ತರು ರಥಕ್ಕೆ ಹಣ್ಣು ಜವನ ಸಮರ್ಪಿಸಿ ಶ್ರೀ ವೆಂಕಟರಮಣ ಗೋವಿಂದ, ಶ್ರೀನಿವಾಸ ಗೋವಿಂದ ಉಘೇ.. ಉಘೇ.. ಎಂಬ ಜಯಘೋಷಗಳೊಂದಿಗೆ ರಥ ಎಳೆದು ದೇವರ ಕೃಪೆಗೆ ಪಾತ್ರರಾದರು.

ರಥೋತ್ಸವಕ್ಕೆ ಜಾನಪದ ಕಲಾತಂಡಗಳು ವಿಶೇಷ ಮೆರಗು ತಂದವು. ವೀರಭದ್ರ ನೃತ್ಯ, ಪೂಜಾ, ಪಟಕುಣಿತ ಹಾಗೂ ಡೊಳ್ಳು ಕುಣಿತ ನೆರೆದಿದ್ದ ಭಕ್ತರನ್ನು ಆಕರ್ಷಿಸಿತು. ಹೇಮಗಿರಿ ಬೆಟ್ಟದ ಮೇಲೆ ನೆಲೆಸಿರುವ ಶ್ರೀ ಕಲ್ಯಾಣ ವೆಂಕಟರಮಣಸ್ವಾಮಿ ದರ್ಶನ ಪಡೆದ ಭಕ್ತರು ಪುಳಕಿತರಾದರು. ಹೇಮಾವತಿ ನದಿಯಲ್ಲಿ ಫೆ.1ರಂದು ರಾತ್ರಿ ಸ್ವಾಮಿಯವರ ಉತ್ಸವಮೂರ್ತಿ ತೆಪ್ಪೋತ್ಸವ ಸಡಗರ ಸಂಭ್ರಮದಿಂದ ಬಾಣಬಿರುಸುಗಳ ಪ್ರದರ್ಶನ ಹಾಗೂ ಬಣ್ಣಬಣ್ಣದ ವಿದ್ಯುದ್ದೀಪಗಳ ಬೆಳಕಿನಲ್ಲಿ ನಡೆಯಲಿದ್ದು ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಹಾಗೂ ಬಂಡಿಹೊಳೆ ಗ್ರಾಪಂ ವ್ಯಾಪ್ತಿಯ ಸಾರ್ವಜನಿಕರು ಭಾಗವಹಿಸಬೇಕು ಎಂದು ತಹಶೀಲ್ದಾರ್ ಎಂ.ವಿ. ರೂಪ ಮನವಿ ಮಾಡಿದರು.

ರಥೋತ್ಸವದಲ್ಲಿ ವೃತ್ತ ನಿರೀಕ್ಷಕ ದೀಪಕ್, ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಜಗದೀಶ್ ಹಾಗೂ ಎಸ್‌ಐ ಬಸವರಾಜು ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರು.

ಫೆ.8ಕ್ಕೆ ಬನ್ನಂಗಾಡಿಯಲ್ಲಿ ತಾಲೂಕು ಮಟ್ಟದ ಕಸಾಪ ಸಮ್ಮೇಳನ

ಸಮ್ಮೇಳನಾಧ್ಯಕ್ಷರಾಗಿ ಸಾಹಿತಿ ಚಂದ್ರಶೇಖರಯ್ಯ ಆಯ್ಕೆ





ಚಂದ್ರಶೇಖರಯ್ಯ

ಪಾಂಡವಪುರ, ಜ.28– ತಾಲೂಕಿನ ಬನ್ನಂಗಾಡಿಯಲ್ಲಿ ಫೆ.8ರಂದು ತಾಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದ್ದು, ಸಮ್ಮೇಳನಾಧ್ಯಕ್ಷರಾಗಿ ನಿವೃತ್ತ ಉಪನ್ಯಾಸಕ, ಸಾಹಿತಿ ಚಂದ್ರಶೇಖರಯ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ರವಿಕುಮಾರ್ ತಿಳಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ತಾಲೂಕು ಮಟ್ಟದ ಕಸಾಪ ಸಮ್ಮೇಳನ ನಡೆಸಲಾಗುತ್ತಿದ್ದು, ಸಮ್ಮೇಳನವನ್ನು ವಿಭಿನ್ನವಾಗಿ ನಡೆಸಿ ಯಶಸ್ವಿಗೊಳಿಸಲು ಎಲ್ಲಾ ರೀತಿಯ ಸಿದ್ಧತೆ ನಡೆಸಲಾಗುತ್ತಿದೆ ಎಂದು ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬನ್ನಂಗಾಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಸಮ್ಮೇಳನ ನಡೆಯಲಿದ್ದು, ಈಗಾಗಲೇ ಸಾಹಿತ್ಯ ಪರಿಷತ್ ಅಧ್ಯಕ್ಷರು, ಪದಾಧಿಕಾರಿಗಳು ಯಾವುದೇ ಲೋಪವಾಗದಂತೆ ಗ್ರಾಮಸ್ಥರೊಡನೆ ಹಲವು ಪೂರ್ವಭಾವಿ ಸಭೆ ನಡೆಸಿದ್ದಾರೆ. ಸಮ್ಮೇಳನದ ಅಂಗವಾಗಿ ತಾಲೂಕಿನ ಸಾಹಿತ್ಯ, ಸಾಂಸ್ಕೃತಿಕ ವೈಶಿಷ್ಟ್ಯತೆಯ ಮಾಹಿತಿಯನ್ನು ಜನತೆಗೆ ತೋರಿಸುವ ಉದ್ದೇಶದಿಂದ ಸ್ಮರಣ ಸಂಚಿಕೆ ಹೊರತರಲಾಗುತ್ತಿದೆ ಎಂದರು.

ಸಮ್ಮೇಳನಾಧ್ಯಕ್ಷರ ಆಯ್ಕೆ: ತಾಲೂಕು ಕಸಾಪ ಸಮ್ಮೇಳನಾಧ್ಯಕ್ಷರಾಗಿ ಜಿಲ್ಲೆ, ತಾಲೂಕಿಗೆ ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕವಾಗಿ ಕೊಡುಗೆ ನೀಡಿರುವ ಸಾಹಿತಿ ಚಂದ್ರಶೇಖರಯ್ಯ ಅವರನ್ನು ಆಯ್ಕೆ ಮಾಡಲಾಗಿದೆ. ಸಮ್ಮೇಳನಾಧ್ಯಕ್ಷರ ಆಯ್ಕೆ ಸಂಬಂಧ ಕಮಿಟಿ ರಚಿಸಿ ಚರ್ಚಿಸಿ ಅಂತಿಮವಾಗಿ ಚಂದ್ರಶೇಖರಯ್ಯ ಅವರನ್ನು ಅಂತಿಮಗೊಳಿಸಲಾಗಿದೆ. ಚಂದ್ರಶೇಖರಯ್ಯನವರು ಕುವೆಂಪು ಪ್ರೌಢಶಾಲೆಯಲ್ಲಿ 20 ವರ್ಷ ಕನ್ನಡ ಶಿಕ್ಷಕನಾಗಿ, 13 ವರ್ಷ ಮುಖ್ಯೋಪಾಧ್ಯಾಯರಾಗಿ, 3 ವರ್ಷ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಕಸಾಪ ಸೇರಿದಂತೆ ಹಲವು ಸಂಘ–ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. 6ಕ್ಕೂ ಅಧಿಕ ಕೃತಿ ರಚಿಸಿದ್ದಾರೆ. ಅವರಿಗೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ದೊರೆತಿವೆ. ವಿಚಾರಗೋಷ್ಠಿಗಳು, ಹಾಸ್ಯ ಗೋಷ್ಠಿ, ಕವಿಗೋಷ್ಠಿಗಳು ಸೇರಿದಂತೆ ಹಲವಾರು ನಾಟಕಗಳಲ್ಲಿ ಭಾಗವಹಿಸಿ ಅಭಿನಯಿಸಿದ್ದಾರೆ ಎಂದರು.

ಸಮ್ಮೇಳನ ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಪೀಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜರುಗಲಿದೆ. ಸಮ್ಮೇಳನವನ್ನು ಹರಟೆ ಖ್ಯಾತಿಯ ಪ್ರೊ.ಎಂ.ಕೃಷ್ಣೇಗೌಡ, ಸಾಹಿತಿ ಸಿದ್ದಲಿಂಗಯ್ಯ ಉದ್ಘಾಟಿಸಲಿದ್ದಾರೆ. ಸಾಹಿತ್ಯ ಪರಿಷತ್ ಕೇಂದ್ರ ಅಧ್ಯಕ್ಷ ಮಹೇಶ್ ಜೋಷಿ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ವಿಚಾರ ಗೋಷ್ಠಿ, ಕವಿಗೋಷ್ಠಿ ಹಾಗೂ ವಿಶೇಷವಾಗಿ ಮಕ್ಕಳ ಗೋಷ್ಠಿಯನ್ನು ಆಯೋಜಿಸಲಾಗಿದೆ. ಸಂಜೆ ಹಾಸ್ಯ ತಂಡದಿಂದ ಹಾಸ್ಯ ಕಾರ್ಯಕ್ರಮ ಎಂದರು.

ಶಾಸಕ ಸಿ.ಎಸ್.ಪುಟ್ಟರಾಜು ಅವರು ಸಮ್ಮೇಳನದಲ್ಲಿ ವಿಶೇಷವಾಗಿ ಗ್ರಾಮೀಣ ಶೈಲಿ ಊಟದ ವ್ಯವಸ್ಥೆ ಮಾಡಲು ತೀರ್ಮಾನಿಸಿದ್ದು ಎಲ್ಲರು ಸಮ್ಮೇಳನದ ಯಶಸ್ಸಿಗೆ ಶ್ರಮಿಸಬೇಕೆಂದು ಮನವಿ ಮಾಡಿದರು.

ಅಖಿಲ ಭಾರತ ಸಾಹಿತ್ಯ ಸಮ್ಮೇಳನ: ಅಖಿಲ ಭಾರತ ಸಮ್ಮೇಳನ ನಡೆಸುವುದು ಜಿಲ್ಲೆಯ ಕನಸಾಗಿತ್ತು. ಇದೀಗ ಜಿಲ್ಲೆಗೆ ಆ ಸುಂಯೋಗ ಒದಗಿ ಬಂದಿದೆ. ನವೆಂಬರ್–ಡಿಸೆಂಬರ್ ಕೊನೆಯಲ್ಲಿ ಸಮ್ಮೇಳನ ನಡೆಸಲು ರಾಜ್ಯಾಧ್ಯಕ್ಷರು ಸೂಚನೆ ನೀಡಿದ್ದಾರೆ. ಸಮ್ಮೇಳನ ನಡೆಸಲು ಈಗಾಗಲೆ ಮೂರ್‍ನಾಲ್ಕು ಸ್ಥಳಗಳನ್ನು ಪರಿಶೀಲಿಸಲಾಗಿದೆ. ರಾಜ್ಯಾಧ್ಯಕ್ಷರು ಆಗಮಿಸಿ ಮತ್ತೊಮ್ಮೆ ಪರಿಶೀಲಿಸಿ ಸ್ಥಳ ಅಂತಿಮಗೊಳಿಸಿದ್ದಾರೆ ಎಂದರು.

ಗೋಷ್ಠಿಯಲ್ಲಿ ಕಸಾಪ ತಾಲೂಕು ಅಧ್ಯಕ್ಷ ಪ್ರಕಾಶ್, ಕಾರ್ಯದರ್ಶಿ ಪ.ಮ. ನಂಜುಂಡಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಮಂಜುನಾಥ್, ಸಾಹಿತಿ ಸಿದ್ದಲಿಂಗಯ್ಯ, ಪದಾಧಿಕಾರಿಗಳು ಹಾಜರಿದ್ದರು.

ಒಂದನೇ ಪುಟದಿಂದ

ಕೋಲಾರಕ್ಕೆ ಏಕೆ ಪಲಾಯನ ಮಾಡುತ್ತಿದ್ದಾರೆ...

ನೀಡಿದ್ದಾರೆ. 11 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲ್ಲುವ ಭರವಸೆ ಇದ್ದರೆ ಅವರು ಕೋಲಾರ ಜಿಲ್ಲೆಗೆ ಏಕೆ ಪಲಾಯನ ಮಾಡಬೇಕಿತ್ತು ಎಂದು ಸಂಸದ ಶ್ರೀನಿವಾಸಪ್ರಸಾದ್ ವಾಗ್ದಾಳಿ ನಡೆಸಿದರು. ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 6 ಬಾರಿ ಗೆದ್ದಿದ್ದೀರಿ, ವರುಣಾದಲ್ಲಿ 2 ಬಾರಿ ಗೆದ್ದು ಮುಖ್ಯಮಂತ್ರಿಯಾಗಿದ್ದೀರಿ. ಆದರೂ ನಿಮಗೆ ಜನರ ಮೇಲೆ ವಿಶ್ವಾಸವಿಲ್ಲವೇ? ರಾಜ್ಯ ಸುತ್ತುತ್ತಾ ಆ ಕ್ಷೇತ್ರ, ಈ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಕರೆಯುತ್ತಾರೆಂದು ಹೇಳುತ್ತಾ, ಕೊನೆಗೆ ಕೋಲಾರದಲ್ಲಿ ಸ್ಪರ್ಧಿಸುವುದಾಗಿ ಹೇಳಿದ್ದೀರಿ. ನಿಮಗೆ 11 ಕ್ಷೇತ್ರದಲ್ಲಿ ಗೆಲ್ಲುತ್ತೇವೆಂಬ ಭರವಸೆ ಇದ್ದರೆ ನೀವು ಚಾಮುಂಡೇಶ್ವರಿ ಅಥವಾ ವರುಣಾದಲ್ಲಿ ಸ್ಪರ್ಧಿಸಲು ಆಗುವುದಿಲ್ಲವೇ. ಅದನ್ನು ಮೊದಲು ಸ್ಪಷ್ಟಪಡಿಸಿ, ಆಮೇಲೆ 11 ಜನರನ್ನು ಗೆಲ್ಲಿಸುವಿರಂತೆ ಎಂದು ಟೀಕಾ ಪ್ರಹಾರ ನಡೆಸಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಕರೆದುಕೊಂಡು ಬಂದು ಟೇಬಲ್ ಕುಟ್ಟಿ ಮುಂದಿನ ಪ್ರಧಾನಿ ಮೋದಿ ಆಗಲ್ಲ, ರಾಹುಲ್‌ಗಾಂಧಿಯಾಗುತ್ತಾರೆ ಎಂದು ಕಿರುಚಾಡುತ್ತಿದ್ದಿರಿ. ನೀವು ಗೆದ್ದಿದ್ದು ಬರೀ 1 ಸ್ಥಾನ ಮಾತ್ರ. ಬಿಜೆಪಿ ಮೋದಿ ನಾಯಕತ್ವದಲ್ಲಿ 25 ಸ್ಥಾನ ಗೆಲುವು ಪಡೆಯಿತು. ಈಗಲೂ ಕಿರುಚಾಡುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಸರ್ಕಾರ ನಿಮ್ಮ ಕೈಯಲ್ಲಿದ್ದರೂ ಮತ್ತೆ ಅಧಿಕಾರಕ್ಕೆ ತರಲು ಆಗಲಿಲ್ಲ. ಚಾಮುಂಡೇಶ್ವರಿಯಲ್ಲಿ ನಿಮ್ಮ ಸಹಿತವಾಗಿ 13 ಜನ ಹಾಲಿ ಮಂತ್ರಿಗಳೇ ಸೋತಿರಿ. ಸಿದ್ದರಾಮಯ್ಯಗೆ ಗಂಟಲು ಜೋರು ಅವರು ಕಿರುಚಾಡುತ್ತಾರೆ ಅಷ್ಟೆ ಎಂದು ಕುಟುಕಿದರು.

ಇಂದು ನಂ.ಗೂಡಿಗೆ ಸಿಎಂ ಆಗಮನ: (ಜ.29) ಇಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಂಜನಗೂಡಿಗೆ ಆಗಮಿಸಲಿದ್ದು ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಿಂದ ವಿಶೇಷಚೇತನರಿಗೆ ಉಚಿತವಾಗಿ ಸಾಧನ ಸಲಕರಣೆ ವಿತರಣೆ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ಹೇಳಿದರು. ಭಾನುವಾರ ಮಧ್ಯಾಹ್ನ 2.30ಕ್ಕೆ ಶ್ರೀಕಂಠೇಶ್ವರ ದೇವಾಲಯದ ಮುಂಭಾಗ ಏರ್ಪಡಿಸಿರುವ ವೇದಿಕೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮ ಉದ್ಘಾಟಿಸುವರು. ಸರಗೂರು, ಹೆಚ್.ಡಿ.ಕೋಟೆ, ನಂಜನಗೂಡು, ವರುಣಾ ವಿಧಾನಸಭಾ ಕ್ಷೇತ್ರ ಒಳಗೊಂಡಂತೆ 3 ಸಾವಿರ ವಿಶೇಷ ಚೇತನರಿಗೆ ಉಚಿತ ಸಾಧನ ಸಲಕರಣೆ ವಿತರಣೆ ಮಾಡಲಿದ್ದಾರೆ.

ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸಪೂಜಾರಿ ಭಾಗವಹಿಸಲಿದ್ದು, ಶಾಸಕ ಬಿ.ಹರ್ಷವರ್ಧನ್ ಅಧ್ಯಕ್ಷತೆ ವಹಿಸಲಿದ್ದಾರೆ. 5 ಸಾವಿರ ಜನರಿಗೆ ಮಧ್ಯಾಹ್ನದ ಭೋಜನ ವ್ಯವಸ್ಥೆ ಮಾಡಲಾಗಿದೆ. ಮೈಮುಲ್ ವತಿಯಿಂದ ಉಚಿತವಾಗಿ ಮಜ್ಜಿಗೆ ವಿತರಣೆ ಮಾಡಲಾಗುವುದು ಎಂದರು. ನಂಜನಗೂಡಿಗೆ ಮುಖ್ಯಮಂತ್ರಿ ಆಗಮನ ಹಿನ್ನೆಲೆಯಲ್ಲಿ ಎಲ್ಲೆಡೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ ಎಂದರು.

ಈ ವೇಳೆ ಮುಖಂಡರಾದ ಯು.ಎನ್.ಪದ್ಮನಾಭರಾವ್, ಕುಂಬ್ರಳ್ಳಿ ಸುಬ್ಬಣ್ಣ, ತಾಪಂ ಮಾಜಿ ಸದಸ್ಯ ಬಿ.ಎಂ.ರಾಮು, ಮಲ್ಲುಂಡಿ ಪುಟ್ಟಸ್ವಾಮಿ, ಶಿವರುದ್ರ, ವಳಗೆರೆ ಪುಟ್ಟಸ್ವಾಮಿ, ನವೀನ್‌ರಾಜ್ ಇದ್ದರು.

ಟೂರಿಸಂ ಸರ್ಕ್ಯೂಟ್ ಅನುಷ್ಠಾನ

ಸಾಂಸ್ಕೃತಿಕ, ಸಾಹಸಮಯ, ಆಧ್ಯಾತ್ಮಿಕ, ಎಕೋ–ಟೂರಿಸಂ, ವನ್ಯಜೀವಿ ಸೇರಿದಂತೆ ವೈವಿಧ್ಯತೆಯನ್ನು ಅನುಭವಿಸುವ ಸಲುವಾಗಿ ಪ್ರವಾಸಿಗರಿಗೆ ಪ್ರಯಾಣ ವ್ಯವಸ್ಥೆ, ಊಟ–ತಿಂಡಿ, ವಸತಿ ಒದಗಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿದ್ದು, ಅಂತಿಮವಾಗಿ ಇಲಾಖೆಯಿಂದ ನಿರ್ದಿಷ್ಟ ರೂಪುರೇಷೆಯುಳ್ಳ ಅಧಿಕೃತ ಆದೇಶವನ್ನು ನಿರೀಕ್ಷಿಸಲಾಗುತ್ತಿದೆ. ನಿನ್ನೆಯಷ್ಟೇ ಹಂಪಿ ಉತ್ಸವ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯದಲ್ಲಿ ಪ್ರವಾಸೋದ್ಯಮ ಉತ್ತೇಜಿಸಲು ಹಂಪಿ ಮತ್ತು ಮೈಸೂರು ಟೂರಿಸಂ ಸರ್ಕ್ಯೂಟ್‌ಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಖಾಸಗಿ–ಸಾರ್ವಜನಿಕ–ಪಾಲುದಾರಿಕೆ (ಪಿಪಿಪಿ) ಮಾದರಿಯಲಿ ಟೂರಿಸಂ ಸರ್ಕ್ಯೂಟ್ ಯೋಜನೆ ಜಾರಿಗೊಳಿಸಲು ಸರ್ಕಾರ ಸಿದ್ಧತೆ ಮಾಡಲಾಗುತ್ತಿದೆ. ಅದರಿಂದ ದಕ್ಷಿಣ ಮತ್ತು ಉತ್ತರ ಕರ್ನಾಟಕ ಭಾಗದ ಪ್ರವಾಸಿ ತಾಣಗಳನ್ನು ಸಂಪರ್ಕ ಕಲ್ಪಿಸಲು ಸಹಕಾರಿಯಾಗಲಿದೆ. ಹಂಪಿ ಸರ್ಕ್ಯೂಟ್‌ಗೆ ಟಿಕೆಟ್ ಪಡೆದರೆ ಪ್ರವಾಸಿಗರು ಬೀದರ್‌ವರೆಗೂ ಪ್ರಯಾಣಿಸಬಹುದು ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಹಂಪಿ ಸರ್ಕ್ಯೂಟ್ ಉತ್ತರ ಕರ್ನಾಟಕದ ಪ್ರವಾಸಿ ತಾಣಗಳನ್ನು ಒಳಗೊಂಡಿದ್ದರೆ, ಮೈಸೂರು ಸರ್ಕ್ಯೂಟ್ ದಕ್ಷಿಣ ಕರ್ನಾಟಕದ ತಾಣಗಳಿಗೆ ಸಂಪರ್ಕ ಕಲ್ಪಿಸುವ ಮೂಲಕ ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದ್ದನ್ನು ಸ್ಮರಿಸಬಹುದಾಗಿದೆ.

ಮೈಸೂರಲ್ಲಿ ನಿಧನ, ಬೆಂಗಳೂರಲ್ಲಿ ಅಂತ್ಯಕ್ರಿಯೆ, ಮೈಸೂರಲ್ಲಿ ಸ್ಮಾರಕ







ಮೈಸೂರು, ಜ.28(ಆರ್‌ಕೆ)– ತೀವ್ರ ಹೃದಯಾಘಾತದಿಂದ 2009ರ ಡಿಸೆಂಬರ್ 30ರಂದು ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಿಧನರಾದ ಖ್ಯಾತ ನಾಯಕ ನಟ ಡಾ. ವಿಷ್ಣುವರ್ಧನ್ ಅವರ ಅಂತ್ಯಕ್ರಿಯೆ ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿ ನೆರವೇರಿತು. ಆದರೆ ನಾನಾ ಕಾರಣಕ್ಕೆ ಅಂತಿಮವಾಗಿ ಮೈಸೂರಲ್ಲಿ ಅವರ ಸ್ಮಾರಕವನ್ನು ನಿರ್ಮಿಸಲಾಗಿದೆ.


ಅಭಿಮಾನ್ ಸ್ಟುಡಿಯೋ ಭೂ ವಿವಾದದಿಂದ ವಿಷ್ಣು ಸ್ಮಾರಕಕ್ಕೆ ಬೆಂಗಳೂರಿನ ಕೆಂಗೇರಿ ಬಳಿಯ ಮೈಲಸಂದ್ರದಲ್ಲಿ ಪರ್ಯಾಯ ಜಾಗ ಗುರ್ತಿಸಲಾಗಿತ್ತಾದರೂ, ಅದೂ ಸಹ ತುರಹಳ್ಳಿ ಅರಣ್ಯದ ಬಫರ್ ವಲಯ ವ್ಯಾಪ್ತಿಗೆ ಬರುತ್ತಿದ್ದರಿಂದ ಅಲ್ಲಿಯೂ ಸಾಧ್ಯವಾಗದ ಕಾರಣ ಮೈಸೂರಿನ ಹಾಲಾಳು ಗ್ರಾಮದ ಸರ್ಕಾರಿ ಜಾಗದಲ್ಲಿ ಡಾ.ವಿಷ್ಣು ಸ್ಮಾರಕ ನಿರ್ಮಿಸಲು ಸರ್ಕಾರ ನಿರ್ಧರಿಸಿತ್ತು. ಆದರೆ ಈ ಜಮೀನಿನ ಸ್ವಾಧೀನಾನುಭವ ಹೊಂದಿದ್ದ ರೈತರು ನ್ಯಾಯಾಲಯದ ಮೊರೆ ಹೋಗಿದ್ದರಾದರೂ, ಹಿಂದಿನ ಮೈಸೂರು ಜಿಲ್ಲಾಧಿಕಾರಿ ಡಿ.ರಂದೀಪ್, ತಹಶೀಲ್ದಾರ್‌ಗಳಾಗಿದ್ದ ನವೀನ್ ಜೋಸೆಫ್, ರಮೇಶ್ ಬಾಬು ಅವರು ಸದರಿ ಜಮೀನು ಸರ್ಕಾರದ್ದಾಗಿದ್ದು, ನಗರಕ್ಕೆ ಸಮೀಪವಿರುವುದರಿಂದ ಖಾಸಗಿಯವರಿಗೆ ಮಂಜೂರು ಮಾಡಲು ಬರುವುದಿಲ್ಲ ಎಂದು ವಾದಿಸಿ ಹೈಕೋರ್ಟ್‌ನಿಂದ ಆದೇಶ ಪಡೆಯುವಲ್ಲಿ ಯಶಸ್ವಿಯಾಗಿದ್ದರು.

ಅದರಂತೆ ಸದರಿ ಜಾಗದಲ್ಲಿ ಡಾ. ವಿಷ್ಣುವರ್ಧನ್ ಸ್ಮಾರಕ ನಿರ್ಮಿಸಲು 2020ರ ಸೆಪ್ಟೆಂಬರ್ ಮಾಹೆಯಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವರ್ಚುಯಲ್ ಮೂಲಕ ಸ್ಮಾರಕ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದರು. ಇದೀಗ ಸ್ಮಾರಕ ನಿರ್ಮಾಣವಾಗಿದ್ದು, ನಾಳೆ (ಜ.29) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟನೆ ಮಾಡಲಿದ್ದಾರೆ.



ವಿಷ್ಣು ಸ್ಮಾರಕದಲ್ಲಿ ಸ್ಥಾಪಿಸಿರುವ ವಿಷ್ಣು ಪ್ರತಿಮೆ ಹಾಗೂ ಅವರು ಬಳಸುತ್ತಿದ್ದ ಬಳೆಯನ್ನು ಕೊಳದಲ್ಲಿ ಅಳವಡಿಸಿರುವುದು.





ಗ್ಯಾಲರಿಯಲ್ಲಿ ವಿಷ್ಣು ಅವರ ಅಭಿನಯದ ಚಿತ್ರಗಳು, ಸ್ಮರಣೀಯ ನಾನಾ ಸನ್ನಿವೇಶದ ನೂರಾರು ಫೋಟೋ ಪ್ರದರ್ಶನ

ಒಂದನೇ ಪುಟದಿಂದ

ಇಂದು ಲೋಕಾರ್ಪಣೆ

ಸಂರಕ್ಷಿಸಲಾಗಿದೆ. 5 ಅಡಿ ಎತ್ತರದ ಕಪ್ಪು ಕಲ್ಲಿನ ಡಾ. ವಿಷ್ಣು ಪ್ರತಿಮೆಯನ್ನು ಅವರ ಚಿತಾಭಸ್ಮದ ಮೇಲೆ ಪ್ರತಿ ಷ್ಠಾಪಿಸಲಾಗಿದೆ. 220 ಸಿನಿಮಾಗಳಲ್ಲಿ ವಿಭಿನ್ನ ಪಾತ್ರಾಭಿನಯ ಮಾಡಿರುವ ಸಾಹಸ ಸಿಂಹ ವಿಷ್ಣುವರ್ಧನ್ ಅವರ ಹೆಸರಿನಲ್ಲಿ 600 ಆಸನ ಸಾಮರ್ಥ್ಯದ ಸಭಾಂಗಣ ನಿರ್ಮಿಸಿ, ಅದಕ್ಕೆ 'ಸಾಹಸ ಸಿಂಹ' ಎಂದು ಹೆಸರಿಡಲಾಗಿದೆ. ಅಲ್ಲಿ ಚಲನ ಚಿತ್ರೋತ್ಸವ, ರಂಗೋತ್ಸವ, ತರಬೇತಿ, ಕಾರ್ಯಾಗಾರಗಳನ್ನು ನಡೆಸಲು ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ.

ಎಫ್‌ಟಿಐಐ ಶಾಖೆ: ಕೇಂದ್ರ ಸರ್ಕಾರದ ಅಧೀನದಲ್ಲಿರುವ ಫಿಲಂ ಅಂಡ್ ಟೆಲಿವಿಷನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (FTII) ಶಾಖೆಯನ್ನು ಡಾ.ವಿಷ್ಣು ಸ್ಮಾರಕದಲ್ಲಿ ಸ್ಥಾಪಿಸಲುದ್ದೇಶಿಸಲಾಗಿದ್ದು, ಅದಕ್ಕಾಗಿ ಪ್ರತ್ಯೇಕ ಸ್ಥಳಾವಕಾಶ ಒದಗಿಸಲಾಗಿದೆ. ಸಿನಿಮಾ ತರಬೇತಿಗಾಗಿ ಅಲ್ಲಿ ಮೂಲ ಸೌಕರ್ಯ ಒದಗಿಸಲು ಸಿದ್ಧತೆ ಮಾಡಲಾಗಿದೆ. ವಿಶಾಲವಾದ ಉದ್ಯಾನ, ವಾಹನ ನಿಲುಗಡೆ ಸ್ಥಳ, ಕ್ಯಾಂಟೀನ್, ವಿಶ್ರಾಂತಿ ಕೊಠಡಿ, ಬೃಹತ್ ಕಾಂಪೌಂಡ್ ಸೇರಿದಂತೆ ವಿಷ್ಣು ಸ್ಮಾರಕವನ್ನು ಪ್ರವಾಸಿ ತಾಣವಾಗಿಸುವ ನಿಟ್ಟಿನಲ್ಲಿ ನಿರ್ಮಿಸಲಾಗಿದೆ. ಡಾ.ವಿಷ್ಣುವರ್ಧನ್ ಟ್ರಸ್ಟ್ ಅಧ್ಯಕ್ಷರಾಗಿರುವ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಅದರ ನಿರ್ವಹಣೆ ಮಾಡಲಿದ್ದು, ಡಾ. ಭಾರತಿ ವಿಷ್ಣುವರ್ಧನ್ ಸೇರಿದಂತೆ ಹಲವರು ಟ್ರಸ್ಟಿಗಳಾಗಿರುತ್ತಾರೆ. ಸ್ಮಾರಕ ಉದ್ಘಾಟನೆ ಹಿನ್ನೆಲೆಯಲ್ಲಿ ಡಾ. ಭಾರತಿ ವಿಷ್ಣುವರ್ಧನ್ ಅವರ ಪುತ್ರಿ 'ಕೀರ್ತಿವರ್ಧನ್, ಅಳಿಯ ಅನಿರುದ್, ಮೊಮ್ಮಗ ಜೇಷ್ಠವರ್ಧನ್ ಹಾಗೂ ಕುಟುಂಬದ ಸದಸ್ಯರೊಂದಿಗೆ ನಿನ್ನೆ(ಶುಕ್ರವಾರ)ಯೇ ಮೈಸೂರಿಗೆ ಆಗಮಿಸಿದ್ದು, ಇಂದು ಸ್ಮಾರಕಕ್ಕೆ ಭೇಟಿ ನೀಡಿ ಅಂತಿಮ ಸಿದ್ಧತೆಯನ್ನು ಪರಿಶೀಲಿಸಿದರು.



ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಅವರನ್ನು ಶನಿವಾರ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಆತ್ಮೀಯವಾಗಿ ಅಭಿನಂದಿಸಿದರು. ಮೇಯರ್ ಶಿವಕುಮಾರ್, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಮುಖಂಡ ಕವೀಶ್‌ಗೌಡ ಇನ್ನಿತರರು ಈ ಸಂದರ್ಭ ಉಪಸ್ಥಿತರಿದ್ದರು.



ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ರಾಮಕೃಷ್ಣನಗರ ಐ ಬ್ಲಾಕ್‌ನಲ್ಲಿ ಆಯೋಜಿಸಿದ್ದ ವಿಜಯ ಸಂಕಲ್ಪ ಅಭಿಯಾನವನ್ನು ಪಾದಯಾತ್ರೆ ಮೂಲಕ ಮನೆ ಮನೆಗೆ ಭೇಟಿ ನೀಡಿ ಮತದಾರರಿಗೆ ಸರ್ಕಾರದ ಸಾಧನೆಗಳನ್ನು ಒಳಗೊಂಡ ಕರಪತ್ರವನ್ನು ನೀಡುವುದರೊಂದಿಗೆ ಕಂದಾಯ ಸಚಿವ ಆರ್.ಅಶೋಕ್ ಚಾಲನೆ ನೀಡಿದರು. ಈ ವೇಳೆ ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಪಾಲಿಕೆ ಸದಸ್ಯೆ ಲಕ್ಷ್ಮಿ ಕಿರಣ್, ನಗರ ಮಂಡಲ ಅಧ್ಯಕ್ಷ ಬಿ.ಎಂ.ರಘು, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡರಾದ ಎನ್.ಅರುಣ್‌ಕುಮಾರ್‌ಗೌಡ, ಹೇಮಂತ್ ಕುಮಾರ್, ಎಸ್.ಡಿ.ಮಹೇಂದ್ರ, ಪಾಲಿಕೆ ಸದಸ್ಯ ಆರ್.ಕೆ.ಶರತ್, ಕಿರಣ್ ಮಾದೇಗೌಡ, ಕೆ.ಎಂ. ಶಂಕರ್, ಪ್ರಧಾನ ಕಾರ್ಯದರ್ಶಿಗಳಾದ ವಾಣೀಶ್, ಗಿರಿಧರ್, ಈರೇಗೌಡ, ದಟ್ಟಗಳ್ಳಿ ಗಿರೀಶ್, ಗೋಪಾಲ್‌ಗೌಡ, ಜಯರಾಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಾಮಾನ್ಯ ಕಾರ್ಯಕರ್ತನ ಕಣಕ್ಕಿಳಿಸುವ ಕುಮಾರಸ್ವಾಮಿ ಹೇಳಿಕೆಗೆ ಸೂರಜ್ ರೇವಣ್ಣ ಟಾಂಗ್

ಅಂತಹ ಹೇಳಿಕೆಗಳನ್ನೆಲ್ಲಾ ಬಿಟ್ಟುಬಿಡಿ; ಚಿಕ್ಕಪ್ಪನಿಗೆ ಖಡಕ್ ನುಡಿ



ಹಾಸನ, ಜ. 28– ಹಾಸನದಲ್ಲಿ ಸಾಮಾನ್ಯ ಕಾರ್ಯಕರ್ತನನ್ನು ನಿಲ್ಲಿಸ್ತೀವಿ ಅನ್ನೋ ಹೇಳಿಕೆ ಬಿಟ್ಟುಬಿಡಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಟಾಂಗ್ ಕೊಟ್ಟಿರುವ ಹೆಚ್.ಡಿ.ರೇವಣ್ಣ ಪುತ್ರ ಹಾಗೂ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ, ಹಾಸನದ ವಿಚಾರದಲ್ಲಿ ರೇವಣ್ಣ ಅವರಿಗೆ ತಿಳಿದಿರುವಷ್ಟು ಬೇರೆ ಯಾರಿಗೂ ಗೊತ್ತಿಲ್ಲ ಎಂದಿದ್ದಾರೆ.

ಅರಕಲಗೂಡು ತಾಲೂಕು ಹರದೂರು ಗ್ರಾಮದಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಹಾಸನದಲ್ಲಿ ನಮ್ಮ ತಾಯಿ ಭವಾನಿ ರೇವಣ್ಣ ಅವರಿಗೆ ಟಿಕೆಟ್ ಕೊಡಬೇಕು. ಇಂದಿನ ಲೆಕ್ಕಾಚಾರ ನೋಡಿದರೆ ಅವರು ಗೆಲ್ಲುವುದು ಖಚಿತ ಎಂದರು. ಭವಾನಿ ರೇವಣ್ಣ ಅವರಿಗೆ ಟಿಕೆಟ್ ಕೊಡುವುದನ್ನು ಬಿಟ್ಟು ಜನಸಾಮಾನ್ಯರನ್ನು ನಿಲ್ಲಿಸುತ್ತೇವೆ, ಕಾರ್ಯಕರ್ತರನ್ನು ನಿಲ್ಲಿಸುತ್ತೇವೆ ಎಂಬ ಹೇಳಿಕೆಗಳನ್ನು ಬಿಟ್ಟುಬಿಡಬೇಕು ಎಂದು ಖಡಕ್ ಆಗಿ ನುಡಿದರು.

ರೇವಣ್ಣ ಅವರಂತೆ ಹಾಸನ ಜಿಲ್ಲೆಯನ್ನು ಅರಿತಿರುವ ಮತ್ತೊಬ್ಬ ವ್ಯಕ್ತಿ ಈ ಭೂಮಿಯಲ್ಲಿ ಇಲ್ಲವೇ ಇಲ್ಲ. ಅವರು ಇಡೀ ಜಿಲ್ಲೆಯನ್ನು ಸಮರ್ಪಕವಾಗಿ ನಿಭಾಯಿಸಿಕೊಂಡು ಬಂದಿದ್ದಾರೆ. ಕಳೆದ 15 ವರ್ಷಗಳಿಂದ ಸತತವಾಗಿ ಜಿಲ್ಲೆಯಿಂದ 6ರಿಂದ 7 ಶಾಸಕರನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಇದು ರೇವಣ್ಣ ಅವರ ಸ್ವಂತ ಪ್ರಯತ್ನ, ಹೀಗಾಗಿ ಹಾಸನ ಜಿಲ್ಲೆಯಲ್ಲಿ ಟಿಕೆಟ್ ಬಗ್ಗೆ ಮಾತನಾಡಲು ರೇವಣ್ಣ ಅವರನ್ನು ಬಿಟ್ಟರೆ ಬೇರೆ ಯಾರಿಗೂ ಅವಕಾಶವಿಲ್ಲ ಎಂದು ಹೇಳಿದರು.

ಮೊದಲಿನಿಂದಲೂ ನಮ್ಮ ತಾತ (ಹೆಚ್.ಡಿ.ದೇವೇಗೌಡ) ಹಾಸನ ಜಿಲ್ಲೆಯಲ್ಲಿ ಯಾವ ಕ್ಷೇತ್ರದಲ್ಲಿ ಯಾರು ಅಭ್ಯರ್ಥಿ ಎಂದು ನಿರ್ಧರಿಸುತ್ತಿದ್ದರು. ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ಭವಾನಿ ರೇವಣ್ಣ ಸ್ಪರ್ಧಿಸುತ್ತಾರೆ ಎಂಬ ಮಾತುಗಳಿತ್ತು. ಆದರೆ ದೇವೇಗೌಡರು ನನ್ನನ್ನು ಅಭ್ಯರ್ಥಿ ಎಂದು ತೀರ್ಮಾನಿಸಿದರು. ಈಗ ಇಲ್ಲಿನ ರಾಜಕೀಯ ಸನ್ನಿವೇಶ ಬದಲಾಗಿದೆ. ಹಾಸನ ಕ್ಷೇತ್ರದಲ್ಲಿ ಹಾಲಿ ಶಾಸಕರಿಂದ ನಮ್ಮ ಕಾರ್ಯಕರ್ತರಿಗೆ ತೊಂದರೆ ಆಗುತ್ತಿದೆ. ನಾವು ನಮ್ಮ ಕಾರ್ಯಕರ್ತರನ್ನು ಉಳಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ನಮ್ಮ ಪಕ್ಷದ ಶಾಸಕರು ಆಯ್ಕೆಯಾಗಿ ಬರಬೇಕಾಗಿದೆ. ಕ್ಷೇತ್ರದ ಕಾರ್ಯಕರ್ತರು ಹಾಸನದಲ್ಲಿ ಗೆಲುವು ನಿಮ್ಮ (ರೇವಣ್ಣ) ಕುಟುಂಬ ದಿಂದ ಮಾತ್ರ ಸಾಧ್ಯ ಎಂದು ಹೇಳುತ್ತಿದ್ದಾರೆ. ಭವಾನಿ ರೇವಣ್ಣ ಅವರಿಗೆ ಟಿಕೆಟ್ ನೀಡಬೇಕೆಂದು ಆಗ್ರಹಿಸುತ್ತಿದ್ದಾರೆ ಎಂದು ಸೂರಜ್ ಹೇಳಿದರು.

> ಈ ವಿಚಾರದಲ್ಲಿ ದೇವೇಗೌಡರ ಹೆಸರನ್ನು ತರಬೇಡಿ. ಈಗ ಅವರ ಸ್ಥಿತಿ ಏನಾಗಿದೆ. ನಿರ್ಧಾರ ಕೈಗೊಳ್ಳುವ ಸ್ಥಿತಿಯಲ್ಲಿ ಅವರಿದ್ದಾರ?. ದೇವೇಗೌಡರು ತೀರ್ಮಾನ ಮಾಡುತ್ತಾರೆಂದು ಮೊಮ್ಮಕ್ಕಳು ಹೇಳಬಹುದು. ಆದರೆ ಅವರ ಆಯಸ್ಸು ಕಡಿಮೆ ಮಾಡಲು ನನಗೆ ಇಷ್ಟವಿಲ್ಲ. ಈ ಪಕ್ಷವನ್ನು ಅವರು ಕಟ್ಟಿ ಬೆಳೆಸಿದ್ದು. ಅವರು ಸಾಯುವ ಮುನ್ನ ಈ ಪಕ್ಷ ಇನ್ನೂ ಇದೆ ಎಂಬುದನ್ನು ಅವರಿಗೆ ತೋರಿಸಬೇಕಾಗಿದೆ. ಎಲ್ಲವನ್ನೂ ನಾನೇ ಸರಿಮಾಡುತ್ತೇನೆ.
> –ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ

ಬಾಯಿ ಮುಚ್ಚಿಸಿರುವ ದೊಡ್ಡ ಗೌಡರು!



ಬೆಂಗಳೂರು,ಜ.28–ಹಾಸನ ವಿಧಾನಸಭಾ ಕ್ಷೇತ್ರದ ಟಿಕೆಟ್ ವಿಚಾರವಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮತ್ತು ಟಿಕೆಟ್ ಆಕಾಂಕ್ಷಿ ಭವಾನಿ ರೇವಣ್ಣ ಅವರ ಕಿತ್ತಾಟಕ್ಕೆ ಮಾಜಿ ಪ್ರಧಾನಿ ದೇವೇಗೌಡ ಬ್ರೇಕ್ ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹಾಸನ ಟಿಕೆಟ್ ವಿಚಾರವಾಗಿ ಯಾರೂ ಮಾತನಾಡಬಾರದು. ಅದನ್ನು ನಾನೇ ನಿರ್ಧಾರ ಮಾಡುತ್ತೇನೆ ಎಂದು ದೇವೇಗೌಡರು ಕುಟುಂಬದ ಎಲ್ಲರಿಗೂ ತಿಳಿಸಿದ್ದಾರಂತೆ. ಚುನಾವಣೆ ಹೊಸ್ತಿಲಲ್ಲಿ ಕುಟುಂಬದವರೇ ಕಿತ್ತಾಡಿದರೆ ಅದು ವಿಪಕ್ಷಗಳಿಗೆ ಚುನಾವಣಾ ಅಸ್ತ್ರವಾಗುತ್ತದೆ. ಈಗಾಗಲೇ ಬಿಜೆಪಿಯವರು ಈ ವಿಚಾರವಾಗಿ ಮೂಗು ತೂರಿಸಿದ್ದು, ಮನೆ ಜಗಳ ಬಿಡಿಸದವರು ರಾಜ್ಯದ ಆಡಳಿತ ಹೇಗೆ ಮಾಡುತ್ತಾರೆ ಎಂದು ಕಾಂಗ್ರೆಸ್ ಮತ್ತು ಬಿಜೆಪಿಯವರು ಹಾದಿ ಬೀದಿಯಲ್ಲಿ ಪ್ರಚಾರ ಮಾಡುತ್ತಾರೆ. ಇದರಿಂದ ಜೆಡಿಎಸ್‌ನ ಘನತೆಗೆ ಧಕ್ಕೆ ಉಂಟಾಗುತ್ತದೆ. ಕುಮಾಸ್ವಾಮಿ ಪಂಚರತ್ನ ಯಾತ್ರೆ ಮೂಲಕ ಪಕ್ಷವನ್ನು ಬಲಪಡಿಸಿದ್ದಾರೆ. ಹೀಗಿರುವಾಗ ಹಾಸನ ಟಿಕೆಟ್ ವಿಚಾರವಾಗಿ ಕುಟುಂಬ ಸದಸ್ಯರೇ ಕಿತ್ತಾಡಿದರೆ ಕುಮಾರಸ್ವಾಮಿಯವರ ಶ್ರಮಕ್ಕೆ ಫಲ ದೊರೆಯದಂತಾಗುತ್ತದೆ ಎಂಬ ಉದ್ದೇಶದಿಂದ ದೇವೇಗೌಡರು ಮಧ್ಯೆ ಪ್ರವೇಶಿಸಿದ್ದಾರೆ ಎನ್ನಲಾಗಿದೆ.

ಸಿದ್ದೇಶ್ವರ ಸ್ವಾಮೀಜಿಯವರಿಗೆ ಅಪಾರ ಭಕ್ತರ ನುಡಿನಮನ



ಮೈಸೂರು ನಿವೇದಿತಾನಗರದ ಸುಬ್ಬರಾವ್ ಉದ್ಯಾನವನದಲ್ಲಿ ವಿವಿಧ ಸಂಘ–ಸಂಸ್ಥೆಗಳು ಪದಾಧಿಕಾರಿಗಳು ಆಯೋಜಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರಿಗೆ ಹಲವು ಗಣ್ಯರು ನುಡಿನಮನ ಸಲ್ಲಿಸಿದರು.

ಮೈಸೂರು, ಜ.28(ಎಸ್‌ಪಿಎನ್)– 'ಸಂತ' ಎಂಬ ಪದಕ್ಕೆ ವಿಶಾಲ ಅರ್ಥವಿದೆ. ಇದಕ್ಕೆ ಜಾತಿ–ಧರ್ಮ–ಗಡಿ ರೇಖೆಗಳನ್ನು ದಾಟಿ ಆಲೋಚಿಸುವುದೇ ಆಗಿದೆ, ಇದು ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರಿಗೆ ಅನ್ವಯಿಸುತ್ತದೆ ಎಂದು ಪ್ರೊ.ಮಲೆಯೂರು ಗುರುಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ನಿವೇದಿತಾನಗರದ ಎಸ್.ಆರ್.ಸುಬ್ಬರಾವ್ ಉದ್ಯಾನವನ ಮುಂಭಾಗ ವೀರವನಿತೆ ರಾಣಿಚನ್ನಮ್ಮ ಸ್ವಯಂ ಸೇವಾ ಸಂಘ, ಅನಿಕೇತನ ಸೇವಾ ಟ್ರಸ್ಟ್, ನಿವೇದಿತನಗರ, ಆನಂದನಗರ, ಸಿಎಫ್‌ಟಿಆರ್‌ಐ, ಶಾರದಾದೇವಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಶ್ರೀ ಬಸವೇಶ್ವರ ಸೇವಾಸಮಿತಿ, ವೀರಶೈವ ಸ್ನೇಹ ಬಳಗ, ಬಸವ ಬಳಗ ಸೇವಾ ಟ್ರಸ್ಟ್, ಬಿಇಎಂಎಲ್ ಬಸವ ಸಮಿತಿ, ಕದಳಿ ಮಹಿಳಾ ವೇದಿಕೆ, ಸ್ಪಂದನಾ ಮಹಿಳಾ ಬಳಗ, ವಿವಿಧ ಸಂಘ–ಸಂಸ್ಥೆಗಳು ಮತ್ತು ಭಕ್ತವೃಂದದ ಸಹಭಾಗಿತ್ವದಲ್ಲಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರಿಗೆ ಏರ್ಪಡಿಸಿದ್ದ 'ನೆನಪುಗಳ ನುಡಿನಮನ' ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನುಡಿ ನಮನ ಸಲ್ಲಿಸಿದರು.

ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರು, ಪ್ರವಚನ ಕೊಡುತ್ತಿದ್ದಾರೆ ಎಂದರೆ, ಲಕ್ಷಾಂತರ ಜನ ಸೇರುತ್ತಿದ್ದರು. ಅವರು, ಕೇವಲ ಒಂದು ಸಿದ್ಧಾಂತಕ್ಕೆ ಸೀಮಿತವಾಗಿ ಎಂದೂ ಯೋಚಿಸಿದವರಲ್ಲ. ಹಾಗಾಗಿ ಅವರು ಎಲ್ಲಾ ಕಾಲಕ್ಕೂ ಸಲ್ಲುವ ಪೂಜ್ಯರು. ಅವರು ಬದುಕಿದ್ದ ಕಾಲಘಟ್ಟದಲ್ಲಿ ನಾವು ಬದುಕಿದ್ದೇವೆ ಎಂಬುದೇ ಸಂತೋಷದ ಸಂಗತಿ ಎಂದರು.

'ಶತಮಾನ ಸಂತ' ಪದ್ಯವನ್ನು ರಚಿಸಿರುವ ಮೈಸೂರಿನ ಕೆ.ಸಿ.ಶಿವಪ್ಪ ಈ ಸಭೆಗೆ ಬಂದಿದ್ದಾರೆ. ಸಿದ್ದೇಶ್ವರ ಸ್ವಾಮೀಜಿ ಲಿಂಗೈಕ್ಯರಾಗಿದ್ದ ಸಂದರ್ಭದಲ್ಲಿ ಆ ಪದ್ಯ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ವೈರಲ್ ಆಯ್ತು. ಆ ಸಂದರ್ಭದಲ್ಲಿ ಈ ಕಾಲದಲ್ಲೂ ಒಳ್ಳೆಯದನ್ನು ಸ್ವೀಕರಿಸುವ ಮನಸ್ಥಿತಿಯವರಿದ್ದಾರೆ ಎಂದು ಸಮಾಧಾನಪಟ್ಟುಕೊಂಡೆ. ಒಳ್ಳೆಯ ಯೋಚನೆ ಮಾಡುವವರಿಗೆ ಒಳ್ಳೆಯ ಜನರು ಸಿಗುತ್ತಾರೆ ಎಂದು ಸಿದ್ದೇಶ್ವರ ಸ್ವಾಮೀಜಿ ತಮ್ಮ ಪ್ರವಚನದಲ್ಲಿ ಹೇಳುತ್ತಿದ್ದ ಪ್ರಸಂಗವನ್ನು ವಿವರಿಸಿ ನುಡಿನಮನ ಸಲ್ಲಿಸಿದರು.

2019 ಈ ನಿವೇದಿತಾ ನಗರದಲ್ಲಿ ಪ್ರವಚನ ನೀಡಿದ್ದನ್ನು ಸ್ಮರಿಸಿದ ಅವರು, ವೀರವನಿತೆ ರಾಣಿ ಚನ್ನಮ್ಮ ಸ್ವಯಂ ಸೇವಾ ಸಂಸ್ಥೆ ಸೇರಿದಂತೆ 10ಕ್ಕೂ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸುತ್ತಮುತ್ತಲಿನ ಬಡಾವಣೆ ಜನರು ಸೇರಿ, ಶ್ರೀ ಸಿದ್ದೇಶ್ವರ ಸ್ವಾಮೀಜಿಯವರನ್ನು ಸ್ಮರಿಸುವುದು ಸಾಮಾನ್ಯ ಸಂಗತಿಯಲ್ಲ. ಅದರಲ್ಲೂ ಈ ಉದ್ಯಾನವನಕ್ಕೆ ಬಂದು ಪ್ರವಚನ ನೀಡಿದ್ದನ್ನು ನೆನೆಯುತ್ತಿರುವುದು ಸ್ತುತ್ಯಾರ್ಹ ಎಂದರು.

ಸಿದ್ದೇಶ್ವರ ಸ್ವಾಮೀಜಿ ಜನ ಸಂದಣಿ ಇರುವ ಪ್ರದೇಶಗಳಲ್ಲಿ ವಾಸವಿರಲು ಒಪ್ಪುತ್ತಿರಲಿಲ್ಲ. ಬದಲಾಗಿ, ಪ್ರಕೃತಿಗೆ ಹತ್ತಿರವಾದ ಪ್ರದೇಶಗಳಲ್ಲಿ ಹೆಚ್ಚು ಕಾಲ ಕಳೆಯುತ್ತಿದ್ದರು. ಮೈಸೂರಿನ ಸುತ್ತೂರು ಮಠಕ್ಕೆ ಬಂದಾಗ ಅವರು, ಸುತ್ತೂರಿನಲ್ಲಿ ಉಳಿದುಕೊಂಡು ಜನರಿಗೆ ಪ್ರವಚನ ನೀಡುತ್ತಿದ್ದರು. ಅವರು ಹೆಚ್ಚು ಮೌನವಾಗಿ, ಕಾಲ ಕಳೆಯಲು ಬಯಸುತ್ತಿದ್ದರು. ಮೌನವಾಗಿ ಎಲ್ಲವನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಅವರ ಮಾತುಗಳೇ ಮೌನದ ರೀತಿಯಲ್ಲಿರುತ್ತಿದ್ದವು ಎಂದು ಸ್ಮರಿಸಿದರು.

ಈ ವೇಳೆ ಲೇಖಕಿ ಕುಸುಮಾ ಆಯರಹಳ್ಳಿ, ವೀರವನಿತೆ ರಾಣಿ ಚೆನಮ್ಮ ಸ್ವಯಂ ಸೇವಾ ಸಂಸ್ಥೆ ಅಧ್ಯಕ್ಷ ಎಲ್.ವಿ. ಲೋಕೇಶ್ ಕುಮಾರ್, ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ, 'ಸಂತನೆಂದರೆ ಯಾರು' ಕವಿತೆ ಬರೆದ ಕವಿ ಕೆ.ಸಿ.ಶಿವಪ್ಪ, ವೀರವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ರೊ.ಆಯರಹಳ್ಳಿ ಪಿ.ವಿರೂಪಾಕ್ಷ, ನಗರ ಪಾಲಿಕೆ ಮಾಜಿ ಸದಸ್ಯರಾದ ಜಿ.ಎಸ್.ಜಗದೀಶ್, ಕೆ.ವಿ.ಮಲ್ಲೇಶ್, ಜನತಾನಗರ ಮಂಜುನಾಥ್, ಕಿರಣ್, ಬಿ.ಆರ್.ಶಿವಕುಮಾರ್, ವೀರಶೈವ ಮುಖಂಡರಾದ ಪುಟ್ಟರಾಜಪ್ಪ, ಸುರೇಶ್ ವಾಲಿ, ನಿವಾಸಿಗಳಾದ ಜೆಡಿಎಸ್ ಮುಖಂಡರಾದ ಹರೀಶ್, ಶೇಖರ್, ಶಿಕ್ಷಕ ಆನಂದ, ಆನಂದ ಪಟೇಲ್, ಎನ್.ಮಹೇಶ್‌ಕುಮಾರ್ ಇತರರಿದ್ದರು.

ಧಾರವಾಡದ ಕುಂದಗೋಳದಲ್ಲಿ ಅಮಿತ್ ಶಾ ಭರ್ಜರಿ ರೋಡ್ ಶೋ: ಸಿಎಂ ಇತರರು ಸಾಥ್

ಧಾರವಾಡ: ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಭರ್ಜರಿ ರೋಡ್ ಶೋ ನಡೆಸಿದರು. ಬಿಜೆಪಿ 'ವಿಜಯ ಸಂಕಲ್ಪ ಅಭಿಯಾನ'ದ ಅಂಗವಾಗಿ ಹಮ್ಮಿಕೊಂಡಿದ್ದ ರೋಡ್ ಶೋಗೆ ಜನಸಾಗರವೇ ಹರಿದು ಬಂದಿದ್ದು, ಪ್ರವಾಸಿ ಮಂದಿರದಿಂದ ಗಾಳಿ ಮಾರಮ್ಮ ದೇವಸ್ಥಾನದವರೆಗೆ ರೋಡ್ ಶೋ ನಡೆಯಿತು. ಅಮಿತ್ ಶಾಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಎಸ್.ಯಡಿಯೂರಪ್ಪ, ನಳಿನ್‌ಕುಮಾರ್ ಕಟೀಲ್, ಪ್ರಹ್ಲಾದ್ ಜೋಶಿ ಸಾಥ್ ನೀಡಿದರು. ಕುಂದಗೋಳದಲ್ಲಿ ಪಕ್ಷದ ಕಾರ್ಯಕರ್ತ ಬಸವರಾಜ್ ಹಂಚಿನಮನಿ ಅವರ ಮನೆ ಗೋಡೆ ಮೇಲೆ ಕಮಲ ಚಿತ್ರ ಬಿಡಿಸುವ ಮೂಲಕ ಅಮಿತ್ ಶಾ ಅವರು ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಿದರು. ತಮ್ಮ ಮನೆಗೆ ಆಗಮಿಸಿದ ಅಮಿತ್ ಶಾ ಅವರಿಗೆ ಬಸವರಾಜ್ ಹಂಚಿನಮನಿ ಕುಟುಂಬಸ್ಥರು ಆರತಿ ಬೆಳಗಿದರು. ಈ ವೇಳೆ ಅಮಿತ್ ಶಾ ಮನೆಯ ಪುಟ್ಟ ಬಾಲಕಿಗೆ ಹಾರ ಹಾಕಿದರು.



ರೋಡ್ ಶೋ ನಂತರ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅಮಿತ್ ಶಾ, ಜೆಡಿಎಸ್ ಹಾಗೂ ಕಾಂಗ್ರೆಸ್ ಕರ್ನಾಟಕವನ್ನು ಲೂಟಿ ಮಾಡಿದ್ದು, ಸಿದ್ದರಾಮಯ್ಯ ಅವರು ಅಧಿಕಾರದಲ್ಲಿದ್ದಾಗ ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಕಾಂಗ್ರೆಸ್ ಹೈಕಮಾಂಡ್ ಕರ್ನಾಟಕವನ್ನು ಎಟಿಎಂ ಮಾಡಿಕೊಂಡಿತ್ತು ಎಂದು ಆರೋಪಿಸಿದರು. ಮೋದಿ ಸರ್ಕಾರ ದೇಶದಲ್ಲಿ ಭಯೋತ್ಪಾದನೆ ಮಟ್ಟಹಾಕಿದೆ. ಅಯೋಧ್ಯೆಯಲ್ಲಿ ಭವ್ಯವಾದ ಶ್ರೀರಾಮ ಮಂದಿರ ನಿರ್ಮಾಣವಾಗುತ್ತಿದೆ. ರಾಜ್ಯದಲ್ಲಿ ಬಹುಮತದಿಂದ ಮತ್ತೆ ಬಿಜೆಪಿ ಅಧಿಕಾರಕ್ಕೆ ತರುವ ಗುರಿ ಹೊಂದಬೇಕಿದೆ. ಕರ್ನಾಟಕದಲ್ಲಿ ಮತ್ತೊಮ್ಮೆ ಬಿಜೆಪಿಗೆ ಬೆಂಬಲ ನೀಡುವಂತೆ ಮನವಿ ರಾಜ್ಯದ ಜನರಿಗೆ ಹಾಗೂ ಕಾರ್ಯಕರ್ತರಿಗೆ ಮನವಿ ಮಾಡಿದರು.

ನಾಳೆ ಸಚಿವ ಸೋಮಣ್ಣ ಮೈಸೂರು ಪ್ರವಾಸ

ಮೈಸೂರು,ಜ.28–ವಸತಿ ಸಚಿವ ವಿ.ಸೋಮಣ್ಣ ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಜ.30ರಂದು ಸಂಜೆ 5 ಗಂಟೆಗೆ ಜಿಲ್ಲೆಯ ವಸತಿ ಯೋಜನೆಗಳ ಕುರಿತಂತೆ ವಸತಿ ಇಲಾಖೆ ಅಧಿಕಾರಿಗಳೊಂದಿಗೆ ಸರ್ಕಾರಿ ಅತಿಥಿಗೃಹದಲ್ಲಿ ಚರ್ಚಿಸಲಿದ್ದಾರೆ. ಸಂಜೆ 5.30ಕ್ಕೆ ಸಂಸದ ಪ್ರತಾಪ್ ಸಿಂಹ ಮನೆಗೆ ಸೌಹಾರ್ದ ಭೇಟಿ ನೀಡಲಿದ್ದಾರೆ. ಸಂಜೆ 6 ಗಂಟೆಗೆ ಹೋಟೆಲ್ ರಾಡಿಸನ್ ಬ್ಲ್ಯೂನಲ್ಲಿ ಖಾಸಗಿ ಕಾರ್ಯದಲ್ಲಿ ಭಾಗವಹಿಸುವಹಿಸಲಿದ್ದಾರೆ

ಇಂದು 5, 10 ಮೈಲಿ 'ಮೈಲಿಥಾನ್' ಓಟ

ಮೈಸೂರು,ಜ.28(ಪಿಎಂ)–ಕೆಎನ್‌ಎಸ್ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ಕಂಪನಿ ವತಿಯಿಂದ ಜ.29ರಂದು 5 ಮತ್ತು 10 ಮೈಲಿ ದೂರದ ಓಟ 'ಮೈಲಿಥಾನ್' ಅನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಂಪನಿ ಮಾರ್ಕೆಟಿಂಗ್ ಮುಖ್ಯಸ್ಥ ವಿಶ್ರುತ್ ರಾಯಚೂರು ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 6ಕ್ಕೆ ಓಟ ಆರಂಭವಾಗಲಿದೆ. ಚಾಮುಂಡಿಬೆಟ್ಟದ ಪಾದದಲ್ಲಿ ಇರುವ ಕಂಪನಿಯ ಕೆಎನ್‌ಎಸ್ ಇಥೋಸ್ ಆವರಣದಿಂದ ನಗರದ ವಿವಿಧ ರಸ್ತೆಗಳಲ್ಲಿ ಸಂಚರಿಸಿ ಮತ್ತೆ ಕಂಪನಿ ಆವರಣಕ್ಕೆ ಹಿಂತಿರುಗಿ ಓಟ ಅಂತ್ಯಗೊಳ್ಳಲಿದೆ ಎಂದರು. ಸ್ವಚ್ಛ ಮೈಸೂರು ಬಗ್ಗೆ ಅರಿವು ಮೂಡಿಸಲು ಈ ಓಟ ಏರ್ಪಡಿಸಿದ್ದು, ಓಪನ್, ಮಾಸ್ಟರ್ ಮತ್ತು ಎಲೈಟ್ ವಿಭಾಗಗಳೊಂದಿಗೆ ಪುರುಷರು ಮತ್ತು ಮಹಿಳೆಯರು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಓಪನ್ ವಿಭಾಗದಲ್ಲಿ ಪ್ರಥಮ ಸ್ಥಾನಕ್ಕೆ 15 ಸಾವಿರ ರೂ, ದ್ವಿತೀಯ ಸ್ಥಾನಕ್ಕೆ 10 ಸಾವಿರ ರೂ. ಮತ್ತು ತೃತೀಯ ಸ್ಥಾನಕ್ಕೆ 5 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ಉಳಿದ ವಿಭಾಗಗಳಲ್ಲಿ ಟ್ರೋಫಿ ಹಾಗೂ ಪ್ರಮಾಣ ಪತ್ರ ನೀಡಲಾಗುತ್ತದೆ. ಈಗಾಗಲೇ ಸುಮಾರು 400 ಮಂದಿ ನೋಂದಣಿ ಮಾಡಿಕೊಂಡಿದ್ದು, ಸ್ಥಳದಲ್ಲಿಯೂ ನೋಂದಣಿಗೆ ಅವಕಾಶವಿದೆ ಎಂದರು. ಮಾರ್ಕೆಟಿಂಗ್ ವ್ಯವಸ್ಥಾಪಕ ನಿಖಿಲ್ ಗೋಷ್ಠಿಯಲ್ಲಿದ್ದರು.

ಮಹಿಳೆ ಚಿನ್ನಾಭರಣ ಕಳವು

ಮೈಸೂರು, ಜ. 28– ಮಗುವಿನೊಂದಿಗೆ ಕೆಎಸ್‌ಆರ್‌ಟಿಸಿ ಬಸ್ ಹತ್ತಿದ ಕಳ್ಳಿ, ಮಹಿಳೆಯ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ.

ಮೈಸೂರಿನ ರಾಜೀವ್‌ನಗರ 2ನೇ ಹಂತದ ನಿವಾಸಿ ನೂರ್ ಫಾತಿಮಾ(65) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಸಂಬಂಧಿಕರ ಮದುವೆಗಾಗಿ ಬೆಂಗಳೂರಿಗೆ ತೆರಳಲು ಜ.26ರಂದು ಬೆಳಗ್ಗೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸ್ (ಕೆಎ 09–ಎಫ್ 5019) ಹತ್ತಿ ಕುಳಿತಿದ್ದಾರೆ ಈ ವೇಳೆ ಮಗುವಿನೊಂದಿಗೆ ಬಂದ ಕಳ್ಳಿ, ಇವರ ಮೇಲೆ ಚಿಲ್ಲರೆ ಕಾಸುಗಳನ್ನು ಬೀಳಿಸಿ, ಅದನ್ನು ತೆಗೆದುಕೊಡುವಂತೆ ಕೋರಿದ್ದಾಳೆ. ಮಗುವಿನೊಂದಿಗೆ ಬಂದಿದ್ದ ಮಹಿಳೆಯ ಮೇಲೆ ಕನಿಕರಪಟ್ಟು ನೂರ್ ಫಾತಿಮಾ ತಮ್ಮ ಮೇಲೆ ಬಿದ್ದಿದ್ದ ಹಾಗೂ ಸೀಟಿನ ಕೆಳಗೆ ಬಿದ್ದಿದ್ದ ಚಿಲ್ಲರೆ ಕಾಸುಗಳನ್ನು ತೆಗೆದು ಆಕೆಗೆ ಕೊಟ್ಟಿದ್ದಾರೆ. ಆ ನಂತರ ಆಕೆ ತಾನು ಟಿಕೆಟ್ ತೆಗೆದುಕೊಂಡು ಬರುವುದಾಗಿ ತಿಳಿಸಿ, ಬಸ್‌ನಿಂದ ಇಳಿದವಳು ಮತ್ತೆ ಬರಲಿಲ್ಲ. ನೂರ್ ಫಾತಿಮಾ ಸ್ವಲ್ಪ ದೂರ ತೆರಳಿದ ನಂತರ ಮೊಬೈಲ್ ತೆಗೆದುಕೊಳ್ಳಲು ವ್ಯಾನಿಟಿ ಬ್ಯಾಗ್ ನೋಡಿದಾಗ ಅದರ ಜಿಪ್ ತೆರೆದುಕೊಂಡಿತ್ತು. 120 ಗ್ರಾಂ ತೂಕದ ಚಿನ್ನಾಭರಣವಿದ್ದ ಬಾಕ್ಸ್ ಕಳುವಾಗಿರುವುದು ಗೊತ್ತಾಗಿದೆ. ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಸವಾರ ಸಾವು

ನಾಗಮಂಗಲ,ಜ.28–ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ನಾಗಮಂಗಲ ತಾಲೂಕು ಹೊನ್ನದೇವಿಹಳ್ಳಿಯಲ್ಲಿ ಸಂಭವಿಸಿದೆ. ತಾಲೂಕಿನ ಹಡೇನಹಳ್ಳಿಯ ರೈತ ಗಂಗಾಧರ(60) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಜ.26ರಂದು ಮಧ್ಯಾಹ್ನ 3.15ರ ಸುಮಾರಿನಲ್ಲಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬೈಕ್ (ಕೆಎ 43–ಜೆ 3550)ನಲ್ಲಿ ತೆರಳುತ್ತಿದ್ದಾಗ ಹೊನ್ನದೇವಿಹಳ್ಳಿ ಬಳಿ ಹಿಂಬದಿಯಿಂದ ವೇಗವಾಗಿ ಬಂದ ಕಾರು (ಕೆಎ 13–ಪಿ 4367) ಇವರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಗಂಗಾಧರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಬಿಂಡಿನವಿಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

STAR OF MYSORE

SPECIAL ISSUE

Star of Mysore is completing **45** years of service on **16th February 2023** and entering **46th** year of publication. As in the past, this year too we will be publishing a Special Issue.

We request our advertisers and patrons to release their advertisements before **10th February** to facilitate printing as per schedule.

HEAD OFFICE

0821-2496520 (5-LINES)
0821-2496522 / 23
Email : ad@starofmysore.com

Maria G. Fernandes
Advt. Manager: **94485-25060**

Joy Anthony Dove
Sr. Executive-Ad Sales
89516-68960

Prema
Sr. Executive Advertising
98805-49879

K.R. Circle Office : 0821-2431774
D.D. Urs Road Office : 0821-2428695
Kodagu Office : 97314-69871
Mandya Office : 87629-60325
Chamarajanagar : 92422-65657
Nanjangud : 99016-02226
Hassan : 94484-01175
Bengaluru : 98440-46761

A1 Cabs Mysore

Mysore to Bangalore Airport Drop OR Pickup

Vehicle Type	BLR Airport / Pickup	BLR City Drop / Pickup
Etios / Dzire	2600/-	2300/-
Innova	4000/-	3800/-
Innova Crysta	4500/-	4300/-

Contact : 8951464518
Website : www.A1cabs.in

TRAVEL COMFORTS MYSORE
Domestic and International Packages

Thailand Package= 4N5D	44000/- PP
Thailand Package = 5N6D	47000/-PP
Bali Package = 5N6D	99900/-PP
Best of Turkey with cruise to greece= 10N11D	159000/-PP
Romantic Switzerland and Paris = 9N10D	245000/-PP
Europe = 12N13D	275000/-PP
Grand tour Europe = 15N16D	345000/-PP

Contact: Mobile: 7483434279
Office : 0821-4056115

WE ARE HIRING
for a reputed developer office

Sales Manager, Marketing Exe. & Female Telecaller.
(two years experience)
Drop your resume

layoutmahendra@gmail.com
Contact: **8884001233**

BOOKINGS OPEN FOR
Construction of Brand New Architecture Designed Houses

MUDA APPROVED
20'x40 - 32 Lakhs
30'x40' - 46.5 Lakhs

Near St. Joseph's Central School, Hunsur Road, Mysore.
9740767576, 8884001233

ಕಳೆದಿದೆ

ನೂರ್‌ಜಾನ್ W/o ಲೇಟ್ ಅಬ್ದುಲ್ ಖಾದರ್, ನಂ.943, 4ನೇ ಕ್ರಾಸ್, ಜಯರಾಂ ಪಂಡಿತ್ ರಸ್ತೆ, ದೇವರಾಜ ಮೊಹಲ್ಲಾ ಮೈಸೂರು. ಇವರ (LIG-2-107) ಕ್ಯಾತಮಾರನಹಳ್ಳಿ, ಮೈಸೂರು. ಮನೆಯ ಮಂಜೂರಾತಿ ಪತ್ರವು ಶಿವರಾಂಪೇಟೆಯ ಹತ್ತಿರ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
8553927745



ಮಡಿಕೇರಿ ತಾಲೂಕು ಸಾಹಿತ್ಯ ಸಮ್ಮೇಳನಕ್ಕೆ ವೈಭವದ ಚಾಲನೆ

ಬುಡಕಟ್ಟು ಸಮಾಜಗಳ ಭಾಷೆ ಅಭಿವೃದ್ಧಿಗೆ ಅಕಾಡೆಮಿ ಅಗತ್ಯ

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ರಾಣಿ ಮಾಚಯ್ಯ ಅವರಿಗೆ ಸನ್ಮಾನ





ಮಡಿಕೇರಿ, ಜ.28– ಜಿಲ್ಲೆಯ ಬುಡಕಟ್ಟು ಭಾಷೆಗಳನ್ನು ಉಳಿಸಿ, ಬೆಳೆಸುವಂತಾಗಲು ಮತ್ತೊಂದು ಅಕಾಡೆಮಿ ಅತ್ಯಗತ್ಯ. ಆ ನಿಟ್ಟಿನಲ್ಲಿ ಪ್ರಯತ್ನಗಳು ಮುಂದುವರೆಯಬೇಕು ಎಂದು ಶಾಸಕ ಕೆ.ಜಿ. ಬೋಪಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಮಡಿಕೇರಿ ತಾಲೂಕಿನ ಬೆಟ್ಟಗೇರಿಯಲ್ಲಿ ಶನಿವಾರ ನಡೆದ ವೈಭವದ 11ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೊಡಗು ಜಿಲ್ಲೆಯಲ್ಲಿ ಮೂಲ ಸಂಸ್ಕೃತಿ ಉಳಿಸುವಲ್ಲಿ ಬುಡಕಟ್ಟು ಸಮುದಾಯಗಳ ಭಾಷೆ ಅಭಿವೃದ್ಧಿಗೆ ಮುಂದಾಗಬೇಕು. ಆ ನಿಟ್ಟಿನಲ್ಲಿ ಜಿಲ್ಲೆಯಲ್ಲಿನ ಯರವ, ಕುಡಿಯ, ಕಾಡು ಕುರುಬ, ಜೇನುಕುರುಬ, ಬೆಟ್ಟಕುರುಬ, ಸೋಲಿಗ ಹೀಗೆ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಭಾಷೆ ಮಾತನಾಡುತ್ತಿದ್ದು, ಇವುಗಳು ಕನ್ನಡದ ಉಪ ಭಾಷೆಗಳಾಗಿವೆ. ಇವುಗಳನ್ನು ಉಳಿಸಿ ಬೆಳೆಸಬೇಕಿದೆ ಎಂದು ಅವರು ತಿಳಿಸಿದರು.

ಈಗಾಗಲೇ ಜಿಲ್ಲೆಯಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಗಳು ಸ್ಥಾಪನೆಯಾಗಿದೆ. ಜೊತೆಗೆ ಬುಡಕಟ್ಟು ಸಮಾಜಗಳು ಮಾತನಾಡುವ ಭಾಷೆ ಉಳಿಸಿ, ಬೆಳೆಸುವಲ್ಲಿ ಅಕಾಡೆಮಿ ಸ್ಥಾಪನೆ ಸಮಯೋಚಿತವಾಗಿದೆ ಎಂದರು.

ಆಧುನಿಕತೆ ಬೆಳೆದಂತೆ ನಗರ ಪಟ್ಟಣ ಪ್ರದೇಶಗಳಲ್ಲಿ ಮಕ್ಕಳಿಗೆ ಕನ್ನಡ ಭಾಷೆ ಬರದಿದ್ದರೆ ಹೆಮ್ಮೆಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಒಳ್ಳೆಯ ಬೆಳವಣಿಗೆಯೇ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಇಂತಹುದು ಗ್ರಾಮೀಣ ಪ್ರದೇಶಗಳಿಗೂ ಇತ್ತೀಚೆಗೆ ತಲುಪುತಿದೆ ಎಂದರು.

ಕರ್ನಾಟಕದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ಎಂಬುದನ್ನು ಯಾರೂ ಸಹ ಮರೆಯಬಾರದು. ಭಾರತೀಯ ಸಂಸ್ಕೃತಿಯು ಅನೇಕತೆಯಲ್ಲಿ ಏಕತೆಯನ್ನು ಹೊಂದಿದ್ದು, ಸ್ಪರ್ಧಾತ್ಮಕ ಯುಗದಲ್ಲಿ ಇಂಗ್ಲೀಷ್ ವ್ಯವಹಾರಿಕ ಭಾಷೆಯಾದರೂ ಸಹ, ನಮ್ಮ ಮಾತೃ ಭಾಷೆಗಳನ್ನು ಮರೆಯಬಾರದು. ಕನ್ನಡ ಭಾಷೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ಹೆಚ್ಚಿನ ಸಹಕಾರ ನೀಡುತ್ತಿದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಟಿ.ಪಿ. ರಮೇಶ್ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ವಿವಿಧ ಭಾಷೆಗಳಿದ್ದು, ಕೊಡಗಿನ ಬುಡಕಟ್ಟು ಸಂಸ್ಕೃತಿ ಉಳಿಸಲು ಶ್ರಮಿಸಬೇಕಿದೆ ಎಂದರು.

ಯುವಜನರು ಸಾಹಿತ್ಯ ಅಭಿರುಚಿ ಬೆಳೆಸಿಕೊಳ್ಳಬೇಕು. ಪೂರ್ವಿಕರಿಂದ ಉಳಿಸಿಕೊಂಡು ಬಂದಿರುವ ಭಾಷೆಯನ್ನು ಮುಂದುವರಿಸಬೇಕು. ಪ್ರತಿಯೊಬ್ಬರೂ ವಿಶ್ವ ಮಾನವರಾಗಿ ಬದುಕಬೇಕು. ಸಾಹಿತ್ಯ ಪ್ರಕಾರದ ವಿಚಾರಗಳನ್ನು ತಿಳಿದುಕೊಳ್ಳಬೇಕು ಎಂದರು.

ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ರವಿ ಮಾತನಾಡಿ, ರಾಷ್ಟ್ರದಲ್ಲಿ ಗುರುತಿಸುವಂತಹ ಪುಣ್ಯಭೂಮಿ ಕೊಡಗು. ಕಾವೇರಿ ಮಾತೆಯನ್ನು ನಾವು ಸದಾ ಪೂಜಿಸಬೇಕು. ಕೊಡಗಿನ ಪುಣ್ಯಭೂಮಿಯಲ್ಲಿ ಕಿಟಲ್ ಅವರು ಪದಕೋಶವನ್ನು ಆರಂಭಿಸಿದರು. ಇದು ಹೆಮ್ಮೆಯ ವಿಚಾರವಾಗಿದೆ ಎಂದರು.

ಇಂದಿಗೂ ಸಹ ಗ್ರಾಮೀಣ ಹಾಗೂ ಬುಡಕಟ್ಟು ಜನರು ವಾಸಿಸುವ ಪ್ರದೇಶದಲ್ಲಿ ಕನ್ನಡ ಭಾಷೆ ಉಳಿದಿದೆ ಎಂದರೆ ತಪ್ಪಾಗಲಾರದು. ಕನ್ನಡವು ಸಮಸ್ತ ನಾಡಿನ ಭಾಷೆಯಾಗಿದೆ. ಪಂಪ, ರನ್ನ, ಪೊನ್ನ, ಹೀಗೆ ಹಲವರು ಕನ್ನಡ ಭಾಷೆ ಬೆಳವಣಿಗೆಗೆ ಶ್ರಮಿಸಿದ್ದಾರೆ ಎಂದು ಡಾ.ಡಿ.ರವಿ ಅವರು ಹೇಳಿದರು.

ರಾಷ್ಟ್ರದಲ್ಲಿ ಭಾಷೆಯ ಮೂಲಕ ರಾಜ್ಯಗಳನ್ನು ವಿಂಗಡಣೆ ಮಾಡಲಾಗಿದೆ. ಆ ನಿಟ್ಟಿನಲ್ಲಿ ಯಾವುದೇ ಜಾತಿ, ಧರ್ಮ, ಪಂಥಕ್ಕಿಂತ ನಾಡಿನ ಭಾಷೆಯೇ ಎಲ್ಲರನ್ನೂ ಒಟ್ಟುಗೂಡಿಸಲು ಸಾಧ್ಯ ಎಂಬುದನ್ನು ಮರೆಯುವಂತಿಲ್ಲ ಎಂದರು.

ಮಡಿಕೇರಿ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಮಾತನಾಡಿ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿದಲ್ಲಿ ಮಾತ್ರ ಕನ್ನಡ ಅಸ್ಮಿತೆ ಉಳಿಯಲು ಸಾಧ್ಯ. ಆ ನಿಟ್ಟಿನಲ್ಲಿ ಯಾವುದೇ ಭಾಷೆಯನ್ನು ಮಾತನಾಡಿದರೂ ಸಹ ಕನ್ನಡಕ್ಕೆ ಪ್ರಥಮ ಆದ್ಯತೆ ನೀಡಬೇಕು. ಕನ್ನಡ ಸಾಹಿತ್ಯ ಅಧ್ಯಯನದಿಂದ ಹೆಚ್ಚಿನ ಜ್ಞಾನ ಸಂಪಾದಿಸಲು ಸಾಧ್ಯ ಎಂದು ಹೇಳಿದರು.

ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿರುವ ರಾಣಿ ಮಾಚಯ್ಯ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿ 10 ಸಾವಿರ ಮಕ್ಕಳಿಗೆ ಕೊಡವ ಸಾಂಪ್ರದಾಯಿಕ 'ಉಮ್ಮತ್ತಾಟ್' ಕಲಿಸಲು ಪ್ರಯತ್ನಿಸಲಾಗಿದೆ. ನನಗೆ ಸಿಕ್ಕಿರುವ ಪದ್ಮಶ್ರೀ ಪ್ರಶಸ್ತಿಯು ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಶಸ್ತಿ ದೊರೆತಂತೆ ಎಂದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾತನಾಡಿ, ಪ್ರತಿಯೊಬ್ಬರೂ ಕನ್ನಡದಲ್ಲಿ ಮಾತನಾಡಬೇಕು. ಕನ್ನಡದಲ್ಲಿ ಬರೆಯಬೇಕು. ಕನ್ನಡ ಭಾಷೆ ಬಗ್ಗೆ ಪ್ರೀತಿ, ಅಭಿಮಾನ ಇರಬೇಕು. ಕನ್ನಡ ಕೆಲಸಗಳಿಗೆ ಸದಾ ಬೆಂಬಲವಿರುತ್ತದೆ ಎಂದರು.

ಸಾಹಿತಿ ಕಿಗ್ಗಾಲು ಗಿರೀಶ್ ಮಾತನಾಡಿ, ಕನ್ನಡ ಭಾಷೆ ಮಾತನಾಡಲು ಹಿಂಜರಿಕೆ ಬೇಡ. ಕನ್ನಡ ಪುಸ್ತಕಗಳನ್ನು ಹೆಚ್ಚು ಅಧ್ಯಯನ ಮಾಡಬೇಕು ಎಂದರು.

ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಕೇಶವ ಕಾಮತ್ ಮಾತನಾಡಿದರು. ಬೆಟ್ಟಗೇರಿ ಗ್ರಾಪಂ ಅಧ್ಯಕ್ಷರಾದ ನಾಪಂಡ ರ್‍ಯಾಲಿ ಮಾದಯ್ಯ, ಸಾಹಿತಿ ಬಾಚರಣಿಯಂಡ ಕೆ.ಅಪ್ಪಣ್ಣ, ಮಡಿಕೇರಿ ತಾಲೂಕು ಕಸಾಪ ಅಧ್ಯಕ್ಷ ನವೀನ್ ಅಂಬೆಕಲ್ಲು, ಬೆಟ್ಟಗೇರಿ ಉದಯ ವಿದ್ಯಾಸಂಸ್ಥೆಯ ಅಧ್ಯಕ್ಷ ತಳೂರು ಕಿಶೋರ್ ಕುಮಾರ್, ಮಡಿಕೇರಿ ತಾಲೂಕು ಕಸಾಪ ನಿಕಟಪೂರ್ವ ಅಧ್ಯಕ್ಷ ಕುಡೆಕಲ್ ಸಂತೋಷ್, ಕಸಾಪ ಜಿಲ್ಲಾ ಘಟಕದ ಗೌರವ ಕಾರ್ಯದರ್ಶಿ ಮುನೀರ್ ಅಹಮ್ಮದ್, ರೇವತಿ ರಮೇಶ್, ಕಸಾಪ ತಾಲೂಕು ಅಧ್ಯಕ್ಷರು ಇತರರಿದ್ದರು.

ಇಂದು ಗಾಳಿಬೀಡು ಜವಾಹರ್ ನವೋದಯ ವಿದ್ಯಾಲಯದ ವಾರ್ಷಿಕೋತ್ಸವ

ಮಡಿಕೇರಿ, ಜ.28– ಗಾಳಿಬೀಡು ಜವಾಹರ್ ನವೋದಯ ವಿದ್ಯಾಲಯ ವತಿಯಿಂದ ಜ.29 ರಂದು ಬೆಳಗ್ಗೆ 11 ಗಂಟೆಗೆ ವಿದ್ಯಾಲಯದ ಸಭಾಂಗಣದಲ್ಲಿ ವಾರ್ಷಿಕೋತ್ಸವ ಸಮಾರಂಭ ನಡೆಯಲಿದೆ. ಅಧ್ಯಕ್ಷರು, ಪ್ರಾಂಶುಪಾಲರು, ಸಿಬ್ಬಂದಿ, ವಿದ್ಯಾರ್ಥಿಗಳು ಇತರರು ಪಾಲ್ಗೊಳ್ಳಲಿದ್ದಾರೆ.

ಫೀ.ಮಾ.ಕೆ.ಎಂ.ಕಾರ್ಯಪ್ಪನವರ ಜನ್ಮದಿನ ಆಚರಣೆ

ಸೇನೆಯನ್ನು ಇಡೀ ವಿಶ್ವವೇ ಮೆಚ್ಚುವ ರೀತಿ ಮುನ್ನಡೆಸಿದ ಮಹಾನ್ ಚೇತನ



ಮಡಿಕೇರಿ,ಜ.28– ಸ್ವಾತಂತ್ರ್ಯಾ ನಂತರ ಭಾರತದ ಸೈನ್ಯವನ್ನು ಸಶಕ್ತವಾಗಿ ಮರು ರೂಪಿಸಿದ, ಪ್ರಥಮ ಮಹಾದಂಡ ನಾಯಕ ಫೀಲ್ಡ್ ಮಾರ್ಷಲ್ ಕೊಡಂದೇರ ಎಂ. ಕಾರ್ಯಪ್ಪ ಅವರ 124ನೇ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಮೈಸೂರು ರಸ್ತೆಯಲ್ಲಿರುವ ವೀರ ಸೇನಾನಿಯ ಪ್ರತಿಮೆಯ ಆವರಣದಲ್ಲಿ ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ ಫೀ.ಮಾ.ಕೆ.ಎಂ. ಕಾರ್ಯಪ್ಪ ಪ್ರತಿಮೆಗೆ, ಮಡಿಕೇರಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್, ವಿರಾಜಪೇಟೆ ಶಾಸಕ ಕೆ.ಜಿ. ಬೋಪಯ್ಯ, ವೀರ ಸೇನಾನಿಯ ಪುತ್ರ ಏರ್ ಮಾರ್ಷಲ್ ಕೆ.ಸಿ.ಕಾರ್ಯಪ್ಪ(ನಿವೃತ್ತ), ಪದ್ಮಶ್ರೀ ಐಮುಡಿಯಂಡ ರಾಣಿ ಮಾಚಯ್ಯ ಹಾಗೂ ಗಣ್ಯರು ಪುಷ್ಪ ಗುಚ್ಛವನ್ನಿರಿಸಿ ಗೌರವ ಸಲ್ಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಅಪ್ಪಚ್ಚು ರಂಜನ್, ಸ್ವಾತಂತ್ರ್ಯದ ಆರಂಭಿಕ ದಿನಗಳಲ್ಲಿ ವಾಯು, ಜಲ ಮತ್ತು ಭೂಸೇನೆಯ ಮಹಾದಂಡ ನಾಯಕರಾಗಿದ್ದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರು, ದೇಶದ ಸೇನೆಯನ್ನು ಇಡೀ ವಿಶ್ವವೇ ಮೆಚ್ಚುವ ರೀತಿಯಲ್ಲಿ ಸಶಕ್ತವಾಗಿ ರೂಪಿಸಿದ ಮಹಾನ್ ಚೇತನವಾಗಿದ್ದಾರೆಂದು ನುಡಿದರು. ಫೀ.ಮಾ. ಕಾರ್ಯಪ್ಪ ಅವರು ತಮ್ಮ ಬದುಕಿನುದ್ದಕ್ಕೂ ಶಿಸ್ತು, ಪ್ರಮಾಣಿಕತೆ, ಸಮಯಪಜ್ಞೆಗೆ ಪ್ರಥಮ ಆದ್ಯತೆ ನೀಡಿ, ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿಯನ್ನು ಮೈದುಂಬಿಕೊಂಡಿದ್ದರು. ಅವರ ಆದರ್ಶ, ಚಿಂತನೆಗಳನ್ನು ಪ್ರತಿಯೊಬ್ಬರು ಪರಿಪಾಲಿಸುವಂತಾಗಬೇಕೆಂದು ಆಶಿಸಿದರು.

ಗ್ರಂಥಾಲಯಕ್ಕೆ ಹೆಚ್ಚಿನ ಒತ್ತು: ಫೀ.ಮಾ. ಕೆ.ಎಂ. ಕಾರ್ಯಪ್ಪ ಅವರು ಸೋಮವಾರಪೇಟೆ ತಾಲೂಕಿನ ಶನಿವಾರಸಂತೆಯಲ್ಲಿ ಜನಿಸಿದ ಮನೆಯನ್ನು ಗ್ರಂಥಾಲಯವನ್ನಾಗಿ ಪರಿವರ್ತಿಸಲಾಗಿದೆ ಇದನ್ನು ಮತ್ತಷ್ಟು ಉತ್ತಮವಾಗಿ ರೂಪಿಸಲು ಒತ್ತು ನೀಡಲಾಗುವುದು ಎಂದು ಶಾಸಕ ಅಪ್ಪಚ್ಚು ರಂಜನ್ ಸ್ಪಷ್ಟಪಡಿಸಿದರು. ಅಲ್ಲಿ ವೀರಸೇನಾನಿಯ ಪ್ರತಿಮೆ ಅನಾವರಣದ ಬೇಡಿಕೆ ಇಲ್ಲಿಯವರೆಗೆ ತಮಗೆ ಬಂದಿಲ್ಲ. ಸ್ವಯಂ ಫೀ.ಮಾ. ಕಾರ್ಯಪ್ಪ ಅವರಿಗೆ ಪ್ರತಿಮೆಗಳ ಸ್ಥಾಪನೆ ಬಗ್ಗೆ ವಿಶೇಷ ಆಸಕ್ತಿ ಇರಲಿಲ್ಲವೆಂದು ಹೇಳಿದರು.

ವೀರ ಸೇನಾನಿಗೆ ಗೌರವಾರ್ಪಣೆ: ವೀರ ಸೇನಾನಿಯ ಪ್ರತಿಮೆಗೆ ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಎಂ.ಎ.ಅಯ್ಯಪ್ಪ, ಮಡಿಕೇರಿ ನಗರಸಭೆ ಅಧ್ಯಕ್ಷೆ ಎನ್.ಪಿ.ಅನಿತಾ, ತಹಶೀಲ್ದಾರ್ ಮಹೇಶ್, ಕೂಡಿಗೆ ಸೈನಿಕ ಶಾಲೆಯ ಪ್ರಾಂಶುಪಾಲರಾದ ಕರ್ನಲ್ ಜಿ.ಕಣ್ಣನ್, ಎಡಿಸಿ ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಸತೀಶ್ ಉಲ್ಲಾಳ್, ಕರ್ನಲ್ ನಾರಾಯಣ ಮೂರ್ತಿ(ನಿವೃತ್ತ), ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಹ ಕಾರ್ಯದರ್ಶಿ ಬೊಳ್ಳಜಿರ ಅಯ್ಯಪ್ಪ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಂಗಧಾಮಯ್ಯ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಅಜ್ಜಿಕುಟ್ಟೀರ ಗಿರೀಶ್, ಜಿಲ್ಲಾ ವಾರ್ತಾಧಿಕಾರಿ ಚಿನ್ನಸ್ವಾಮಿ ಸೇರಿದಂತೆ ಹಲ ಗಣ್ಯರು ಪುಷ್ಪ ಗುಚ್ಛವನ್ನಿರಿಸಿ ಗೌರವ ನಮನ ಸಲ್ಲಿಸಿದರು.

ಬಹುಮಾನ ವಿತರಣೆ: ಫೀ.ಮಾ.ಕೆ.ಎಂ. ಕಾರ್ಯಪ್ಪ ಜನ್ಮದಿನಾಚರಣೆ ಹಿನ್ನೆಲೆಯಲ್ಲಿ ಏರ್ಪಡಿಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಸಂತ ಮೈಕೆಲರ ಶಾಲೆಯ ಭೂಮಿಕ ಎನ್, ದ್ವಿತೀಯ ಸ್ಥಾನ ಪಡೆದ ಕೊಡಗು ವಿದ್ಯಾಲಯದ ಕೀರ್ತಿ ಅಯ್ಯಪ್ಪ ಮಡಿಕೇರಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕೆನ್ ರಾಯ್ ಅವರಿಗೆ ಬಹುಮಾನಗಳನ್ನು ಇದೇ ಸಂದರ್ಭ ವಿತರಿಸಲಾಯಿತು.

ಜಿಲ್ಲಾ ಪೊಲೀಸ್ ವಾದ್ಯ ತಂಡ ಸಿದ್ದೇಶ್ ಅವರ ನೇತೃತ್ವದಲ್ಲಿ ವೀರ ಸೇನಾನಿಗೆ ಗೌರವ ನಮನ ಸಲ್ಲಿಸಿ ಗಮನ ಸೆಳೆಯಿತು. ಕಾರ್ಯಕ್ರಮದಲ್ಲಿ ಕೂಡಿಗೆ ಸೈನಿಕ ಶಾಲೆ, ಮಡಿಕೇರಿಯ ಸಂತ ಮೈಕೆಲರ ಶಾಲೆ, ಕೊಡಗು ವಿದ್ಯಾಲಯ, ಜನರಲ್ ತಿಮ್ಮಯ್ಯ, ಬ್ಲಾಸಂ ಶಾಲಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಹಗ್ಗ ತುಂಡಾಗಿ ಲಾರಿಯಿಂದ ಪಿಕ್‌ಅಪ್ ವಾಹನದ ಮೇಲೆ ಉರುಳಿದ ಮರದ ದಿಮ್ಮಿ

ವಾಹನ ಜಖಂ, ಚಾಲಕ ಪವಾಡ ಸದೃಶ ರೀತಿಯಲ್ಲಿ ಪಾರು



ಮಡಿಕೇರಿ, ಜ.28–ಟಿಂಬರ್ ಸಾಗಿಸುತ್ತಿದ್ದ ಸಂದರ್ಭ ಹಗ್ಗ ತುಂಡಾಗಿ ಲಾರಿಯಲ್ಲಿದ್ದ ಬೃಹತ್ ಮರದ ದಿಮ್ಮಿಗಳು ಪಿಕ್‌ಅಪ್ ಜೀಪಿನ ಮೇಲೆ ಬಿದ್ದು, ಜೀಪು ಜಖಂಗೊಂಡು ಚಾಲಕ ಪವಾಡ ಸದೃಶ ರೀತಿಯಲ್ಲಿ ಪಾರಾದ ಘಟನೆ ಜೋಡುಪಾಲ ಸಮೀಪ ನಡೆದಿದೆ. ಶುಕ್ರವಾರ ರಾತ್ರಿ 14 ಚಕ್ರದ ಲಾರಿಯಲ್ಲಿ ಭಾರೀ ಉದ್ದದ ಮರದ ದಿಮ್ಮಿಗಳನ್ನು ಮಂಗಳೂರು ಕಡೆಗೆ ಸಾಗಿಸಲಾಗುತ್ತಿತ್ತು. ಲಾರಿ ಜೋಡುಪಾಲ ಸಮೀಪ ಆಗಮಿಸುತ್ತಿದ್ದ ಸಂದರ್ಭದಲ್ಲಿ ಮರದ ದಿಮ್ಮಿಗಳು ಜಾರದಂತೆ ಬೆಸೆಯಲಾಗಿದ್ದ ಹಗ್ಗ ತುಂಡಾಗಿ ಲಾರಿಯಲ್ಲಿದ್ದ ಮರದ ದಿಮ್ಮಿಗಳು ರಸ್ತೆಗೆ ಉರುಳಿ ಬಿದ್ದಿದೆ. ಇದೇ ವೇಳೆ ಜೋಡುಪಾಲ ಕಡೆಯಿಂದ ಮದೆನಾಡು ಕಡೆಗೆ ಬರುತ್ತಿದ್ದ ಪಿಕ್‌ಅಪ್ ವಾಹನದ ಮೇಲೆ ಮರದ ದಿಮ್ಮಿಯೊಂದು ಬಿದ್ದಿದೆ.

ಮರದ ದಿಮ್ಮಿ ಪಿಕ್‌ಅಪ್ ಜೀಪಿನ ಮುಂಭಾಗದ ಗಾಜು ಸೀಳಿ ಒಳಹೊಕ್ಕಿದ್ದು, ಜೀಪು ಚಾಲಕ ಪವಾಡ ಸದೃಶ ರೀತಿಯಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಪಿಕ್‌ಅಪ್ ವಾಹನ ಜಖಂಗೊಂಡಿದ್ದು, ಕೆಲ ಕಾಲ ಹೆದ್ದಾರಿ ಸಂಚಾರ ಅಸ್ತವ್ಯಸ್ತವಾಗಿತ್ತು.

ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ದಲಿತರಿಗೆ ಸಾಮಾಜಿಕ ನ್ಯಾಯ ಸಿಕ್ಕಿಲ್ಲ

ಸಂವಿಧಾನ–ಮತದಾನ ಜಾಗೃತಿ ಅಭಿಯಾನದಲ್ಲಿ ಡಾ.ಎಂ.ಆರ್.ರವಿ ವಿಷಾದ



ಚಾಮರಾಜನಗರ, ಜ.28– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅಪ್ರತಿಮ ಜ್ಞಾನ ಸೂರ್ಯ, ಅವರ ಜ್ಞಾನದ ಪ್ರಭೆ ವಿಶ್ವ ವ್ಯಾಪಿಸಿದೆ. ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿದ್ದರೂ ಇಂದಿಗೂ ದಲಿತರು ಸಾಮಾಜಿಕ ನ್ಯಾಯಕ್ಕಾಗಿ ಬೀದಿಯಲ್ಲಿ ನಿಂತು ಹೋರಾಡುವ ಪರಿಸ್ಥಿತಿ ಇದೆ ಎಂದು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ ವಿಷಾದ ವ್ಯಕ್ತಪಡಿಸಿದರು. ರಂಗವಾಹಿನಿ, ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸುವರ್ಣ ಗಂಗೋತ್ರಿಯ ನಿಜಗುಣ ಸಭಾಂಗಣದಲ್ಲಿ ಅಂಬೇಡ್ಕರ್ ಹಬ್ಬದ ಅಂಗವಾಗಿ ಏರ್ಪಡಿಸಲಾಗಿದ್ದ ಸಂವಿಧಾನ–ಮತದಾನ ಜಾಗೃತಿ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ಇಡೀ ವಿಶ್ವಕ್ಕೆ ಮಾದರಿಯಾಗುವ, ಭಾರತೀಯರೆಲ್ಲರ ಬಾಳಿಗೆ ಬೆಳಕಾಗುವಂತಹ ಸಂವಿಧಾನವನ್ನು ನೀಡಿದರು. ಭಾರತದ ಕೋಟ್ಯಾನುಕೋಟಿ ಶೋಷಿತರಿಗೆ ಮಾನವ ಹಕ್ಕುಗಳನ್ನು ಗಳಿಸಿಕೊಟ್ಟರು. ಭಾರತೀಯರೆಲ್ಲರಿಗೂ ಮತ ಚಲಾಯಿಸುವ ಹಕ್ಕು ತಂದುಕೊಟ್ಟರು. ಮಹಿಳೆಯರು, ಕಾರ್ಮಿಕರು, ರೈತರು ಹಾಗೂ ಹಿಂದುಳಿದ ಜನ ಸಮುದಾಯಗಳಿಗಾಗಿ ಮಾನವ ಹಕ್ಕು ಹಾಗೂ ಕಾನೂನು ರೀತ್ಯದ ಅಧಿಕಾರಗಳನ್ನು ತಂದು ಕೊಡುವ ಸಲುವಾಗಿ ತಮ್ಮ ಬದುಕನ್ನೇ ಮೀಸಲಿಟ್ಟ ಮಹಾಪುರುಷ ಎಂದರು.

ಸಂವಿಧಾನ ಮತ್ತು ಮತದಾನದ ಮಹತ್ವದ ಬಗ್ಗೆ ಮುಖ್ಯ ಭಾಷಣ ಮಾಡಿದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕ ಹಾಗೂ ಚಿಂತಕ ಡಾ.ಕೃಷ್ಣಮೂರ್ತಿ ಚಮರಂ ಅವರು, ಕೇವಲ ಒಂದು ಸಾವಿರ ರೂಪಾಯಿಗೆ ಮತ ಹಾಕಿ ತಮ್ಮ ಅಭ್ಯರ್ಥಿ ಗೆಲ್ಲಿಸುವ ಮತದಾರರು, ವರ್ಷಕ್ಕೆ 365 ದಿನದಂತೆ ಐದು ವರ್ಷಕ್ಕೆ 1825 ದಿನಗಳಿಗೆ ಲೆಕ್ಕ ಹಾಕಿದರೆ ಕೇವಲ 54 ಪೈಸೆಗೆ ತಮ್ಮ ಮತಗಳನ್ನು ಐದು ವರ್ಷಗಳ ಕಾಲ ಅಧಿಕಾರ ನೀಡಿ ಕೋಟ್ಯಾಂತರ ರೂಪಾಯಿ ಕೊಳ್ಳೆ ಹೊಡೆವ ಅವಕಾಶ ಕೊಟ್ಟು ತಮ್ಮ ಬದುಕಿಗೆ ತಾವೇ ಕೊಳ್ಳಿ ಇಟ್ಟುಕೊಳ್ಳುತ್ತಾರೆ. ಇಂತಹ ಮತದಾರರಿಂದ ದೇಶ ಅಭಿವೃದ್ಧಿಯಾಗಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಅತ್ಯುನ್ನತ ಅಧಿಕಾರವನ್ನು ಸಂವಿಧಾನ ನೀಡಿದೆ. ಆದರೆ ಮತದ ಮೌಲ್ಯ ಅರಿಯದ ಮತದಾರರು ತಮ್ಮನ್ನು ಸಣ್ಣ–ಪುಟ್ಟ ಆಸೆ ಆಮಿಷಗಳಿಗೆ ಮಾರಿಕೊಳ್ಳುವ ಮೂಲಕ ಪ್ರಜಾಪ್ರಭುತ್ವದ ಆಶಯಕ್ಕೆ ಪ್ರಜೆಗಳೇ ದ್ರೋಹ ಬಗೆದು ಭ್ರಷ್ಟಾಚಾರದ ಆಡಳಿತಕ್ಕೆ ಅನುವು ಮಾಡಿಕೊಡುತ್ತಾ, ಜನಪ್ರತಿನಿಧಿಗಳ ಗುಲಾಮರಾಗಿದ್ದಾರೆ. ಹೀಗಿರುವಾಗ ದೇಶ ಅಭಿವೃದ್ಧಿಯಾಗುವುದು ಹೇಗೆ? ತಮ್ಮನ್ನೇ ಮಾರಿಕೊಂಡ ಮತದಾರರು ಭ್ರಷ್ಟ ರಾಜಕಾರಣಿಗಳನ್ನು ಸೃಷ್ಟಿಸುತ್ತಾರೆ ಎಂದ ಅವರು ಮತದಾರರು ಬದಲಾದರೆ ಮಾತ್ರ ತಮ್ಮ ಹಕ್ಕು ಅಧಿಕಾರಿಗಳನ್ನು ಕತ್ತಿನ ಪಟ್ಟಿ ಹಿಡಿದುಕೊಳ್ಳುವ ಶಕ್ತಿ ತಿಳಿಸಿಕೊಳ್ಳಬಹುದು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಪಿ. ಮಾದೇಶ್ ಅಧ್ಯಕ್ಷತೆ ವಹಿಸಿದ್ದರು. ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಹಾಗೂ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತರಾದ ಸಿ.ಎಂ. ನರಸಿಂಹ ಮೂರ್ತಿ ಪ್ರಾಸ್ತಾವಿಕ ಭಾಷಣ ಮಾಡಿದರು. ಚೆಸ್ಕಾಂ ಕಾರ್ಯಪಾಲಕ ಅಭಿಯಂತರ ವಸಂತಕುಮಾರ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಸಂವಿಧಾನೋತ್ಸವದ ಪ್ರಯುಕ್ತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಮಹದೇವ ಶಂಕನಪುರ, ಭಾರತ ಸೇವಾದಳದ ಜಿಲ್ಲಾಧ್ಯಕ್ಷ ವೆಂಕಟನಾಗಪ್ಪ ಶೆಟ್ಟಿ, ಜಿ.ಪಂ ಲೆಕ್ಕಾಧಿಕಾರಿ ಹೆಚ್.ಎಸ್. ಗಂಗಾಧರ್, ಸುಗಮ ಸಂಗೀತ ಗಾಯಕ ಅರುಣ್‌ಕುಮಾರ್, ಅಂಬೇಡ್ಕರ್ ಸೇನೆ ಜಿಲ್ಲಾಧ್ಯಕ್ಷ ಗಣೇಶಪ್ರಸಾದ್ ಅವರಿಗೆ ರಂಗವಾಹಿನಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸೋಮಹಳ್ಳಿ ನಾಗರಾಜ್, ಕೃಷ್ಣಮೂರ್ತಿ, ಕಲೆ ನಟರಾಜ್ ಅವರು ಅಂಬೇಡ್ಕರ್ ಗೀತ ಗಾಯನ ನಡೆಸಿಕೊಟ್ಟರು. ಕನ್ನಡ ಅಧ್ಯಾಪಕ ಬಸವಣ್ಣ ಮೂಕಹಳ್ಳಿ ಕಾರ್ಯಕ್ರಮ ನಿರೂಪಿಸಿದರು.

ತಾಲೂಕಿನ ಶಾಗ್ಯ ಗ್ರಾಮದಲ್ಲಿ ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ



ಹನೂರು, ಜ.28– ತಾಲೂಕಿನ ಶಾಗ್ಯ ಗ್ರಾಮದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಶಾಸಕ ಆರ್. ನರೇಂದ್ರ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು, ಮುಖ್ಯಮಂತ್ರಿಗಳ ವಿಶೇಷ ಯೋಜನೆಯಡಿ 25 ಕೋಟಿ ಅನುದಾನದಲ್ಲಿ ಹನೂರು ವಿಧಾನಸಭಾ ಕ್ಷೇತ್ರಾದ್ಯಂತ ಅಭಿವೃದ್ಧಿ ಮಾಡಲಾಗುತ್ತಿದೆ. ಬಹು ದಿನಗಳಿಂದ ನೆನೆಗುದ್ದಿಗೆ ಬಿದ್ದಿದ್ದ ಬಂಡಳ್ಳಿ ತೆಳ್ಳನೂರು ರಸ್ತೆ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಮುಗಿದಿದ್ದು ಕಾಮಗಾರಿ ಪ್ರಾರಂಭವಾಗಬೇಕಿದೆ. ಈ ವಿಶೇಷ ಅನುದಾನದಲ್ಲಿ ಸಾಮಾನ್ಯ ವರ್ಗದವರ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗುತ್ತದೆ ಎಂದರು.

ಅದ್ದೂರಿ ಮೆರವಣಿಗೆ: ಶಾಗ್ಯ ಗ್ರಾಮಕ್ಕೆ ಆಗಮಿಸಿದ ಶಾಸಕ ಆರ್.ನರೇಂದ್ರ ಅವರನ್ನು ವೀರಶೈವ, ನಾಯಕ, ಆದಿ ಜಾಂಬವ ಸಮಾಜದ ಯುವ ಮುಖಂಡರುಗಳು ಅದ್ದೂರಿ ಸ್ವಾಗತ ಕೋರಿದರು. ಇದೇ ಸಂದರ್ಭದಲ್ಲಿ ಶಾಸಕ ನರೇಂದ್ರ ಶಾಗ್ಯ ಗ್ರಾಮದಲ್ಲಿರುವ ನಡೆದಾಡುವ ದೇವರು, ಕಾಯಕಯೋಗಿ, ತ್ರಿವಿಧ ದಾಸೋಹಿ ಶಿವಕುಮಾರ ಸ್ವಾಮಿಗಳ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಪಪಂ ಉಪಾಧ್ಯಕ್ಷ ಗಿರೀಶ್, ಶಾಗ್ಯ ಗ್ರಾಪಂ ಅಧ್ಯಕ್ಷೆ ಆರೋಗ್ಯಮ್ಮ, ಸದಸ್ಯರಾದ ಜಾನ್ ಪೌಲ್, ಶರತ್, ತಾಪಂ ಮಾಜಿ ಸದಸ್ಯ ಜವಾದ್ ಅಹಮದ್, ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್, ಮುಖಂಡರಾದ ಶಾಗ್ಯ ಬಸವರಾಜು, ಉದ್ದನೂರು ಸಿದ್ದರಾಜು, ಮಲ್ಲೇಶ್, ನಂಜುಂಡ ನಾಯಕ, ಸುಂದರ್, ವಿನಯ್, ಕೆಂಪರಾಜು ಸೇರಿದಂತೆ ಇನ್ನಿತರರು ಹಾಜರಿದ್ದರು.

ವ್ಯಕ್ತಿಯ ಹೊಟ್ಟೆಯಲ್ಲಿದ್ದ 5.5 ಕೆಜಿ ಗೆಡ್ಡೆ ಹೊರತೆಗೆದ ಸಿಮ್ಸ್ ವೈದ್ಯರು

ಚಾಮರಾಜನಗರ, ಜ.28– ವ್ಯಕ್ತಿಯೊಬ್ಬರ ಹೊಟ್ಟೆಯಲ್ಲಿ ಬೆಳೆದಿದ್ದ 5.5 ಕೆಜಿ ತೂಕದ ಗೆಡ್ಡೆಯನ್ನು ಚಾ.ನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಿಮ್ಸ್ ವೈದ್ಯರು ಶುಕ್ರವಾರ ಶಸ್ತ್ರಚಿಕಿತ್ಸೆಯ ಮೂಲಕ ಹೊರತೆಗೆದಿದ್ದಾರೆ.

ಸಿಮ್ಸ್ ಬೋಧನಾ ಆಸ್ಪತ್ರೆಯಲ್ಲಿ ಇಷ್ಟು ಭಾರದ ದುರ್ಮಾಂಸವನ್ನು ರೋಗಿಯೊಬ್ಬರ ದೇಹದಿಂದ ತೆಗೆ ದಿರುವುದು ಚಾಮರಾಜನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಇದೇ ಮೊದಲು.

ಚಾಮರಾಜನಗರ ಮೆಡಿಕಲ್ ಕಾಲೇಜು ಆಸ್ಪತ್ರೆಯ ಜನರಲ್ ಸರ್ಜರಿ ವಿಭಾಗದ ಮುಖ್ಯಸ್ಥ, ಪ್ರಾಧ್ಯಾಪಕ ಡಾ.ಕಿರಣ್ ನೇತೃತ್ವದ ತಂಡ ಸತತ ಮೂರು ಗಂಟೆಗಳ ಕಾಲ ಶಸ್ತ್ರ ಚಿಕಿತ್ಸೆ ನಡೆಸಿ ಗಡ್ಡೆಯನ್ನು ತೆಗೆದಿದ್ದಾರೆ.

50 ವರ್ಷದ ಪುರುಷರೊಬ್ಬರ ಹೊಟ್ಟೆಯಲ್ಲಿ ಗಡ್ಡೆ ಪತ್ತೆಯಾಗಿತ್ತು. ಅವರು ಕೆಲವು ಆಸ್ಪತ್ರೆಗಳಿಗೆ ಭೇಟಿ ನೀಡಿ ವೈದ್ಯರ ಅಭಿಪ್ರಾಯ ಪಡೆದಿದ್ದರು. ನಂತರ ಸಿಮ್ಸ್ ಆಸ್ಪತ್ರೆಗೆ ಬಂದಿದ್ದರು. ಅದು ಕ್ಯಾನ್ಸರ್ ಗಡ್ಡೆಯಾ ಅಥವಾ ಸಾಮಾನ್ಯ ಗಡ್ಡೆಯಾ ಎಂಬುದು ಸ್ಪಷ್ಟವಾಗಿಲ್ಲ. ಡಾ.ಕಿರಣ್, ಡಾ.ಚಂದ್ರಶೇಖರಯ್ಯ, ಡಾ.ಶಶಿಧರ್ ಹಾಗೂ ಸ್ನಾತಕೋತ್ತರ ಕೋರ್ಸ್ ವಿದ್ಯಾರ್ಥಿಯೊಬ್ಬರಿದ್ದ ತಂಡ ಮೂರು ಗಂಟೆಗಳ ಕಾಲ ಶಸ್ತ್ರಕ್ರಿಯೆ ನಡೆಸಿ ಹೊರ ತೆಗೆದಿದ್ದಾರೆ. ಗಡ್ಡೆಯನ್ನು ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾಗಿದೆ' ಎಂದು ಜಿಲ್ಲಾ ಸರ್ಜನ್ ಡಾ.ಕೃಷ್ಣಪ್ರಸಾದ್ ತಿಳಿಸಿದರು. 'ಎರಡೂವರೆ ತಿಂಗಳ ಹಿಂದೆ ಆ ರೋಗಿಯ ಹೊಟ್ಟೆಯಲ್ಲಿ ಗಡ್ಡೆ ಇರಲಿಲ್ಲ. ಎರಡೂವರೆ ತಿಂಗಳಲ್ಲಿ ಇದು ಬೆಳೆದಿದೆ. ಹೊಟ್ಟೆ ಊದಿಕೊಳ್ಳುವ ಸಮಸ್ಯೆ ಅವರನ್ನು ಬಾಧಿಸಿತ್ತು. ಅವರ ಜಠರ ಸೇರಿದಂತೆ ಇತರ ಅಂಗಗಳಿಗೆ ಯಾವುದೇ ತೊಂದರೆಯಾಗಿಲ್ಲ' ಎಂದು ಅವರು ಮಾಹಿತಿ ನೀಡಿದರು.

ಜ.31, ನಗರದಲ್ಲಿ ಜನಪರ ಉತ್ಸವ

ಚಾಮರಾಜನಗರ, ಜ.27– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜನಪರ ಉತ್ಸವ ಕಾರ್ಯಕ್ರಮವನ್ನು ಜ.31ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಶ್ರೀ ವಿಜಯನಾರಾಯಣಸ್ವಾಮಿ ದೇವಸ್ಥಾನದಲ್ಲಿ ವೈಭವದ ರಥೋತ್ಸವ

ಗುಂಡ್ಲುಪೇಟೆ, ಜ.28– ರಥಸಪ್ತಮಿಯ ಅಂಗವಾಗಿ ಪಟ್ಟಣದ ಪುರಾಣ ಪ್ರಸಿದ್ಧ ಶ್ರೀ ವಿಜಯ ನಾರಾಯಣಸ್ವಾಮಿ ದೇವಾಲಯದಲ್ಲಿ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು. ಮುಜರಾಯಿ ಅಧಿಕಾರಿ ಹಾಗೂ ತಹಶೀಲ್ದಾರ್ ಸಿ.ಜಿ.ರವಿಶಂಕರ್ ರಥಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ರಥೋತ್ಸವಕ್ಕೆ ಚಾಲನೆ ನೀಡಿದರು.

ನಂತರ ವಿಜಯನಾರಾಯಣಸ್ವಾಮಿಯ ಉತ್ಸವ ಮೂರ್ತಿಯನ್ನು ಹೊತ್ತಿದ್ದ ತಳಿರು ತೋರಣ ಮತ್ತು ಬಣ್ಣ ಬಣ್ಣದ ಹೂವುಗಳಿಂದ ಅಲಂಕಾರಗೊಂಡಿದ್ದ ರಥವನ್ನು ಭಕ್ತರು ದೇವಾಲಯದ ಸುತ್ತಲೂ ಪ್ರದಕ್ಷಿಣೆ ಹಾಕಿಸಿ ಸ್ವಸ್ಥಾನವನ್ನು ತಲುಪಿಸಿದರು.

ಶಾಸಕರಿಂದ ದೇವರ ದರ್ಶನ: ಶಾಸಕ ಸಿ.ಎಸ್. ನಿರಂಜನಕುಮಾರ್ ದೇವಾಲಯಕ್ಕೆ ಭೇಟಿ ನೀಡಿ ವಿಜಯನಾರಾಯಣಸ್ವಾಮಿ ದರ್ಶನ ಮಾಡಿ ವಿಶೇಷ ಪೂಜೆ ಸಲ್ಲಿಸಿದರು.

ಹರ್ಷೋದ್ಗಾರ: ರಥದ ಮೇಲೆ ವಿಜಯ ನಾರಾಯಣಸ್ವಾಮಿಯ ಉತ್ಸವಮೂರ್ತಿಯನ್ನು ಇಡುತ್ತಿದ್ದಂತೆಯೇ ನೆರೆದಿದ್ದ ಸಹಸ್ರಾರು ಭಕ್ತರು ಗೋವಿಂದ ಗೋವಿಂದ ನಾಮಸ್ಮರಣೆಯೊಂದಿಗೆ ಹರ್ಷೋದ್ಗಾರ ಮಾಡಿ ರಥಕ್ಕೆ ಹೂವು ಮತ್ತು ಬಾಳೆ ಹಣ್ಣನ್ನು ಎಸೆದು ಪುನೀತರಾದರು. ನಂತರ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನಪಡೆದರು.



ಗುಂಡ್ಲುಪೇಟೆಯಲ್ಲಿ ನಡೆದ ವಿಜಯನಾರಾಯಣಸ್ವಾಮಿಯ ದಿವ್ಯ ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಹೂವು ಮತ್ತು ಬಾಳೆಹಣ್ಣು ಎಸೆದು ಪುನೀತರಾದರು.

ಕಾವೇರಿ ನೀರಿಗಾಗಿ 16ನೇ ವಾರ್ಡ್‌ನ ನಿವಾಸಿಗಳ ಪ್ರತಿಭಟನೆ



ಚಾಮರಾಜನಗರ, 28– ನಗರದ 16ನೇ ವಾರ್ಡ್‌ನ ರೈಲ್ವೆ ಬಡಾವಣೆಯ ನಾಯಕರ ಬೀದಿಗೆ ಕಾವೇರಿ ಕುಡಿಯುವ ನೀರು ಸರಬರಾಜು ಮಾಡುವಂತೆ ಒತ್ತಾಯಿಸಿ ಬೀದಿಯ ನಿವಾಸಿಗಳು ಖಾಲಿಕೊಡ ಹಿಡಿದು ದಿಢೀರ್ ಪ್ರತಿಭಟನೆ ನಡೆಸಿದರು.

ನಗರದ ರೈಲ್ವೆ ಬಡಾವಣೆಯ ನಾಯಕರ ಬೀದಿಯಲ್ಲಿ ಜಮಾಯಿಸಿದ ನಿವಾಸಿಗಳು ಖಾಲಿಕೊಡ ಹಿಡಿದು ನಗರಸಭೆ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು.

ಬೀದಿಯ ನಿವಾಸಿ ಬುಲೆಟ್ ಚಂದ್ರ ಮಾತನಾಡಿ, ಕಳೆದ 10–12 ವರ್ಷಗಳಿಂದ ರೈಲ್ವೆ ಬಡಾವಣೆಯ ನಾಯಕ ಬೀದಿಯಲ್ಲಿ 30ಕ್ಕೂ ಹೆಚ್ಚು ಮನೆಗಳಿಗೆ ಕಾವೇರಿ ಕುಡಿಯುವ ನೀರು ಬರುತ್ತಿಲ್ಲ ನಗರಸಭೆಗೆ ನೀರಿನ ಕಂದಾಯವನ್ನು ಕಟ್ಟಲಾಗಿದೆ ಕಾವೇರಿ ಕುಡಿವ ನೀರು ಕೊಡಿಸುವಂತೆ ನಗರಸಭಾ ಪೌರಾಯುಕ್ತರು, ಜಿಲ್ಲಾಧಿಕಾರಿಗಳಿಗೆ ಅನೇಕ ಬಾರಿ ಮನವಿ ಸಲ್ಲಿಸಲಾಗಿದೆ, ಆದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

ಕಳೆದ ಒಂದು ತಿಂಗಳಲ್ಲಿ ನೆಪಮಾತ್ರಕ್ಕಾಗಿ ಕಾವೇರಿ ಕುಡಿಯುವ ನೀರಿನ ಪೈಪ್ಲೈನ್ ಅಳವಡಿಸಲಾಗಿದೆ ಅದು ಕೂಡ ಅವೈಜ್ಞಾನಿಕವಾಗಿದ್ದು, ಕಳಪೆ ಕಾಮಗಾರಿಯಾಗಿದೆ. ನೀರು ಮಾತ್ರ ಬಿಟ್ಟಿಲ್ಲ. ಬೀದಿಯಲ್ಲಿರುವ ಬೋರ್ ನೀರು ಕುಡಿಯಲಾಗುತ್ತಿದೆ ಇತ್ತೀಚಿಗೆ ಅಪಾರ ಮಳೆ, ಪ್ರವಾಹದಿಂದ ಬೋರ್ ನೀರು ಕಲುಷಿತವಾಗಿದ್ದು, ಅದನ್ನು ಕುಡಿದರೆ ಗಂಟಲು ಕೆರೆತ, ಮೈ, ಕೈ ನೋಯುತ್ತದೆ, ಜ್ವರ ಬರುತ್ತದೆ. ಆರೋಗ್ಯ ಹಾಳು ಮಾಡುತ್ತಿದೆ. ಇದರಿಂದ ಕುಡಿವ ನೀರಿಗೆ ತುಂಬಾ ತೊಂದರೆಯಾಗಿದೆ. ಕೂಡಲೇ ಬೀದಿಗೆ ಕಾವೇರಿ ಜೀವಜಲ ಪೂರೈಕೆ ಮಾಡ ಬೇಕು ಇಲ್ಲದಿದ್ದರೆ ನಗರಸಭಾ ಕಚೇರಿಗೆ ನಿವಾಸಿಗಳೊಂದಿಗೆ ಮುತ್ತಿಗೆ ಹಾಕಿ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ನಿವೃತ್ತ ಪೊಲೀಸ್ ವೆಂಕಟೇಶ್, ಸಿದ್ದರಾಜು, ರಾಜಣ್ಣ ಕಾಳಶೆಟ್ಟಿ ಚಿನ್ನಸ್ವಾಮಿ, ಕಾಳ ನಾಯಕ, ಮಹದೇವನಾಯಕ, ಸೂರಿ, ಕುಮಾರ್, ಗೌರಮ್ಮ, ರಾಜಮ್ಮ ರೇಖಾ, ಇತರರು ಭಾಗಹಿಸಿದ್ದರು.

ಮಹದೇವಪ್ರಸಾದ್ ನಿಧನ




ಕೊಳ್ಳೇಗಾಲ, ಜ.28– ಕೊಳ್ಳೇಗಾಲ ನಗರದ ಬಸವೇಶ್ವರ ಮಿಲ್ ಮಾಲೀಕರಾದ ಮಹದೇವಪ್ರಸಾದ್ (63) ಅವರು ಇಂದಿಲ್ಲಿ ನಿಧನರಾಗಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಶನಿವಾರ ಮಧ್ಯಾಹ್ನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಅಂತ್ಯಕ್ರಿಯೆಯು ಹಂಪಾಪುರದ ರುದ್ರಭೂಮಿಯಲ್ಲಿ ವೀರಶೈವ ಸಂಪ್ರದಾಯದಂತೆ ಭಾನುವಾರ ಬೆಳಗ್ಗೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಪತ್ನಿ ಮಾಲಾ, ಮಕ್ಕಳಾದ ರಾಜೇಂದ್ರ, ಮಹೇಂದ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ವೀರಶೈವ ಮಹಾಸಭೆ ತಾಲೂಕು ಅಧ್ಯಕ್ಷ ಮಹದೇವಪ್ರಸಾದ್ ಸೇರಿದಂತೆ ಅನೇಕ ಗಣ್ಯರು ಮೃತರಿಗೆ ಅಂತಿಮ ನಮನ ಸಲ್ಲಿಸಿದ್ದಾರೆ.

ಮೈಸೂರು ಮಿತ್ರ ಭಾನುವಾರ 29 ಜನವರಿ 2023

ಹೆಲ್ಮೆಟ್‌ನಲ್ಲಿ ಅಡಗಿದ್ದ ನಾಗರಾಜ




ಮೈಸೂರು, ಜ.28– ಬಿಸಿಲ ಬೇಗೆಯಿಂದ ಪಾರಾಗಲು ಹೆಲ್ಮೆಟ್ ಒಳಗೆ ಅಡಗಿದ್ದ ನಾಗರ ಹಾವನ್ನು ಉರಗ ತಜ್ಞ ಸ್ನೇಕ್ ಶ್ಯಾಂ ಶನಿವಾರ ಸಂರಕ್ಷಿಸಿದ್ದಾರೆ. ಮೈಸೂರು ರಾಮಕೃಷ್ಣನಗರದ ಐ ಬ್ಲಾಕ್‌ನ ನಿವಾಸಿ ಅಶ್ವಿನ್ ಎಂಬುವರು ಹೆಲ್ಮೆಟ್ ಅನ್ನು ಮನೆ ಹೊರಗೆ ಇರಿಸಿದ್ದಾರೆ. ಈ ವೇಳೆ ಸುಮಾರು 3 ಅಡಿ ಉದ್ದದ ನಾಗರ ಹಾವು ಬಿಸಿಲ ಬೇಗೆಯಿಂದ ಪಾರಾಗಲು ಹೆಲ್ಮೆಟ್ ಒಳಗೆ ಅಡಗಿದೆ. ಅದೃಷ್ಟಾವಶಾತ್ ಇದನ್ನು ಗಮನಿಸಿದ ಅಶ್ವಿನ್ ತಕ್ಷಣ ಉರಗ ತಜ್ಞ ಸ್ನೇಕ್ ಶ್ಯಾಂಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಮಿಸಿದ ಶ್ಯಾಂ, ಅದಕ್ಕೆ ಯಾವುದೇ ಸಮಸ್ಯೆಯಾಗದಂತೆ ಸುರಕ್ಷಿತವಾಗಿ ಸಂರಕ್ಷಿಸಿದ್ದಾರೆ.

ಮೈಸೂರು ಪಾಲಿಕೆಯಿಂದ ಕಲಾವಿದರ ಪ್ರೋತ್ಸಾಹ ಧನ 25 ಸಾವಿರಕ್ಕೆ ಹೆಚ್ಚಳ

ಮೇಯರ್ ಶಿವಕುಮಾರ್ ಘೋಷಣೆ



ಮೈಸೂರು, ಜ.28(ಎಂಕೆ)– ಮೈಸೂರು ನಗರಪಾಲಿಕೆಯಿಂದ ಕಲಾವಿದರಿಗಾಗಿ ನೀಡುವ 10 ಸಾವಿರ ರೂ. ಪ್ರೋತ್ಸಾಹ ಧನವನ್ನು 25 ಸಾವಿರಕ್ಕೆ ಹೆಚ್ಚಿಸಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದರು. ಕಲಾಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ರಂಗಾನಂದ ಕಲಾ ಸಂಘದ ವತಿಯಿಂದ ಏರ್ಪಡಿಸಿದ್ದ 'ಕುಮಾರರಾಮ ಐತಿಹಾಸಿಕ ನಾಟಕ ಪ್ರದರ್ಶನ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಂಗಾನಂದ ಕಲಾ ಸಂಘವು ಹಲವಾರು ವರ್ಷಗಳಿಂದ ಐತಿಹಾಸಿಕ ನಾಟಕ ಪ್ರದರ್ಶನಗಳನ್ನು ನೀಡುತ್ತಾ ಬಂದಿದೆ. ನಾಟಕ ಪ್ರದರ್ಶನದ ಮೂಲಕ ಇತಿಹಾಸ ತಿಳಿಸುವ ಮಹತ್ವದ ಕಾರ್ಯ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಪ್ರತಿಯೊಬ್ಬರು ಇತಿಹಾಸ ತಿಳಿಯಲೇಬೇಕು. ಓದಿಯೇ ಇತಿಹಾಸ ತಿಳಿಯಬೇಕು ಎಂಬುದಿಲ್ಲ. ಬದಲಿಗೆ ಇಂತಹ ಐತಿಹಾಸಿಕ ನಾಟಕಗಳನ್ನು ನೋಡುವ ಮೂಲಕವೂ ಇತಿಹಾಸ ತಿಳಿದುಕೊಳ್ಳಬಹುದು. ಕಲೆಯ ಮೇಲಿನ ಅಭಿಮಾನದಿಂದ ಮೈಸೂರನ್ನು ಕಲೆಗಳ ನಾಡು ಎಂತಲೂ ಕರೆಯಲಾಗುತ್ತದೆ ಎಂದರು.

ನಗರಪಾಲಿಕೆಯ ಹಣಕಾಸು ಸ್ಥಾಯಿ ಸಮಿತಿ ನಾನಿದ್ದಾಗ ಕಲಾವಿದರಿಗೆ 10 ಸಾವಿರ ರೂ. ಪ್ರೋತ್ಸಾಹ ದನ ನೀಡುವುದನ್ನು ಆರಂಭಿಸಲಾಗಿತ್ತು. ಕಲಾವಿದರು ಪ್ರೋತ್ಸಾಹ ದನ ಹೆಚ್ಚಿಸುವಂತೆ ಮನವಿ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಸದ್ಯದಲ್ಲಿಯೇ ಕಲಾವಿದರಿಗೆ ನೀಡುವ ಪ್ರೋತ್ಸಾಹ ಧನವನ್ನು 25 ಸಾವಿರಕ್ಕೆ ಹೆಚ್ಚಿಸಲಾಗುವುದು ಎಂದು ಹೇಳಿದರು. ಬಳಿಕ ರಂಗಾನಂದ ಕಲಾ ಸಂಘದ ರಂಗಸ್ವಾಮಿ ಅವರ ನೇತೃತ್ವದಲ್ಲಿ 25ನೇ 'ಕುಮಾರರಾಮ ಐತಿಹಾಸಿಕ ನಾಟಕ'ದ ಪ್ರದರ್ಶನವಾಯಿತು. ಇದೇ ವೇಳೆ ನಿವೃತ್ತ ದೈಹಿಕ ಶಿಕ್ಷಕ ಜಿವೇಂದ್ರ ಕುಮಾರ್, ಕಲಾವಿದ ನಾಗೇಂದ್ರಕುಮಾರ್ ಹಾಗೂ ಹಿರಿಯ ಕ್ರೀಡಾಪಟು ಯೋಗೇಂದ್ರ ಅವರನ್ನು ಸನ್ಮಾನಿಸಲಾಯಿತು. ಹಿರಿಯ ಪತಕರ್ತ ಅಂಶಿ ಪ್ರಸನ್ನಕುಮಾರ್, ಮಹಾರಾಜ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಎನ್.ಉದಯ್‌ಶಂಕರ್ ಮತ್ತಿತರರು ಉಪಸ್ಥಿತರಿದ್ದರು.

ಮಧ್ಯಪ್ರದೇಶ–ರಾಜಸ್ಥಾನದಲ್ಲಿ 3 ಯುದ್ಧ ವಿಮಾನ ಪತನ

ಬೆಂಕಿ ಹೊತ್ತಿ ಉರಿದು ಕೆಳಗೆ ಬಿದ್ದ ವಿಮಾನ, ಓರ್ವ ಪೈಲೆಟ್ ಸಾವು



ಭರತ್‌ಪುರ, ಮೊರೆನಾ, ಜ.28– ಒಂದೇ ದಿನದಲ್ಲಿ ವಾಯುಪಡೆಯ 3 ಯುದ್ಧ ವಿಮಾನಗಳು ಅಪಘಾತಕ್ಕೀಡಾಗಿ ಪತನಗೊಂಡಿವೆ ಮಧ್ಯಪ್ರದೇಶದಲ್ಲಿ ಎರಡು ಮತ್ತು ರಾಜಸ್ಥಾನದಲ್ಲಿ ಒಂದು ಯುದ್ಧ ವಿಮಾನ ಪತನಗೊಂಡಿದೆ ಎಂದು ತಿಳಿದುಬಂದಿದೆ.



ಮಧ್ಯಪ್ರದೇಶದ ಮೊರೇನಾದ ಬಳಿ ಸುಖೋಯ್ – 30 ಹಾಗೂ ಮಿರಾಜ್ 2000 ಯುದ್ಧ ವಿಮಾನಗಳು ಪತನವಾಗಿದೆ. ಇವು ಮಧ್ಯಪ್ರದೇಶದ ಗ್ವಾಲಿಯರ್ ಏರ್‌ಬೇಸ್ ನಿಂದ ಹೊರಟಿದ್ದ ಯುದ್ಧ ವಿಮಾನಗಳು ಪತನಗೊಂಡಿವೆ ಎಂದು ತಿಳಿದುಬಂದಿದೆ; ಆದರೆ, ಈ ಅವಘಡಕ್ಕೆ ಕಾರಣ ಈವರೆಗೆ ತಿಳಿದುಬಂದಿಲ್ಲ. ಸ್ಥಳದಲ್ಲಿ ಶೋಧ ಹಾಗೂ ರಕ್ಷಣಾ ಕಾರ್ಯ ಮುಂದುವರಿದಿದೆ ಎಂದು ರಕ್ಷಣಾ ಮೂಲಗಳು ಮಾಹಿತಿ ನೀಡಿವೆ. ಈ ನಡುವೆ ರಾಜಸ್ಥಾನದ ಭಾರತ್‌ಪುರದ ಸೇವರ್ ಪೊಲೀಸ್ ಠಾಣೆ ವ್ಯಾಪ್ತಿಯ ನಾಗ್ಲಾ ವೀಸಾದಲ್ಲಿ ಫೈಟರ್ ಜೆಟ್ ಪತನಗೊಂಡಿದೆ. ಹಳ್ಳಿಯ ಸಮೀಪವಿರುವ ಬಂಜರು ಭೂಮಿಯಲ್ಲಿ ಫೈಟರ್ ಜೆಟ್ ಪತನಗೊಂಡಿದ್ದು, ಅಪಘಾತಕ್ಕೀಡಾದ ಬೆನ್ನಲ್ಲೇ ಅದು ಸ್ಫೋಟಗೊಂಡು ಬೆಂಕಿ ಆವರಿಸಿಕೊಂಡಿದೆ ಎಂದು ತಿಳಿದುಬಂದಿದೆ.

ಒಂದನೇ ಪುಟದಿಂದ

ಸಾಬೀತಿಗೆ ಹಾಲಿ ಕಾಯ್ದೆಗೆ ತಿದ್ದುಪಡಿ

ಈ ವಿಜ್ಞಾನ ಕಲಿಕೆಗಾಗಿಯೇ ವಿಶ್ವವಿದ್ಯಾಲಯವನ್ನು ಅಡ್ವಾಣಿಯವರೇ ಆರಂಭಿಸಿದ್ದರು. ಅದರಿಂದ ಹೊರ ಬಂದಿರುವ ವಿದ್ಯಾರ್ಥಿಗಳು ಸಾಕ್ಷ್ಯಗಳನ್ನು ಪತ್ತೆ ಹಚ್ಚುವುದು ಮತ್ತು ಶಿಕ್ಷೆ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಕರ್ನಾಟಕದಲ್ಲೂ ಇಂತಹ ವಿಶ್ವವಿದ್ಯಾಲಯ ಆರಂಭಗೊಳ್ಳುತ್ತಿರುವುದರಿಂದ ದೇಶದ ವಿಧಿ ವಿಜ್ಞಾನ ಕ್ಷೇತ್ರಕ್ಕೆ ಅಗತ್ಯವಿರುವ 8 ರಿಂದ 10 ಸಾವಿರ ತಜ್ಞರು ಸಿಗಲಿದ್ದಾರೆ ಎಂದು ತಿಳಿಸಿದರು.

ಜಗತ್ತಿನ ಇತರ ರಾಷ್ಟ್ರಗಳಿಗೆ ಸರಿಸಮನಾಗಿ ನಿಲ್ಲಬೇಕಾದರೆ ದೇಶದ ವಿಧಿವಿಜ್ಞಾನ ಕ್ಷೇತ್ರ ಬಲಿಷ್ಠಗೊಳಿಸಬೇಕು. ಅದಕ್ಕೆ ಅಗತ್ಯವಿರುವ ತಜ್ಞರನ್ನು ರೂಪಿಸಬೇಕಾಗಿದೆ ಎಂದರು. 12ನೇ ತರಗತಿಯ ನಂತರ ಈ ತಂತ್ರಜ್ಞಾನದ ಕಲಿಕೆಗೆ ಅವಕಾಶವಿದೆ. ಪದವಿ ಪಡೆದ ನಂತರ ಶೇಕಡ 100ರಷ್ಟು ಉದ್ಯೋಗ ಖಚಿತ ಎಂದರು.

ಅಪರಾಧಿಗಳು ತಂತ್ರಜ್ಞಾನ ಬಳಸುತ್ತಿದ್ದಾರೆ: ಇದೇ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಧುನಿಕ ತಂತ್ರಜ್ಞಾನ ಹೆಚ್ಚಾದಂತೆ ಅಪರಾಧಿಗಳು ಸಹ ತಂತ್ರಜ್ಞಾನ ಬಳಸುತ್ತಿದ್ದಾರೆ. 10 ವರ್ಷದ ಹಿಂದೆ ಸೈಬರ್ ಕ್ರೈಂ ಬಗ್ಗೆ ಕೇಳಿರಲಿಲ್ಲ. ಈಗ ಅದರ ಬಗ್ಗೆಯೇ ಕಾನೂನು ಸಹ ಬಂದಿದೆ. ಹೊಸ ರೀತಿಯ ಅಪರಾಧಗಳಿಗೆ ಕಡಿವಾಣ ಹಾಕಬೇಕಾದರೆ ನಮ್ಮ ತಂತ್ರಜ್ಞಾನ ಮುಂದಿರಬೇಕು ಎಂದರು. ಹೊಸ ರೀತಿಯ ಅಪರಾಧಗಳಾದ ಸೈಬರ್ ಕ್ರೈಮ್, ಡಿಜಿಟಲ್ ಕ್ರೈಮ್, ನಾರ್ಕೋಟಿಕ್ಸ್‌ಗಳನ್ನು ನಿಯಂತ್ರಿಸುವ ಅಗತ್ಯವಿದೆ. ಕ್ರೈಮ್ ಲೀಡ್ಸ್ ದಿ ಲಾ ಅಂತ ಮಾತಿತ್ತು. ಈಗ ಕಾನೂನು ಮತ್ತು ತಂತ್ರಜ್ಞಾನ ಅಪರಾಧಗಳನ್ನು ಪತ್ತೆ ಮಾಡಬೇಕಿದೆ. ಇದಕ್ಕಾಗಿ ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯ ಸ್ಥಾಪನೆ ಮುಖ್ಯವಾಗಿದೆ. ಹಿಂದೆಲ್ಲಾ ಎಫ್‌ಎಸ್‌ಎಲ್‌ನಿಂದ ವರದಿಗಳು ಬರಲು ವರ್ಷಗಳು ಆಗುತ್ತಿದ್ದವು. ಈ ಸಮಯದಲ್ಲಿ ಅಪರಾಧಿಗಳು ತಲೆಮರೆಸಿಕೊಳ್ಳುತ್ತಿದ್ದರು. ಇದಕ್ಕಾಗಿ ನಾನು ಗೃಹ ಸಚಿವನಾಗಿದ್ದಾಗ 2 ಪ್ರಾದೇಶಿಕ ಎಫ್‌ಎಸ್‌ಎಲ್ ಕೇಂದ್ರಗಳನ್ನು ಕೊಟ್ಟಿದ್ದೇವೆ. ಜತೆಗೆ ಬೆಂಗಳೂರಿನ ಎಫ್‌ಎಸ್‌ಎಲ್ ಪ್ರಯೋಗಾಲಯವನ್ನು 30 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸಿದ್ದೆವು. ಇಡೀ ದೇಶದಲ್ಲಿ ಕರ್ನಾಟಕ ಪೊಲೀಸರು ಅತ್ಯಾಧುನಿಕ ಎಫ್‌ಎಸ್‌ಎಲ್ ಲ್ಯಾಬ್ ಪಡೆದುಕೊಂಡಿದ್ದಾರೆ ಎಂದು ಸಿಎಂ ಬೊಮ್ಮಾಯಿ ಹೇಳಿದರು.

ವಿದೇಶದಲ್ಲಿರುವಂತೆ ಭಾರತದಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ 180ಕ್ಕೂ ಹೆಚ್ಚು ಸ್ಪೆಷಲ್ ಆಫೀಸರ್ ಆನ್ ಕ್ರೈಂ ಸೀನ್ ನೇಮಕ ಮಾಡಿಕೊಳ್ಳಲಾಗಿದೆ. ಜತೆಗೆ 52 ಎಫ್‌ಎಸ್‌ಎಲ್ ವಿಜ್ಞಾನಿಗಳಿಗೆ ತರಬೇತಿ ಕೊಟ್ಟು ನೇಮಕ ಮಾಡಿಕೊಳ್ಳಲಾಗಿದೆ. ಅದೆಲ್ಲಕ್ಕೂ ಕಿರೀಟಪ್ರಾಯವಾಗಿರುವಂತೆ ಇಂದು ಎಫ್‌ಎಸ್‌ಎಲ್ ವಿವಿ ಕರ್ನಾಟಕಕ್ಕೆ ಬಂದಿದೆ. ಅಮಿತ್ ಶಾ ಅವರಿಗೆ ಕರ್ನಾಟಕದ ಮೇಲಿನ ಪ್ರೀತಿಗೆ ರಾಷ್ಟ್ರೀಯ ವಿಧಿ ವಿಜ್ಞಾನ ವಿವಿ ರಾಜ್ಯಕ್ಕೆ ಬಂದರೆ, ಧಾರವಾಡದಲ್ಲಿ ನೆಲೆಗೊಳ್ಳಲು ಪ್ರಹ್ಲಾದ್ ಜೋಶಿ ಅವರ ಶ್ರಮ ಮಹತ್ವದ್ದಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ವಿವಿ ಕರ್ನಾಟಕಕ್ಕೆ ಬಂದಿದ್ದರೂ ಇದರ ಸೇವೆ ಎಲ್ಲಾ ರಾಜ್ಯಗಳಿಗೂ ಸಿಗಲಿದೆ. ಇದರಿಂದ ಉತ್ತರ ಕರ್ನಾಟಕ ಭಾಗದ ಜನರಿಗೆ ಉದ್ಯೋಗ ಸಿಗಲು ಅಮಿತ್ ಶಾ ಕಾರಣವಾಗಿದ್ದಾರೆ. ಇದಕ್ಕೆ ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ರಥಸಪ್ತಮಿ ಹಿನ್ನೆಲೆ: ಸಾವಿರಾರು ಯೋಗಪಟುಗಳಿಂದ ಸೂರ್ಯ ನಮಸ್ಕಾರ

ಮೈಸೂರು,ಜ.28(ಎಂಟಿವೈ)– ರಥಸಪ್ತಮಿಯ ಅಂಗವಾಗಿ ಮೈಸೂರು ಅರಮನೆಯ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಶನಿವಾರ ಬೆಳಿಗ್ಗೆ ಮೈಸೂರು ಯೋಗ ಒಕ್ಕೂಟ ಆಯೋಜಿಸಿದ್ದ ಸಾಮೂಹಿಕ 108 ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ಸಾವಿರಾರು ಯೋಗಪಟುಗಳು ಸೂರ್ಯ ನಮಸ್ಕಾರ ಮಾಡುವ ಮೂಲಕ ಗಮನ ಸೆಳೆದರು.

ಮೈಸೂರು ಯೋಗ ಒಕ್ಕೂಟದ 22ನೇ ವಾರ್ಷಿಕೋತ್ಸವ ಹಾಗೂ ರಥಸಪ್ತಮಿಯ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ವಿವಿಧ ಯೋಗ ಶಾಲೆಗಳ ನೂರಾರು ಯೋಗಪಟುಗಳು ಮುಂಜಾನೆ 5.30ಕ್ಕೆ ಅರಮನೆ ಮುಂಭಾಗ ಮ್ಯಾಟ್ ಹಾಸಿಕೊಂಡು ಕೊರೆಯುವ ಚಳಿಯಲ್ಲೇ ಸೂರ್ಯ ನಮಸ್ಕಾರ ಆರಂಭಿಸಿದರು.

ಕಾರ್ಯಕ್ರಮಕ್ಕೆ ಮೇಯರ್ ಶಿವಕುಮಾರ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮೈಸೂರು ಯೋಗ ಒಕ್ಕೂಟವು 108 ಸೂರ್ಯ ನಮಸ್ಕಾರ ಆಯೋಜಿಸಿರುವುದು ಶ್ಲಾಘನೀಯ. ಸೂರ್ಯ ದೇವ ಜಗತ್ತಿಗೆ ಶಕ್ತಿಯನ್ನು ನೀಡುತ್ತಾನೆ. ರಥಸಪ್ತಮಿ ದಿನದಿಂದ ಪಥ ಬದಲಿಸಿ ಅತ್ಯಂತ ಪ್ರಖರವಾಗಿ ಬೆಳಗುತ್ತಾನೆ. ಇಂತಹ ಸಂದರ್ಭದಲ್ಲಿ ಸೂರ್ಯನಿಗೆ ನಮಿಸುವ ಮೂಲಕ ಭಕ್ತಿಯನ್ನು ಪ್ರದರ್ಶಿಸಿದ್ದಾರೆ. ಇದೇ ವೇಳೆ ಎಲ್ಲರೂ ಯೋಗ ಮಾಡುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು. ಪ್ರತಿದಿನ ಯೋಗಾಭ್ಯಾಸ ಮಾಡುವುದರೊಂದಿಗೆ ಮಾನವ ಸಂಪನ್ಮೂಲ ಉತ್ತಮವಾಗಿರಬೇಕು. ದೇಶ ಸದೃಢ, ಸಮೃದ್ಧವಾಗಿರಬೇಕೆಂದರೆ ಆರೋಗ್ಯ ಮುಖ್ಯ. ಯೋಗವು ಜೀವನದ ಒಂದು ಅಂಗವಾಗಿ ಮಾರ್ಪಟ್ಟಿದೆ. ಅನೇಕ ರೋಗ–ರುಜಿನಗಳನ್ನು ಯೋಗದಿಂದಲೇ ಹೋಗಲಾಡಿಸಬಹುದು ಎಂದು ಅಭಿಪ್ರಾಯಪಟ್ಟರು.



ಮೈಸೂರು ಅರಮನೆಯ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಲ್ಲಿ ಶನಿವಾರ ನಡೆದ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ಸಾವಿರಾರು ಯೋಗಪಟುಗಳು ಪಾಲ್ಗೊಂಡಿದ್ದರು.

ಮೈಸೂರು ಯೋಗ ಒಕ್ಕೂಟದ ಗೌರವಾಧ್ಯಕ್ಷ ಡಾ.ಎ.ಎಸ್.ಚಂದ್ರಶೇಖರ್ ಮಾತನಾಡಿ, ಜಗತ್ತಿಗೆ ಬೆಳಕು ಕೊಡುವ ಸೂರ್ಯ ಇಲ್ಲದೆ ಯಾವುದೇ ಚಟುವಟಿಕೆ ನಡೆಯದು. ಮಳೆ ಬರಿಸುವುದು ಸೇರಿದಂತೆ ಹಲವು ಚಟುವಟಿಕೆಗಳಲ್ಲಿ ಸೂರ್ಯನ ಕರ್ತವ್ಯ ಹೆಚ್ಚು ಭೂಮಿ ಮೇಲಿರುವ ಪ್ರತಿಯೊಂದು ಜೀವಕೋಶಕ್ಕೂ ಸೂರ್ಯನ ಅಗತ್ಯತೆ ಇದೆ ಇಂದಿನಿಂದ ಸೂರ್ಯ ದಿಕ್ಕನ್ನು ಬದಲಾಯಿಸುತ್ತಾನೆ. ಅಲ್ಲದೆ, ಎಲ್ಲಾ ಜೀವ ಕೋಶಕ್ಕೆ ಚೈತನ್ಯ ತರುತ್ತಾನೆ. 100ಕ್ಕೂ ಹೆಚ್ಚು ಯೋಗ ಸಂಸ್ಥೆಗಳು ಸೇರಿ ಇಂದು ಸೂರ್ಯ ನಮಸ್ಕಾರ ಆಯೋಜಿಸಲಾಗಿದೆ ಸಂಪ್ರದಾಯದಂತೆ ಸೂರ್ಯನಾರಾಯಣ ಹೋಮ ನಡೆಸಲಾಗಿದೆ. ಒಂದೂವರೆ ಗಂಟೆ ನಡೆದ ಹೋಮದಲ್ಲಿ ಸಕಲ ಜೀವರಾಶಿಗಳಿಗೆ ಒಳಿತಾಗಲಿ ಎಂದು ವಿಶೇಷವಾಗಿ ಪ್ರಾರ್ಥಿಸಲಾಗಿದೆ ಎಂದರು.

ಎರಡು ತಾಸು ನಡೆದ ಪ್ರದರ್ಶನ: 108 ಸೂರ್ಯ ನಮಸ್ಕಾರ ಕಾರ್ಯಕ್ರಮ ಎರಡೂವರೆ ಗಂಟೆ ನಡೆಯಿತು. ಶಾಲಾ ವಿದ್ಯಾರ್ಥಿಗಳಿಂದ ಹಿರಿಯ ನಾಗರಿಕರೂ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಈ ಸಂದರ್ಭದಲ್ಲಿ ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಟಿ.ಜಲೇಂದ್ರ ಕುಮಾರ್, ಕಾರ್ಯಾಧ್ಯಕ್ಷರಾದ ಡಾ.ಬಿ.ಪಿ.ಮೂರ್ತಿ, ಶಾಂತರಾಮ, ಉಪಾಧ್ಯಕ್ಷರಾದ ಎಂ.ಎಸ್.ರಮೇಶ್, ಎಂ.ಎಸ್.ಶಿವಪ್ರಕಾಶ್, ಕಾರ್ಯದರ್ಶಿ ಕೆ.ಜಿ.ದೇವರಾಜು, ಯೋಗ ಶಿಕ್ಷಕಿ ಆಶಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಥಸಪ್ತಮಿ ಅಂಗವಾಗಿ ಅರಮನೆ ಅಂಗಳದಲ್ಲಿ 'ಉತ್ಸವ ಮೂರ್ತಿ'ಗಳ ಉತ್ಸವ

- ವರ್ಷಕ್ಕೊಮ್ಮೆ ವಿವಿಧ ದೇವಾಲಯಗಳ ಉತ್ಸವ ಮೂರ್ತಿಗೆ ಒಂದೆಡೆ ಪೂಜೆ
- ಬೆಳಗ್ಗೆ 7 ರಿಂದ ಮಧ್ಯಾಹ್ನ 12 ಗಂಟೆವರೆಗೂ ಭಾರೀ ಸಂಖ್ಯೆಯ ಭಕ್ತರಿಂದ ದರ್ಶನ



ಮೈಸೂರು,ಜ.28(ಎಂಟಿವೈ)– ರಥಸಪ್ತಮಿ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಆವರಣದಲ್ಲಿ ವಿವಿಧ ದೇವಾಲಯಗಳ ಉತ್ಸವ ಮೂರ್ತಿಗಳ ಉತ್ಸವ ಶ್ರದ್ಧಾಭಕ್ತಿಯಿಂದ ಜರುಗಿತು.

ಪ್ರತಿವರ್ಷದಂತೆ ರಥಸಪ್ತಮಿ ದಿನದ ಇಂದು ಅರಮನೆ ಆವರಣದ ದೇವಾಲಯಗಳ ಉತ್ಸವ ಮೂರ್ತಿಗಳನ್ನು ಅರಮನೆ ಮುಂಭಾಗದ ಪ್ರಾಂಗಣಕ್ಕೆ ತಂದು ಪೂಜಿಸಲಾಯಿತು. ಬೆಳಗ್ಗೆ ಎಲ್ಲಾ ದೇವಾಲಯಗಳಲ್ಲೂ ಪ್ರಾಕಾರೋತ್ಸವ ನಡೆಸಿ, ಏಕಕಾಲಕ್ಕೆ ಉತ್ಸವ ಮೂರ್ತಿ ಗಳನ್ನು ಆಯಾ ದೇವಾಲಯಗಳಿಂದ ಅರಮನೆ ಮುಂಭಾಗಕ್ಕೆ ಚಿಕ್ಕ ಟ್ರ್ಯಾಲಿಯಲ್ಲಿ ತಂದಿರಿಸಲಾಯಿತು. ಉತ್ತರಾಭಿಮುಖವಾಗಿ ಎಲ್ಲಾ ಉತ್ಸವಮೂರ್ತಿಗಳನ್ನು ಸಾಲಾಗಿ ಪ್ರತಿಷ್ಠಾಪಿಸಿ ಪೂಜಿಸಲಾಯಿತು. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಉತ್ಸವ ಮೂರ್ತಿಗಳ ದರ್ಶನ ಪಡೆದು, ಪ್ರಸಾದ ಸ್ವೀಕರಿಸಿದರು. ಬಳಿಕ ತಂಡೋಪತಂಡವಾಗಿ ಆಗಮಿಸಿದ್ದ ಭಕ್ತರು ದರ್ಶನ ಪಡೆದರು.

ರಥಸಪ್ತಮಿ ದಿನ ಬೆಳಗ್ಗೆ 7ರಿಂದ ಮಧ್ಯಾಹ್ನ 11.45ರವರೆಗೆ ಅರಮನೆಯ ಎಲ್ಲಾ ದ್ವಾರಗಳಲ್ಲೂ ಭಕ್ತರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಮಧ್ಯಾಹ್ನ 12 ಗಂಟೆ ನಂತರ ಉತ್ಸವ ಮೂರ್ತಿಯನ್ನು ಆಯಾ ದೇವಾಲಯಕ್ಕೆ ಕೊಂಡೊಯ್ಯಲಾಯಿತು. ಅರಮನೆ ಆವರಣದಲ್ಲಿರುವ ತ್ರಿನೇಶ್ವರಸ್ವಾಮಿ, ಖಿಲ್ಲೆ ವೆಂಕಟೇಶ್ವರ, ಗಾಯತ್ರಿದೇವಿ, ವರಹಸ್ವಾಮಿ, ಪ್ರಸನ್ನ ಕೃಷ್ಣ, ಲಕ್ಷ್ಮಿ ವೆಂಕಟರಮಣ ಸ್ವಾಮಿ, ಭುವನೇಶ್ವರಿ ದೇವಾಲಯದಿಂದ ಉತ್ಸವ ಮೂರ್ತಿಗಳನ್ನು ವಿಶೇಷವಾಗಿ ಪೂಜಿಸಲಾಯಿತು. ಒಂದೇ ಸ್ಥಳದಲ್ಲಿ ಎಲ್ಲಾ ದೇವಾಲಯಗಳ ಉತ್ಸವ ಮೂರ್ತಿಗಳ ದರ್ಶನಕ್ಕೆ ಭಕ್ತರು ಮುಗಿಬಿದ್ದರು. ರಥಸಪ್ತಮಿ ಹಿನ್ನೆಲೆಯಲ್ಲಿ ಅರಮನೆ ಮುಂಭಾಗ ಸೂರ್ಯನ ಆಕಾರದಲ್ಲಿ 50 ಅಡಿ ಸುತ್ತಳತೆಯಲ್ಲಿ ಬೃಹತ್ ರಂಗೋಲಿ ಬಿಡಿಸಲಾಗಿತ್ತು. ಉತ್ಸವ ಮೂರ್ತಿಗಳ ದರ್ಶನಕ್ಕೆ ಬಂದವರಿಗೆ ಪ್ರಸಾದ ವಿನಿಯೋಗಿಸಲಾಯಿತು.

ನೈಪುಣ್ಯ ಸ್ಕೂಲ್ ಕಾರ್ಪೊರೇಟ್ ಕಚೇರಿ ಉದ್ಘಾಟನೆ



ಮೈಸೂರು, ಜ.28– ಮುಂದಿನ ಶೈಕ್ಷಣಿಕ ವರ್ಷದಿಂದ ಕನಕದಾಸನಗರದಲ್ಲಿ ಕಾರ್ಯಾರಂಭ ಮಾಡಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೈನ್ಸ್‌ನ ಕಾರ್ಪೊರೇಟ್ ಕಚೇರಿಯನ್ನು ಮೇಯರ್ ಶಿವಕುಮಾರ್ ಇಂದು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮೇಯರ್ ಶಿವಕುಮಾರ್, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗುತ್ತಿರುವ ಈ ಸಂದರ್ಭದಲ್ಲಿ ಗುಣಮಟ್ಟದ ಹಾಗೂ ಕೌಶಲ್ಯ ಶಿಕ್ಷಣ ನಮ್ಮ ವಿದ್ಯಾರ್ಥಿಗಳಿಗೆ ಲಭಿಸಬೇಕಿದೆ. ಅದರಲ್ಲೂ ಪ್ರಾಥಮಿಕ ಶಿಕ್ಷಣದಲ್ಲಿ ಬದಲಾವಣೆಯ ಪರ್ವ ಆರಂಭವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟುವಲ್ಲಿ ತಮ್ಮದೇ ಆದ ಸಾಮರ್ಥ್ಯ ರೂಪಿಸಿ ಮೈಸೂರಿನ ಶಿಕ್ಷಣ ಕ್ಷೇತ್ರಕ್ಕೆ ಆರ್.ರಘು ಅವರು ಮಹತ್ವದ ಕೊಡುಗೆ ಕೊಟ್ಟಿದ್ದಾರೆ.

ಕಳೆದ ಶೈಕ್ಷಣಿಕ ವರ್ಷದಲ್ಲಿ ರವೀಂದ್ರನಾಥ ಟ್ಯಾಗೂರ್ ನಗರದಲ್ಲಿ ನೈಪುಣ್ಯ ಕ್ಯಾಂಪಸ್ ಆರಂಭಿಸಿ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ರಘು ಅವರ ನೇತೃತ್ವದ ಸಂಸ್ಥೆ ಇದೀಗ ಅಭಿವೃದ್ಧಿ ಹೊಂದಿರುವ ಕನಕದಾಸನಗರದಲ್ಲಿ (ದಟ್ಟಗಳ್ಳಿ) ಮತ್ತೊಂದು ಕ್ಯಾಂಪಸ್‌ಅನ್ನು ಹೊಸದಾಗಿ ನಿರ್ಮಿಸಲು ಹೊರಟಿರುವುದು ಶ್ಲಾಘನೀಯ ಕಾರ್ಯ ವಾಗಿದೆ ಈ ಭಾಗದ ಜನತೆಗೆ ಈ ಸಂಸ್ಥೆ ಜಾಗತಿಕ ಮಟ್ಟದಲ್ಲಿ ಪೈಪೋಟಿಯನ್ನು ಎದುರಿಸುವ, ವಿದ್ಯಾರ್ಥಿಗಳನ್ನು ರೂಪಿಸುವ ಶಿಕ್ಷಣ ಸಂಸ್ಥೆಯಾಗಿ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೈನ್ಸ್ ಹೊರಹೊಮ್ಮಲಿ ಎಂದು ಹಾರೈಸಿದರು. ಇದೇ ಸಂದರ್ಭದಲ್ಲಿ ನೈಪುಣ್ಯ ಸಂಸ್ಥೆಯ ಮುಖ್ಯಸ್ಥರು ಹಾಗೂ ಮೈಸೂರು ಪೇಂಟ್ ಅಂಡ್ ವಾರ್ನಿಶ್‌ನ ಅಧ್ಯಕ್ಷ ಆರ್.ರಘು (ಕೌಟಿಲ್ಯ) ಆರ್ಥಿಕ ಸಲಹೆಗಾರ ನಾರಾಯಣ ಗೌಡ, ಪಿಆರ್‌ಓ ಕ್ಯಾರೋಲಿನ್ ಅಲ್ವಿನ್, ಮ್ಯಾನೇಜಿಂಗ್ ಟ್ರಸ್ಟಿ ಕೌಟಿಲ್ಯ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಅದ್ಭುತ ಲೆಕ್ಕಾಚಾರದ ಚಿರಂತನ್ ಗೌಡಗೆ ಇಂದು ಹ್ಯೂಮನ್ ಕ್ಯಾಲ್ಕುಲೇಟರ್ ಪ್ರಶಸ್ತಿ ಪ್ರದಾನ

ಅಗಾಧ ಬುದ್ಧಿಶಕ್ತಿಯಿಂದ 9ನೇ ವಯಸ್ಸಿಗೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿ ಮನ್ನಣೆ

ಮೈಸೂರು, ಜ.28(ಎಸ್‌ಬಿಡಿ)– ಶಿಕ್ಷಣಕ್ಕೆ ಪೂರಕವಾದ ಪಠ್ಯೇತರ ಚಟುವಟಿಕೆ 'ಅಬಾಕಸ್'ನಲ್ಲಿ ಮೈಸೂರು ಕುಂಬಾರಕೊಪ್ಪಲಿನ 9 ವರ್ಷದ ಬಾಲಕ ಅತ್ಯುತ್ತಮ ಸಾಧನೆಯೊಂದಿಗೆ ಹಲವು ಪ್ರಶಸ್ತಿಗಳಿಗೆ ಭಾಜನವಾಗಿದ್ದಾನೆ.

ಮನೋಜ್‌ಕುಮಾರ್ ಹಾಗೂ ಪುಣ್ಯ ದಂಪತಿ ಪುತ್ರ ಚಿರಂತನ್ ಗೌಡ.ಎಂ 'ಅಬಾಕಸ್'ನಲ್ಲಿ ಪರಿಣಿತನಾಗಿದ್ದು, 'ಅತೀ ವೇಗದ ಮಾನವ ಕ್ಯಾಲ್ಕುಲೇಟರ್' ಪ್ರಶಂಸೆಗೆ ಪಾತ್ರನಾಗಿದ್ದಾನೆ. ಕುಂಬಾರ ಕೊಪ್ಪಲಿನಲ್ಲಿರುವ ತಾತ ನಿಂಗೇಗೌಡ, ಅಜ್ಜಿ ಪ್ರೇಮಕುಮಾರಿ ಅವರೊಂದಿಗಿರುವ ಈತ, ವಿಜಯನಗರದ ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್‌ನ 4ನೇ ತರಗತಿ ವಿದ್ಯಾರ್ಥಿ.

2019ರ ಡಿಸೆಂಬರ್‌ನಿಂದ 'ಮ್ಯಾಥ್ ಜ್ಯೂನಿಯರ್ ಇನ್‌ಸ್ಟಿಟ್ಯೂಟ್'ನಲ್ಲಿ 'ಅಬಾಕಸ್' ಕಲಿತಿದ್ದಾರೆ. ಶಿಕ್ಷಕಿ ಕಾವೇರಿ ಮಾರ್ಗದರ್ಶನದಲ್ಲಿ ಗಣಿತದ ಕಠಿಣಾತಿಕಠಿಣ ಸಮಸ್ಯೆಗಳನ್ನು ಕ್ಷಣಾರ್ಧದಲ್ಲಿ ಬಿಡಿಸಿ, ನಿಖರ ಉತ್ತರ ನೀಡುವಷ್ಟು ಪ್ರಖರವಾಗಿದ್ದಾನೆ. ಕಳೆದ 2022ರಲ್ಲಿ ನಡೆಸಲಾಗಿದ್ದ 'ಮ್ಯಾಥ್ ಜ್ಯೂನಿಯರ್ ಅರ್ತ್‌ಮ್ಯಾಟಿಕ್(ಅಂಕಗಣಿತ) ಚಾಂಪಿಯನ್‌ಶಿಪ್'ನಲ್ಲಿ 'ನ್ಯಾಷನಲ್ ಚಾಂಪಿಯನ್' ಆಗಿ ಹೊರಹೊಮ್ಮಿದ್ದು, ನಾಳೆ(ಜ.29) ಮಧ್ಯಾಹ್ನ 2ಕ್ಕೆ ಜೆ.ಕೆ.ಮೈದಾನ ಅಮೃತ ಮಹೋತ್ಸವ ಭವನದಲ್ಲಿ ನಡೆಯಲಿರುವ ನಕ್ಷತ್ರ ವಾರ್ಷಿಕ ಪ್ರಶಸ್ತಿ ಸಮಾರಂಭದಲ್ಲಿ ಈತನಿಗೆ 'ಹ್ಯೂಮನ್ ಕ್ಯಾಲ್ಕುಲೇಟರ್' ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಸಾಲು ಸಾಲು ಪ್ರಶಸ್ತಿ: ಕಳೆದ ವರ್ಷ ಅರಿಸ್ಟೋ ಕಿಡ್ಸ್ ಇಂಟರ್‌ನ್ಯಾಷನಲ್ ಟ್ಯಾಲೆಂಟ್ ಹಂಟ್ ಸ್ಪರ್ಧೆಯಲ್ಲಿ ಅಂತರರಾಷ್ಟ್ರೀಯ 4 ನೇ ಶ್ರೇಣಿ, 2021ರ ಮ್ಯಾಥ್ ಜೂನಿಯರ್ ಮಾನಸಿಕ ಅಂಕಗಣಿತ ಸ್ಪರ್ಧೆಯಲ್ಲಿ ರಾಷ್ಟ್ರೀಯ ರಾಷ್ಟ್ರೀಯ ಚಾಂಪಿಯನ್, ಮ್ಯಾಥ್ ಮುಕ್ತ ರಾಷ್ಟ್ರೀಯ ಸ್ಪರ್ಧೆಯಲ್ಲಿ ಮೊದಲ ಬಹುಮಾನ, ಮ್ಯಾಥ್ ಮಾನಸಿಕ ಅಂಕಗಣಿತ ಮತ್ತು ಅಬಾಕಸ್ ಆಲ್ ಇಂಡಿಯಾ ಪ್ರತಿಭಾನ್ವೇಷಣೆಯಲ್ಲಿ ಪ್ರಥಮ, ಮ್ಯಾಥ್ ಜೂನಿಯರ್ ಕೋಡಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಟಾಪರ್, ಮ್ಯಾಥ್ ಜೂನಿಯರ್ ಮಾನಸಿಕ ಅಂಕಗಣಿತದ ಚಾಂಪಿಯನ್‌ಶಿಪ್‌ನಲ್ಲಿ ಚಾಂಪಿಯನ್, ಮ್ಯಾಥ್ಸ್ 2ನೇ ಅಂತಾರಾಷ್ಟ್ರೀಯ ಅಬಾಕಸ್ ಚಾಂಪಿಯನ್ ಆಫ್ ಚಾಂಪಿಯನ್ಸ್ ಸ್ಪರ್ಧೆಯಲ್ಲಿ ಚಾಂಪಿಯನ್ ಆಫ್ ಚಾಂಪಿಯನ್ಸ್, ಅವಾಸ್–2020 ರಾಷ್ಟ್ರೀಯ ಮಟ್ಟದ ಅಬಾಕಸ್ ಚಾಂಪಿಯನ್‌ಶಿಪ್ ನಲ್ಲಿ ರಾಷ್ಟ್ರೀಯ ಚಾಂಪಿಯನ್, ಎಂಜೆ ಮ್ಯಾಕ್–2020 ಅಂಕಗಣಿತ ಮುಕ್ತ ಚಾಂಪಿಯನ್‌ಶಿಪ್‌ನಲ್ಲಿ ರಾಷ್ಟ್ರೀಯ ಚಾಂಪಿಯನ್, 2019ರ 9ನೇ ಮುಕ್ತ ರಾಷ್ಟ್ರೀಯ ಅಬಾಕಸ್ ಸ್ಪರ್ಧೆಯಲ್ಲಿ ಪ್ರಥಮ, ಮ್ಯಾಥ್‌ಜೂನಿಯರ್ ಮಾನಸಿಕ ಅಂಕಗಣಿತ ಸ್ಪರ್ಧೆಯಲ್ಲಿ ವರ್ಗ ಎ–ಚಾಂಪಿಯನ್ ಸೇರಿದಂತೆ ಹಲವು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಚಿರಂತನ್ ಅತ್ಯುತ್ತಮ ಪ್ರದರ್ಶನದೊಂದಿಗೆ ಪ್ರಶಸ್ತಿ ಪಡೆದಿದ್ದಾನೆ.



ವೇಗವಾಗಿ ಕಲಿತ: ಸಂಬಂಧಿಕರೊಬ್ಬರು ಹೇಳಿದ್ದರಿಂದ ನಾವೂ ಕೂಡ ವಿಜಯನಗರದಲ್ಲಿರುವ ಮ್ಯಾಥ್‌ಜ್ಯೂನಿಯರ್ ಸಂಸ್ಥೆಗೆ ಸೇರಿಸಿದೆವು. ವಿವಿಧ ಹಂತಗಳಲ್ಲಿ ಅಬಾಕಸ್ ಕಲಿಸಲಾಗುತ್ತದೆ. ಕೂಡಿಸುವುದು, ಕಳೆಯುವುದು, ಗುಣಿಸುವುದು, ಭಾಗಿಸುವುದು, ಶೇಕಡವಾರು ಕಂಡು ಹಿಡಿಯುವುದು ಹೀಗೆ ಎಲ್ಲವನ್ನೂ ಕ್ಷಣಮಾತ್ರದಲ್ಲಿ ಬಿಡಿಸುತ್ತಾನೆ. ಪ್ಲಸ್ ಹಾಗೂ ಮೈನಸ್ ಸೇರಿಸಿ 2 ಅಂಕಿಯ 80 ಬಾರಿ, 3 ಅಂಕಿಯ 35 ಬಾರಿ ಹೇಳಿದರೂ ಥಟ್ಟನೆ ಉತ್ತರಿಸುತ್ತಾನೆ. ಸಂಖ್ಯೆಗಳನ್ನು ನೋಡಿ ಕ್ಯಾಲ್ಕುಲೇಷನ್ ಮಾಡುವುದಷ್ಟೇ ಅಲ್ಲ, ಕೇಳಿಸಿಕೊಂಡು ಅದನ್ನು ಮನಸ್ಸಿನಲ್ಲೇ ಬಿಡಿಸಿ ಉತ್ತರಿಸುತ್ತಾನೆ. ಕೊರೊನಾ ಸಂದರ್ಭದಲ್ಲಿ ಆನ್‌ಲೈನ್ ಮೂಲಕ ನಡೆದ ಹಲವು ಸ್ಪರ್ಧೆಗಳಲ್ಲಿ ಚಾಂಪಿಯನ್ ಆಗಿದ್ದಾನೆ ಎಂದು ಚಿರಂತನ್ ಕುಟುಂಬದವರು ಸಂತಸ ವ್ಯಕ್ತಪಡಿಸಿದರು.

ಅಬಾಕಸ್ ಎಂದರೇನು?: 'ಅಬಾಕಸ್' ಎನ್ನುವುದು ಆಸಕ್ತಿದಾಯಕ ಮತ್ತು ಸರಳ ಲೆಕ್ಕಾಚಾರದ ಸಾಧನ. ಇದನ್ನು ಪ್ರಾಚೀನ ಭಾರತದ ತಂತ್ರವೆಂದು ಹೇಳಲಾಗುತ್ತದೆ. ಅಂಕಗಣಿತವನ್ನು ಸುಲಭವಾಗಿ ಕಲಿಕೆ ಜೊತೆಗೆ ಮಕ್ಕಳ ಕಲಿಕೆಯ ವೇಗ, ಆತ್ಮವಿಶ್ವಾಸ, ಸ್ಮರಣೆ ಮತ್ತು ಏಕಾಗ್ರತೆಯ ಮಟ್ಟ ವೃದ್ಧಿಸುತ್ತದೆ. ಮಣಿಗಳನ್ನು ಸರಿಸಲು ಎರಡೂ ಕೈಗಳ ಬೆರಳುಗಳನ್ನು ಬಳಸುವುದರಿಂದ ಸಂಪೂರ್ಣ ಮೆದುಳಿನ ಬೆಳವಣಿಗೆಗೆ ಸಹಕಾರಿಯಾಗಿದೆ. ಕೈ ಬೆರಳುಗಳ ಸಹಾಯದಿಂದ ಲೆಕ್ಕ ಮಾಡುವ ಫಿಂಗರ್ ಥಿಯರಿ, ಮಣಿ ಚೌಕ(ಅಬಾಕಸ್) ಉಪಕರಣದ ಸಹಾಯದಿಂದ ಕಲಿಯುವ ಅಬಾಕಸ್ ಹಾಗೂ ಮೆಂಟಲ್ ಥಿಯರಿ ಮೆಥಡ್ ನಲ್ಲಿ ಕರಗತ ಮಾಡಿಕೊಳ್ಳಬಹುದು. ಅಬಾಕಸ್ ಉಪಕರಣವನ್ನು ಮನೋಗೋಚರಿಸಿಕೊಂಡು ವೇಗವಾಗಿ ಲೆಕ್ಕಾಚಾರ ಮಾಡುವ ಮೆಂಟಲ್ ಥಿಯರಿ ಸಾಧನೆ ಕಠಿಣ ಪರಿಶ್ರಮ ಬೇಕು. ಇದನ್ನು ಸಿದ್ಧಿಸಿಕೊಂಡರೆ ಮೂರ್ನಾಲ್ಕು ಡಿಜಿಟ್‌ಗಳನ್ನು ಎಷ್ಟು ಬಾರಿ ಹೇಳಿ ಮಧ್ಯೆ ಮಧ್ಯೆ ಕೂಡು, ಕಳೆ, ಗುಣಿಸು, ಭಾಗಿಸು ಹೀಗೆ ಏನೇ ಹೇಳಿದರೂ ಥಟ್ಟನೆ ಹೇಳಬಹುದು. ಇದನ್ನು ಚಿರಂತನ್ ಗೌಡ ಎಂ. ಸಾಧಿಸಿಕೊಂಡಿದ್ದಾನೆ.

ನಿಮ್ಮ ಬರವಣಿಗೆಗೆ ಪ್ರಶಸ್ತಿ ಬಂದಿದೆಯೇ ಹೊರತು ಮೋದಿಯವರಿಂದಲ್ಲ...!

ಸಾಹಿತಿ ಎಸ್.ಎಲ್.ಭೈರಪ್ಪ ಹೇಳಿಕೆಗೆ ಎಂಎಲ್‌ಸಿ ವಿಶ್ವನಾಥ್ ಆಕ್ಷೇಪ

ಮೈಸೂರು,ಜ.28(ಪಿಎಂ)– 'ನರೇಂದ್ರ ಮೋದಿಯವರು ಪ್ರಧಾನಿ ಆದ್ದರಿಂದಲೇ ನನಗೆ ಪದ್ಮಭೂಷಣ ಪ್ರಶಸ್ತಿ ಬಂದಿದೆ. ಇಲ್ಲವಾಗಿದ್ದರೆ ಬರುತ್ತಿರಲಿಲ್ಲ' ಎಂಬ ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್, ಅವರ ಈ ಹೇಳಿಕೆ ಸದರಿ ಪ್ರಶಸ್ತಿಯ ಘನತೆಯನ್ನೇ ಕಡಿಮೆ ಮಾಡಲಿದೆ ಎಂದು ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾದ ಮುತ್ಸದ್ಧಿ ರಾಜಕಾರಣಿ ಎಸ್.ಎಂ.ಕೃಷ್ಣ, ಪದ್ಮಭೂಷಣ ಪ್ರಶಸ್ತಿಗೆ ಭಾಜನರಾದ ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪ, ಇನ್ಫೋಸಿಸ್‌ನ ಸುಧಾಮೂರ್ತಿ ಅವರು ಸೇರಿದಂತೆ ಎಲ್ಲಾ ಪದ್ಮಶ್ರೀ ಪುರಸ್ಕೃತರಿಗೆ ಅಭಿನಂದಿಸಿ ಅವರು ಮಾತನಾಡಿದರು.

ನಮ್ಮ ಮೈಸೂರಿನವರೇ ಆದ ಎಸ್.ಎಲ್.ಭೈರಪ್ಪ ಅವರಿಗೂ ಅಭಿನಂದಿಸುತ್ತೇನೆ. ಅವರು 92 ವರ್ಷದ ಹಿರಿಯರು. ದೊಡ್ಡ ದೊಡ್ಡ ಪುಸ್ತಕ ಬರೆದಿದ್ದಾರೆ. ನಾನೂ ಅವರ ಅಭಿಮಾನಿ. ಆದರೆ ಅವರು ತಮಗೆ ಮೋದಿಯವರಿಂದ ಪ್ರಶಸ್ತಿ ಬಂತೆಂದು ಹೇಳಿದ್ದಾರೆ. ಇದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ನಿಮಗೆ ಜ್ಞಾನಪೀಠ ಬರುತ್ತೆ: ನಿಮ್ಮ ಬರವಣಿಗೆಗೆ ಪ್ರಶಸ್ತಿ ಬಂದಿದೆಯೇ ಹೊರತು ಮೋದಿಯವರಿಂದಲ್ಲ. ನೀವು ಬರೆಯಲು ಶುರು ಮಾಡಿದಾಗ ಮೋದಿಯವರಿಗೆ ಎಷ್ಟು ವರ್ಷವೋ ಗೊತ್ತಿಲ್ಲ. ಮೋದಿಯವರು ನನಗೆ ಪ್ರಶಸ್ತಿ ಕೊಟ್ಟರು, ಅವರು ಇನ್ನು ಇಷ್ಟು ವರ್ಷಗಳು ಪ್ರಧಾನಿಯಾಗಿ ಇರಲಿ ಎಂದು ಹೇಳುವುದು ನಿಮ್ಮ ಹಾಗೂ ಪ್ರಶಸ್ತಿಯ ಘನತೆಯನ್ನೇ ಕಡಿಮೆ ಮಾಡಲಿದೆ. ಓಲೈಸುವುದು ನಿಮಗೆ ಈ ವಯಸ್ಸಿನಲ್ಲಿ ಬೇಕಿಲ್ಲ. ನಿಮಗೆ ಮುಂದಿನ ಬಾರಿ ಜ್ಞಾನಪೀಠ ಪ್ರಶಸ್ತಿ ಬಂದೇ ಬರುತ್ತದೆ. ನೀವು ಕಾಯಬೇಕಷ್ಟೇ. ಆದರೆ ಜ್ಞಾನಪೀಠ ಪ್ರಶಸ್ತಿಗಾಗಿ ಹೀಗೆ ಹೊಗಳುವುದು ಸರಿಯಲ್ಲ. ಅದೇನೇ ಇದ್ದರೂ ನೀವು ನಾಡಿನ ಹಿರಿಯ ಸಾಹಿತಿಗಳು. ನಮ್ಮ ಊರಿನವರು, ನಿಮಗೆ ಶುಭ ಕಾಮನೆಗಳು ಎಂದು ಹೇಳುವ ಮೂಲಕ ಭೈರಪ್ಪರನ್ನು ಉದ್ದೇಶಿಸಿ ನಯವಾಗಿಯೇ ಕುಟುಕಿದರು.



ಎಸ್.ಎಂ.ಕೃಷ್ಣ ಗುಣಗಾನ ಮಾಜಿ ಮುಖ್ಯಮಂತ್ರಿಗಳೂ ಆದ ಮುತ್ಸದ್ಧಿ ರಾಜಕಾರಣಿ ಎಸ್.ಎಂ.ಕೃಷ್ಣ ಅವರ ಬಗ್ಗೆ ಸುದೀರ್ಘವಾಗಿ ಗುಣಗಾನ ಮಾಡಿದ ವಿಶ್ವನಾಥ್, ಕೃಷ್ಣರ ಕೊಡುಗೆಗಳನ್ನು ವಿವರಿಸಿದರು. ಕೃಷ್ಣ ಅವರು ಸುಸಂಸ್ಕೃತ ಕುಟುಂಬದಿಂದ ಬಂದವರು. ಅವರು ಜನಪರ ಕಾಳಜಿಯಿಂದ ಮಾಡಿದ ಕೆಲಸಗಳಿಂದ ರಾಜ್ಯ ಮತ್ತು ದೇಶಕ್ಕೆ ಅನುಕೂಲವಾಗಿದೆ ಎಂದು ಹೇಳಿದರು.

ಸಿಎಂ ವಿರುದ್ಧ ಕಿಡಿನುಡಿ: ಸಮಾರಂಭವೊಂದರಲ್ಲಿ ವೇದಿಕೆಯಲ್ಲಿದ್ದ ಕಾಗಿನೆಲೆಯ ಈಶ್ವರಾನಂದಪುರಿ ಸ್ವಾಮೀಜಿ ಅವರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೈಕ್ ಕಸಿದುಕೊಂಡು ಮಾತನಾಡಿದ್ದರ ಬಗ್ಗೆ ಪ್ರಸ್ತಾಪಿಸಿ, ಆಕ್ಷೇಪ ವ್ಯಕ್ತಪಡಿಸಿದ ವಿಶ್ವನಾಥ್, ಪ್ರಬಲ ಕೋಮಿನ ಸ್ವಾಮೀಜಿ ಅವರಿಂದ ಮೈಕ್ ಕಸಿದಿದ್ದರೆ ಬಿಡುತ್ತಿದ್ದರೇ? ಒಬ್ಬ ಮಠಾಧೀಶರು ಸಮುದಾಯದ ಸಮಸ್ಯೆಗಳನ್ನು ಹೇಳಬೇಕಾದರೆ ಕೋಪಗೊಂಡು ಮುಖ್ಯಮಂತ್ರಿಗಳು ಮೈಕ್ ಕಿತ್ತುಕೊಳ್ಳುತ್ತಾರೆ ಎಂದರೆ ಇದು ಯಾವ ರೀತಿ ನಡವಳಿಕೆ ಎಂದು ಪ್ರಶ್ನಿಸಿದರು.

ಹಾಗಾಗಿ ಇವರನ್ನೆಲ್ಲಾ ನೋಡಿದರೆ ಕೃಷ್ಣ ಬಹಳ ಎತ್ತರಕ್ಕೆ ನಿಲ್ಲುತ್ತಾರೆ. ಕೃಷ್ಣ ಅವರು ತಮ್ಮ ಸ್ಥಾನದಿಂದ ದೊಡ್ಡವರಾಗಲಿಲ್ಲ ತಮ್ಮ ವ್ಯಕ್ತಿತ್ವದಿಂದ ದೊಡ್ಡವರಾದವರು. ಪ್ರಧಾನಮಂತ್ರಿ, ರಾಷ್ಟ್ರಪತಿ ಸ್ಥಾನ ಹೊರತು ಪಡಿಸಿದರೆ ಬಹುತೇಕ ಎಲ್ಲಾ ಸ್ಥಾನಗಳನ್ನು ಅವರು ಅಲಂಕರಿಸಿದ್ದಾರೆ ಹಾಗಾಗಿ ಕೃಷ್ಣ ಒಂದು ದಂತಕಥೆ ಎಂದು ಬಣ್ಣಿಸಿದರು.

ಪ್ರತಾಪ್ ಸಿಂಹರಿಗೆ ಕುಟುಕಿದ ಹಳ್ಳಿಹಕ್ಕಿ: ನಮ್ಮ ಸಂಸದ ಪ್ರತಾಪ್ ಸಿಂಹ ಅವರು ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ ಏನೋ ಹೆಸರು (ಕಾವೇರಿ ಎಕ್ಸ್‌ಪ್ರೆಸ್ ವೇ) ಇಡಬೇಕೆಂದರು. ಆದರೆ ಕೃಷ್ಣ ಅವರು ತಮ್ಮ ಅಪಾರ ಅನುಭವದ ಹಿನ್ನೆಲೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣಕ್ಕೆ ಪ್ರಧಾನಿಗಳಿಗೆ ಸೊಗಸಾಗಿ ಪತ್ರ ಬರೆದರು. 'ಮೈಸೂರು' ಇಡೀ ದೇಶದಲ್ಲಿ ಸಾಂಸ್ಕೃತಿಕ ಲೋಕ ತೆರೆದಿಟ್ಟಿದೆ. ಸಾಮರಸ್ಯ, ಅಭಿವೃದ್ಧಿಗೆ ಹೆಸರಾಗಿದೆ. ಇಂತಹ ಕೊಡುಗೆ ನೀಡಿದ ಅರಸರು ನಮಗೆ ಮಾದರಿ. ಅವರ ಹೆಸರು ನಾಮಕರಣ ಮಾಡಬೇಕೆಂದು ಪ್ರಧಾನಿಗಳಿಗೆ ಕಾಗದ ಬರೆದಿದ್ದಾರೆ. ಆ ಪತ್ರ ಸುಸಂಸ್ಕೃತದಿಂದ ಕೂಡಿದ್ದು, ನಿಜಕ್ಕೂ ನಮ್ಮಂತಹ ರಾಜಕಾರಣಿಗಳು ಸದರಿ ಪತ್ರ ಓದಬೇಕು. ನನ್ನಂತವರು, ಸಿಂಹನವಂತವರು ಅವರಿಂದ ಕಲಿಯಬೇಕು. ಅದನ್ನು ಬಿಟ್ಟು ಅವರಿಗಿಂತಲೂ ದೊಡ್ಡವರು ಎಂದರೆ ಪ್ರಯೋಜನವಿಲ್ಲ ಎಂದು ಪ್ರತಾಪ್ ಸಿಂಹ ಅವರಿಗೆ ಕುಟುಕಿದರು.

ಎಸ್.ಎಂ.ಕೃಷ್ಣ ಅವರ ಅಪಾರ ಅನುಭವವನ್ನು ಬಿಜೆಪಿ ಸರ್ಕಾರಗಳು ಉಪಯೋಗ ಮಾಡಿಕೊಳ್ಳಲಿಲ್ಲ. ಈ ಬಗ್ಗೆ ನಮಗೂ ನೋವಿದೆ. ಉಪಯೋಗ ಮಾಡಿಕೊಳ್ಳಬೇಕಿತ್ತು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಆರ್.ಸೋಮಸುಂದರ್ ಗೋಷ್ಠಿಯಲ್ಲಿದ್ದರು.


ವಾರದ ಮಿತ್ರ

ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ

29-1-2023





ಜನವರಿ 30 ಮಹಾತ್ಮ ಗಾಂಧೀಜಿ ಹುತಾತ್ಮರಾದ ದಿನ. ಈ ದಿನವನ್ನು ದೇಶ ಸರ್ವೋದಯ ದಿನವನ್ನಾಗಿ ಆಚರಿಸುತ್ತದೆ. ತನ್ನಿಮಿತ್ತ ಈ ಲೇಖನ.

ಮಹಾತ್ಮರ ಸರ್ವೋದಯ

ಬನ್ನೂರು ಕೆ.ರಾಜು ಮೊ. 9481533167

"ಬೊಗಸೆ ನೀರಿತ್ತವಗೆ ತೃಪ್ತಿಯಪ್ಪಂತುಣಿಸು
ಒಳ್ಳೆತನ ಬಯಸಿದರೆ ಭಕ್ತಿಯಿಂಬಾಗು
ಕಿರುಗಾಸನಿತ್ತವಗೆ ತಿರುಗಿ ಚಿನ್ನವ ನೀಡು
ಪ್ರಾಣವಂ ಕಾಯ್ದವಗೆ ಪ್ರಾಣದಾನವ ಮಾಡು
ಕಿರುನೆರವಿಗೂ ಹಿರಿಯ ಸೇವೆಯ ಸಲಿಸುವುದು
ಪ್ರಾಜ್ಞರಾದವರ ನಡೆಯಂತೆಯೇ ಅವರ ನುಡಿ
ಜ್ಞಾನಿಗಳು ಮಾನವರ ಭೇದಗಳನೆಣಿಸದೆಂಥೆ
ಕೇಡಿಗುಂಸಂತಸದಿ ಶುಭವೆಸಗುವರು..."

ಸುಪ್ರಸಿದ್ಧ ಗುಜರಾತಿ ಕವಿ ಶ್ಯಾಮಪಾಲ್ ಭಟ್ಟರ ಈ ಕವಿತೆ ಚಿಕ್ಕಂದಿನಲ್ಲಿ ಗಾಂಧೀಜಿಯವರ ಮೇಲೆ ಬಹಳ ಪ್ರಭಾವ ಬೀರಿತ್ತು. ಬಾಲ್ಯದಿಂದಲೇ ಗಾಂಧೀಜಿಯ ನಡೆ ಎತ್ತ ಸಾಗುತ್ತಿತ್ತೆಂಬುದಕ್ಕೆ ಮೇಲಿನ ಕವಿತೆಯೇ ಸಾಕ್ಷಿ. ಪದ್ಯದ ಪದಪದವೂ ಮಾನವೀಯತೆಯನ್ನು ಧ್ವನಿಸುತ್ತದೆ.

ವಿಶ್ವದ ನಕಾಶೆಯಲ್ಲಿ ನಮ್ಮ ಭಾರತಕ್ಕೊಂದು ಬಹುದೊಡ್ಡ ಗೌರವ ತಂದು ಕೊಟ್ಟಿರುವ, ಗಾಂಧೀಜಿ ಮಾನವಕುಲ ಕಂಡ ಮಹಾಚೇತನ. ಮಹಾಪ್ರವಾದಿ ಕೂಡ. ಮಾನವೀಯ ಗುಣದ ದಾರ್ಶನಿಕರು. ಮಾನವತಾವಾದದ ನಿರ್ಮಾಪಕರು. ಮಾರ್ಗಕಾರರೂ ಹೌದು. ಮನುಷ್ಯತ್ವದ ಪುನರುತ್ಥಾನದ ಪ್ರವರ್ತಕರಾದ ಗಾಂಧೀಜಿ ನಡೆ-ನುಡಿ, ಬದುಕು-ಬರಹ ಎಲ್ಲವೂ ಸರ್ವೋದಯವೇ. ಸರ್ವರುದ್ಧಾರವೇ ಗಾಂಧೀಜಿಯ ಗುರಿ. ಸರ್ವೋದಯ ಅವರ ಜೀವದುಸಿರು. ಸರ್ವರ ಸೇವೆ ಅವರ ಬದುಕಿನ ಗಾಯತ್ರಿಮಂತ್ರ. ತತ್ವರಹಿತ ರಾಜಕಾರಣ, ದುಡಿಮೆ ಇಲ್ಲದ ಸಂಪತ್ತು ಆತ್ಮಸಾಕ್ಷಿರಹಿತ ಭೋಗ, ಶೀಲವಿಲ್ಲದ ಶಿಕ್ಷಣ, ನೀತಿ ಹೀನ ವ್ಯಾಪಾರ, ಮಾನವೀಯತೆ ಶೂನ್ಯ ವಿಜ್ಞಾನ, ತ್ಯಾಗವಿಲ್ಲದ ಪೂಜೆ- ಇವು ಗಾಂಧೀಜಿ ಹೇಳುವ ಸಪ್ತ ಸಾಮಾಜಿಕ ಪಾತಕಗಳು. ಇವುಗಳನ್ನು ನೀಗಿಸಿಕೊಳ್ಳಬೇಕಾದುದು ಗಾಂಧೀ ದೃಷ್ಟಿಯಲ್ಲಿ ಮಹತ್ವದ ಸಂಗತಿ.

ಮನುಷ್ಯನ ನಡೆ, ನುಡಿ, ಆಚಾರ, ವಿಚಾರ, ಆದರ್ಶ ಚಾರಿತ್ರ್ಯಗಳೇ ಅವನ ಶ್ರೇಷ್ಠತೆಯ ಮಾನದಂಡವಾಗುತ್ತದೆ. ಇಂಥಾ ಮಾನವೀಯ ಉನ್ನತ ಮೌಲ್ಯಗಳನ್ನು ತಮ್ಮ ಜೀವಮಾನದಲ್ಲಿ ಪಾಲಿಸಿದ ಗಾಂಧೀಜಿ ಮಹಾತ್ಮರಾದರು. ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಲು ಅಹಿಂಸೆಯ ಅಸ್ತ್ರ ಹಿಡಿದು, ಇಡೀ ರಾಷ್ಟ್ರವನ್ನೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಪ್ರೇರೇಪಿಸಿ ಯಶಸ್ವಿಯಾದ ಬಳಿಕವೂ ಎಲ್ಲವೂ ಭಗವಂತನ ಕೃಪೆ ಎಂದು ತಮ್ಮ ಸರಳ ಬದುಕನ್ನು ಮುಂದುವರೆಸಿದ್ದ ಈ ಮಹಾನ್ ಚೇತನ ಇಂದಿಗೂ ಯುವ ಪೀಳಿಗೆಗೆ ಮಾದರಿ. ರವೀಂದ್ರನಾಥ ಠಾಗೋರ್ ಅವರು 'ಮಹಾತ್ಮ' ಎಂದು ಸಂಬೋಧಿಸುವವರೆಗೂ ಮೋಹನದಾಸ ಕರಮಚಂದ್ ಗಾಂಧೀ 'ಬಾಪು' ಎಂದೇ ಕರೆಯಲ್ಪಡುತ್ತಿದ್ದರು. ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವ ವಹಿಸಿದ್ದ ಗಾಂಧೀಜಿ ಅವರು ಇಡೀ ದೇಶವನ್ನು ತನ್ನೊಟ್ಟಿಗೆ ಕರೆದುಕೊಂಡು ಹೋದ ಅಪ್ರತಿಮ ನಾಯಕ. ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಅವರು ಮುಕ್ತವಾಗಿ ಬೆರೆಯುತ್ತಿದ್ದರು. ಎಲ್ಲರ ಬಗ್ಗೆ ಕಾಳಜಿ ವಹಿಸುತಿದ್ದರು. ಇಡೀ ದೇಶಕ್ಕೆ ಅಂತಹ ಮಾದರಿ ಇನ್ನೋರ್ವ ವ್ಯಕ್ತಿಯನ್ನು ಕಾಣುವುದು ಭಾರತದಲ್ಲಿಯೇ ಏಕೆ ಇಡೀ ವಿಶ್ವದಲ್ಲಿಯೇ ಅತೀ ಕಷ್ಟಕರ. ಇಲ್ಲವೆಂದರೂ ಸರಿಯೇ!

ರಾಮರಾಜ್ಯ ಪರಿಕಲ್ಪನೆಯ ಇಂತಹ ಆದರ್ಶ ಪುರುಷರೆನಿಸಿದ ಗಾಂಧೀಜಿ ವಿಚಾರಧಾರೆಯತ್ತ ಗಮನಹರಿಸಿದರೆ, ನಿಜಕ್ಕೂ ಅಚ್ಚರಿಯಾಗುತ್ತದೆ. ಧರ್ಮಶ್ರದ್ಧೆ ಗಾಂಧೀಜಿ ಅವರ ಪ್ರಮುಖ ಗುಣಗಳಲ್ಲೊಂದು. ಹಾಗೆಯೇ ಕ್ಷಮೆ. ನಿಮ್ಮ ಶತ್ರುಗಳನ್ನು ಕ್ಷಮಿಸಿ ಎಂದು ಹೇಳುವ ಮೂಲಕ ಕ್ಷಮಾದಾನದ ಉನ್ನತ ಗುಣ ಪ್ರತಿಯೊಬ್ಬರಿಗೂ ಸಂದೇಶವೇ ಅಯಿತು. ಗಾಂಧೀಜಿ ಅವರ ಮತ್ತೊಂದು ಗುಣವೆಂದರೆ ನಿರ್ಭೀತಿ. ಅವರ ಮಾನಸಿಕ ಧೈರ್ಯವೂ ಅಭೂತಪೂರ್ವವಾದುದು. ತಮ್ಮನ್ನು ದ್ವೇಷಿಸುವವರ ನಡುವೆಯೂ ಪ್ರೀತಿ, ವಿಶ್ವಾಸದ ಭರವಸೆ ಮೂಡಿಸಿದವರು. ಆ ಮೂಲಕ ದ್ವೇಷವನ್ನು ಸೋಲಿಸಿ ಪ್ರೀತಿಯನ್ನು ಪ್ರೀತಿಯಿಂದಲೇ ಗೆಲ್ಲಿಸಿದ್ದಾರೆ. ಮಾನವೀಯತೆಯನ್ನು ಮೆರೆಸಿದ್ದಾರೆ. ಮನುಷ್ಯತ್ವವನ್ನು ಬಿತ್ತಿದ್ದಾರೆ. ತಮ್ಮ ಸರಳತೆ, ಉನ್ನತ ವಿಚಾರಗಳನ್ನು ಬದುಕಿನಲ್ಲಿ ಅನುಸರಿಸಿದ ರೀತಿಯಿಂದ ಅವರು ಇಂದಿಗೂ, ಎಂದೆಂದಿಗೂ ಪ್ರಸ್ತುತ.

ಅಕ್ಟೋಬರ್ 2, 1869ರಲ್ಲಿ ಗುಜರಾತ್‌ನ ಪೋರಬಂದರಿನಲ್ಲಿ ಕರಮಚಂದ್ ಗಾಂಧಿ ಹಾಗೂ ಪುತಲೀಬಾಯಿ ಗಾಂಧಿ ದಂಪತಿ ಪುತ್ರನಾಗಿ ಗಾಂಧೀಜಿ ಜನಿಸಿದರು. 'ಗಾಂಧಿ' ಎಂಬುದು ಮನೆತನದ ಹೆಸರು. ಅವರ ಪೂರ್ಣ ಹೆಸರು ಮೋಹನದಾಸ ಕರಮಚಂದ್ ಗಾಂಧಿ. ಪ್ರಾಥಮಿಕ ಶಿಕ್ಷಣವನ್ನು ಪೋರಬಂದರಿನಲ್ಲಿ, ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣವನ್ನು ರಾಜಕೋಟ್ ಮತ್ತು ಭಾವನಗರದಲ್ಲಿ ಮುಗಿಸಿದರು. ಗಾಂಧೀಜಿ ತಾನು ನೋಡಿದ ಸತ್ಯ ಹರಿಶ್ಚಂದ್ರ ನಾಟಕ ಹಾಗೂ ಓದಿದ ಶ್ರವಣನ ಮಾತಾ-ಪಿತೃಭಕ್ತಿ, ತಾಯಿಯಿಂದ ಕೇಳಿ ತಿಳಿದ ಪುರಾಣ ಪುಣ್ಯ ಕಥೆಗಳಿಂದ ತುಂಬಾ ಪ್ರಭಾವಿತರಾದರು. ಅಂದಿನ ಬಾಲ್ಯವಿವಾಹ ಪದ್ಧತಿಯ ಅನ್ವಯ ಗಾಂಧೀಜಿ ಅವರಿಗೆ ಹಿರಿಯರು ಮೆಚ್ಚಿ ಕಸ್ತೂರ ಬಾ ಅವರೊಡನೆ 1883ರಲ್ಲಿ ವಿವಾಹವಾಯಿತು. ಆಗ ಅವರಿಗೆ ವಯಸ್ಸು 14. ಗಾಂಧೀಜಿ 1888ರಲ್ಲಿ ಬ್ಯಾರಿಸ್ಟರ್ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡ್‌ಗೆ ತೆರಳಿದರು. ಅಲ್ಲಿ ಪದವಿ ಪಡೆದ ಬಳಿಕ ವಕೀಲಿ ವೃತ್ತಿ ಆರಂಭಿಸಿದರು. ನಂತರ ಪ್ರಕರಣವೊಂದರ ನಿಮಿತ್ತ 1893ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು. ಆದರೆ, ಅಲ್ಲಿನ ವರ್ಣಭೇದ ನೀತಿ ಹೋರಾಟಕ್ಕೆ ಪ್ರೇರೇಪಿಸಿತು. ಅದನ್ನು ತೊಡೆದು ಹಾಕಬೇಕು ಎಂದು ಸಂಕಲ್ಪ ಮಾಡಿ, ಅಹಿಂಸಾ ಮಾರ್ಗದಲ್ಲಿ ವರ್ಣಭೇದ ನೀತಿ ವಿರುದ್ಧ ಹೋರಾಟ ಆರಂಭಿಸಿದರು. ಅದೇ ವೇಳೆಗೆ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರಗೊಂಡಿದ್ದರಿಂದ ವರ್ಣಭೇದ ನೀತಿಯ ವಿರುದ್ಧ ತಾತ್ಕಾಲಿಕವಾಗಿ ಹೋರಾಟವನ್ನು ಕೈಬಿಟ್ಟು, ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದರು. ಭಾರತಕ್ಕೆ ಬಂದ ಕೂಡಲೇ ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿ, ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿ, ಅದರ ನೇತೃತ್ವ ವಹಿಸಿಕೊಂಡು ಸತ್ಯ ಹಾಗೂ ಅಹಿಂಸಾ ಮಾರ್ಗದ ಮೂಲಕ ಬ್ರಿಟೀಷರ ವಿರುದ್ಧ ಹೋರಾಡಿದರು.

1920-22 ಅಸಹಕಾರ ಚಳವಳಿ, 1930ರಲ್ಲಿ ಉಪ್ಪಿನ ಸತ್ಯಾಗ್ರಹ, 1942ರಲ್ಲಿ 'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ' (ಕ್ವಿಟ್ ಇಂಡಿಯಾ ಚಳವಳಿ) ಎಂಬ ಹೋರಾಟ ನಡೆಸಿದರು. ಭಾರತದ ಸ್ವಾತಂತ್ರ್ಯಕ್ಕಾಗಿ ಹಲವು ಬಾರಿ ಬ್ರಿಟಿಷರಿಂದ ಬಂಧನಕ್ಕೊಳಗಾದರೂ ಜೈಲುವಾಸ ಅನುಭವಿಸಿದರೂ ಎದೆಗುಂದದೆ ಗಾಂಧೀಜಿ ಸತ್ಯ, ಅಹಿಂಸಾ ಮಾರ್ಗದಲ್ಲಿ 27 ವರ್ಷ ಅವಿಶ್ರಾಂತವಾಗಿ ನಡೆಸಿದ ಸ್ವಾತಂತ್ರ್ಯ ಚಳವಳಿಯ ಪರಿಣಾಮ ಭಾರತಕ್ಕೆ 1947 ಆಗಸ್ಟ್ 15ರ ಮಧ್ಯರಾತ್ರಿ ಸ್ವಾತಂತ್ರ್ಯ ದೊರೆಯಿತು.

ರಾಷ್ಟ್ರಪಿತರೆಂದು ಸಂಬೋಧಿಸಿದ ನೇತಾಜಿ: 'ರಾಷ್ಟ್ರಪಿತ' ಹೀಗೆ ಗಾಂಧೀಜಿ ಅವರನ್ನು ಮೊದಲ ಬಾರಿಗೆ ಕರೆದವರು ನೇತಾಜಿ ಸುಭಾಷ್‌ಚಂದ್ರ ಬೋಸರು. 1945ರಲ್ಲಿ ರಂಗೂನ್‌ನಲ್ಲಿದ್ದ ತಮ್ಮ 'ಇಂಡಿಯನ್ ನ್ಯಾಷನಲ್ ಅರ್ಮಿ'ಯ ವತಿಯಿಂದ ಬ್ರಿಟಿಷ್ ಇಂಡಿಯಾದ ಮೇಲೆ ದಾಳಿ ಮಾಡಲು ಮುಂದಾಗಿದ್ದ ಬೋಸ್, ಬಾನುಲಿ ಸಂದೇಶವೊಂದನ್ನು ಗಾಂಧಿಯವರಿಗೆ ಪ್ರಸಾರ ಮಾಡಿದರು. 'ಫಾದರ್ ಅಫ್ ಅವರ್ ನೇಷನ್' ಎಂದು ಗಾಂಧಿಯನ್ನು ಕರೆದು, ಈ ಹೋರಾಟದಲ್ಲಿ ನಿಮ್ಮ ಆಶೀರ್ವಾದ ನಮ್ಮ ಮೇಲಿರಲಿ ಎಂದು ಕೇಳಿಕೊಂಡಿದ್ದರು.

ಮಹಿಳೆಯರ ಪರ ಗಾಂಧಿ ವಾದ: ಮಹಿಳೆಯರ ಬಗ್ಗೆ ಗಾಂಧೀಜಿಗೆ ವಿಶೇಷ ಕಾಳಜಿ ಇತ್ತು. ಅವರು ಸ್ತ್ರೀ ಶೋಷಣೆಯನ್ನು ಎಂದೂ ಸಹಿಸಿದವರಲ್ಲ. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಕುರಿತಾಗಿ ಗಾಂಧೀಜಿ ಅವರ ವಿಚಾರ ಪರಿಣಾಮಕಾರಿಯಾಗಿತ್ತು. ಹೆಣ್ಣಿನ ಪರಿಶುದ್ಧತೆಯೇ ಆಕೆಯ ಅತ್ಯುತ್ತಮ ಗುರಾಣಿ. ಪುರುಷ ಎಷ್ಟೇ ಶಕ್ತನಾಗಿರಲಿ, ಅಕೆಯ ಪರಿಶುದ್ಧತೆಯ ಉಜ್ವಲ ಪ್ರಭೆಯ ಎದುರು ನಿಶ್ಶಕ್ತನಾಗುತ್ತಾನೆ, ಹಾಗೇ ಮಹಿಳೆಯೂ ಸಹ ತನ್ನನ್ನು ತಾನು ರಕ್ಷಿಸಿಕೊಳ್ಳುವಲ್ಲಿ ಧೈರ್ಯ ತೋರಬೇಕು. ಆತ್ಮರಕ್ಷಣೆ ಅವಳ ಪ್ರಥಮ ಧರ್ಮ, ಆ ಸಂದರ್ಭದಲ್ಲಿ ಆಕೆ ಹಿಂಸೆ, ಅಹಿಂಸೆ ಎಂದೆಲ್ಲಾ ಯೋಚಿಸದೆ ತನ್ನ ರಕ್ಷಣೆಗಾಗಿ, ತನ್ನ ಮನಸ್ಸಿಗೆ ತೋಚಿದ ಯಾವ ಮಾರ್ಗವನ್ನಾದರೂ ಅನುಸರಿಸಬಹುದು. ಹೆಣ್ಣು ತ್ಯಾಗದ, ನಮ್ರತೆಯ, ನಂಬಿಕೆಯ, ಜ್ಞಾನದ ಪ್ರತೀಕವೆಂದು ಗಾಂಧೀಜಿ ಬಣ್ಣಿಸಿದ್ದಾರೆ. ಆದ್ದರಿಂದಲೇ ಜೀವನ ಸಂಗ್ರಾಮದಲ್ಲಿ ಹೆಣ್ಣಿಗೆ ಮೊದಲ ಪ್ರಾಶಸ್ತ್ಯ. ರಾಮನಿಗಿಂತ ಮೊದಲು ಸೀತೆಯೆಂದೂ, ಕೃಷ್ಣನಿಗಿಂತ ಮೊದಲು ರಾಧೆಯನ್ನು ನೆನೆಯುವುದು ಸೂಕ್ತ. ಸ್ತ್ರೀ, ಪುರುಷರಷ್ಟೇ ಪ್ರಧಾನಳು. ಪುರುಷರ ಪ್ರತಿ ಕೆಲಸದಲ್ಲೂ ಪ್ರವೇಶಿಸುವ ಹಕ್ಕು ಅವಳಿಗಿದೆ ಎಂದು ಗಾಂಧೀಜಿ ಸ್ತ್ರೀಯರ ಬಗ್ಗೆ ಉನ್ನತ ಗೌರವ, ಅಭಿಪ್ರಾಯ ವ್ಯಕ್ತಪಡಿಸಿದ್ದರು. ಇನ್ನು ಭ್ರಷ್ಟಾಚಾರ, ಲಂಚಾವತಾರ ಇನ್ನಿತರ ಸಾಮಾಜಿಕ ಅನಿಷ್ಟಗಳ ಕುರಿತಾಗಿ, ಗಾಂಧೀಜಿ ಅವರ ಅಭಿಪ್ರಾಯ ಆದರ್ಶ ಸಮಾಜದ ಪರಿಕಲ್ಪನೆಯ ಭದ್ರ ಬುನಾದಿಗೆ ನಾಂದಿ ಹಾಡಿದೆ. ಅನ್ಯಾಯ ಮಾರ್ಗಗಳಿಂದ ಸಂಪಾದಿಸಿ ಧನಿಕನಾದ ಮನುಷ್ಯ ಡಕಾಯಿತರುಗಳಿಗಿಂತ ಕಡಿಮೆ ಇಲ್ಲ. ಮರ್ಯಾದೆಯ ಮುಖವಾಡದಿಂದ ತನ್ನ ಅವಶ್ಯಕತೆಗಿಂತ ಮೀರಿ ಹಣ, ಆಸ್ತಿ ಸಂಪಾದಿಸುವವನು ಸಾಮಾನ್ಯ ಕಳ್ಳನಿಗಿಂತ ಹೆಚ್ಚಿನ ಶಿಕ್ಷೆಗೆ ಅರ್ಹನು. ದೇವರು ಧರ್ಮ ಪ್ರಾರ್ಥನೆಗಳನ್ನು ಕುರಿತು ಅಪಹಾಸ್ಯ ಮಾಡುವವರಿಗೆ ಗಾಂಧೀಜಿಯವರ ಹಿತನುಡಿಯೆಂದರೆ, ನಾನೇ ಬುದ್ಧಿವಂತ, ವಿಚಾರವಂತನೆಂಬ ಹಮ್ಮಿನಿಂದ ಇನ್ನೊಬ್ಬರ ಭಾವನೆಗಳ ಜೊತೆ ಆಟವಾಡಬೇಡಿ. ಜೀವನದ ಆದಿ ಮತ್ತು ಅಂತ್ಯ ಪಾಠಗಳೇ ಪ್ರಾರ್ಥನೆ. ಪ್ರೀತಿ, ದಯೆ, ತ್ಯಾಗವೇ ಧರ್ಮ. ಪ್ರಾರ್ಥನೆಯನ್ನು ಸರಿಯಾಗಿ ತಿಳಿದು ಸಲ್ಲಿಸಿದರೆ ಅದು ಅತ್ಯಂತ ಸಮರ್ಥವಾದ ಕಾರ್ಯೋಪಕರಣವಾಗುತ್ತದೆ. ಹೀಗೆ ಗಾಂಧೀಜಿಯವರ ವಿಚಾರಧಾರೆಗಳು, ದೇಶದ ಜನರ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ವಿಷಯಗಳ ಕುರಿತು ತನ್ನದೇ ಆದ ಮಹೋನ್ನತ ಹಾಗೂ ಉಜ್ವಲ ಬೆಳಕಿನ ಉನ್ನತ ಭಾವನೆಗಳನ್ನು ಹೊಂದಿದ್ದು, ನಿಜವಾದ ಕಳಕಳಿಯ ಸಂಕೇತವಾಗಿತ್ತು. ಇಂತಹ ಉನ್ನತ ವ್ಯಕ್ತಿತ್ವ ಹೊಂದಿದ್ದುದರಿಂದಲೇ ಗಾಂಧೀಜಿಯವರು ರಾಷ್ಟ್ರಪಿತನಾಗಿ, ದೇಶ ಮಾತ್ರವಲ್ಲ ವಿಶ್ವದಾದ್ಯಂತ ಗುರುತಿಸಲ್ಪಟ್ಟಿದ್ದಾರೆ. ಅವರ ಆದರ್ಶಗಳು ಹಾಗೂ ಉನ್ನತ ವಿಚಾರಗಳು ಇಂದಿಗೂ ಪ್ರಸ್ತುತವೆನಿಸಿವೆ. ಎಂದೆಂದಿಗೂ ಮಾದರಿಯಾಗಿ ಉಳಿದಿವೆ. ಗಾಂಧೀಜಿ ಎಂದರೆ ಭಾರತದ ಹೃದಯ. ಅಷ್ಟೇ ಅಲ್ಲ ವಿಶ್ವದ ಕರುಳು. ಏಕೆಂದರೆ ಇಡೀ ವಿಶ್ವಕ್ಕೆ ಮಿಡಿದ ಮನಸ್ಸು ಮಹಾತ್ಮನದು.

ಗಾಂಧೀಜಿ ತತ್ವ ಸಿದ್ಧಾಂತಗಳು: ಮಹಾತ್ಮಗಾಂಧಿ ಅವರ ಪ್ರಮುಖ ತತ್ವ ಸಿದ್ಧಾಂತವೆಂದರೆ ಅದು ಸತ್ಯ ಮತ್ತು ಅಹಿಂಸೆ. ಗಾಂಧಿ ತಮ್ಮ ಆತ್ಮಚರಿತ್ರೆ 'ನನ್ನ ಸತ್ಯಾನ್ವೇಷಣೆ'ಯಲ್ಲಿ ಸತ್ಯ ಮತ್ತು ಅಹಿಂಸೆಗಳು, ತಲೆತಲಾಂತರದಿಂದ ಬಂದ ನೀತಿ ಬೋಧನೆಗಳಾಗಿವೆ. ಅದರಲ್ಲಿ ನಾನು ಹೊಸದಾಗಿ ಹೇಳಿರುವುದು ಏನೂ ಇಲ್ಲ ಎಂದಿದ್ದಾರೆ. ಈ ಸತ್ಯ ಮತ್ತು ಅಹಿಂಸೆಗಳನ್ನು ಗಾಂಧೀಜಿ ಕೇವಲ ಮಾತಿನಲ್ಲಿ ಹೇಳದೆ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಅವರದು ಸತ್ಯಾನ್ವೇಷಣೆಯ ಮಾರ್ಗ. "ವಿಶ್ವಾತ್ಮಕವೂ, ವಿಶ್ವವ್ಯಾಪಿಯೂ ಆದ ಸತ್ಯವನ್ನು ಸಾಕ್ಷಾತಾಗಿ ಸಂದರ್ಶಿಸಬೇಕಾದರೆ ಕ್ಷುದ್ರತಮವಾದುದನ್ನೂ ಪ್ರೀತಿಸುವುದು ಸಾಧ್ಯವಾಗಲೇ ಬೇಕು" ಎನ್ನುವುದು ಗಾಂಧೀಜಿ ನಿಲುವು.

ಓರ್ವ ಲೇಖಕನಾಗಿ ಗಾಂಧಿ: ಗಾಂಧೀಜಿ ಓರ್ವ ಉತ್ತಮ ವಾಗ್ಮಿ, ಬರಹಗಾರರಾಗಿದ್ದರು. ದಕ್ಷಿಣ ಆಫ್ರಿಕಾದಲ್ಲಿದ್ದಾಗ 'ಇಂಡಿಯನ್ ಒಪಿನಿಯನ್' ಪತ್ರಿಕೆ, ಭಾರತಕ್ಕೆ ಮರಳಿದ ನಂತರ ಗುಜರಾತಿ, ಹಿಂದಿ ಮತ್ತು ಅಂಗ್ಲ ಭಾಷೆಗಳಲ್ಲಿ 'ಹರಿಜನ್' ಪತ್ರಿಕೆ, ಅಂಗ್ಲ ಭಾಷೆಯಲ್ಲಿ 'ಯಂಗ್ ಇಂಡಿಯನ್' ಪತ್ರಿಕೆ ಮತ್ತು 'ನವ್ ಜೀವನ್' ಎಂಬ ಗುಜರಾತಿ ಮಾಸ ಪತ್ರಿಕೆಯೂ ಸೇರಿದಂತೆ ಹಲವು ವೃತ್ತ ಪತ್ರಿಕೆಗಳಿಗೆ ಸಂಪಾದಕರಾಗಿದ್ದರು. ತಮ್ಮ ಆತ್ಮಚರಿತ್ರೆಯಾದ 'ಆನ್ ಆಟೋಬಯೋಗ್ರಫಿ ಆಫ್ ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಟ್ರೂತ್' ಸೇರಿದಂತೆ, ದಕ್ಷಿಣ ಆಫ್ರಿಕಾದಲ್ಲಿನ ತಮ್ಮ ಹೋರಾಟದ ಕುರಿತಾದ 'ಸತ್ಯಾಗ್ರಹ ಇನ್ ಸೌತ್ ಆಫ್ರಿಕಾ' ಎಂಬ ಪುಸ್ತಕ, 'ಹಿಂದ್ ಸ್ವರಾಜ್ ಆರ್ ಇಂಡಿಯನ್ ಹೋಮ್ ರೂಲ್' ಎಂಬ ರಾಜಕೀಯ ಕಿರುಹೊತ್ತಿಗೆ ಅವುಗಳಲ್ಲಿ ಸೇರಿದೆ. ಅಹಿಂಸೆ, ಆರೋಗ್ಯ, ಆಹಾರ, ಉಪವಾಸ, ಕಸ್ತೂರ ಬಾ, ಕೈಗಾರಿಕಾ ಸಂಬಂಧಗಳು, ಖಿಲಾಫತ್ ಚಳವಳಿ, ಜಪಾನ್, ಜನನ ನಿಯಂತ್ರಣ, ಜಲಿಯನ್ ವಾಲಾಬಾಗ್, ಜಾತೀಯತೆ, ದೇವರು, ನೀತಿ, ಮುಷ್ಕರಗಳು, ಮೂಲ ಶಿಕ್ಷಣ, ರಾಷ್ಟ್ರಭಾಷೆ, ವೈದ್ಯ, ಶಿಕ್ಷಣ, ಸರ್ವೋದಯ, ಸತ್ಯಾಗ್ರಹ, ಸ್ವದೇಶಿ, ಸ್ತ್ರೀಯರು ಮುಂತಾದ ನಾನಾ ವಿಷಯಗಳ ಮೇಲೆ ಗಾಂಧೀಜಿ ಕೃತಿಗಳನ್ನು ಬರೆದಿದ್ದಾರೆ.

ಮಹಾತ್ಮನ ದುರಂತ ಅಂತ್ಯ: ಅದೊಂದು ಜಗತ್ತು ಎಂದೂ ಮರೆಯದ ದುರಂತ ದಿನ. 1948 ಜನವರಿ 30ರಂದು ಶುಕ್ರವಾರ ಪ್ರಾರ್ಥನಾ ಸಭೆಗೆ ಹೋಗುತ್ತಿದ್ದ ವೇಳೆ ನಾಥೂರಾಂ ವಿನಾಯಕ ಗೋಡ್ಸೆ ಎಂಬಾತ ಗಾಂಧೀಜಿ ಎದೆಗೆ ಗುಂಡು ಹಾರಿಸಿದ. ಹೇ ರಾಮ್ ಎನ್ನುತ್ತಾ ಗಾಂಧೀಜಿ ಪ್ರಾಣ ಬಿಟ್ಟರು. ಗಾಂಧೀಜಿ ಒಬ್ಬ ವ್ಯಕ್ತಿಯಾಗಿರದೆ ಒಂದು ಮಹಾನ್ ಶಕ್ತಿಯಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ತರಲು ಹಾಗೂ ರಾಮರಾಜ್ಯ ಸ್ಥಾಪಿಸಲು ತಮ್ಮ ತನು ಮನ ಧನಗಳನ್ನು ಅರ್ಪಿಸಿದರು. ಗಾಂಧೀಜಿಯ ಅಂತ್ಯಸಂಸ್ಕಾರ ದೆಹಲಿಯ ರಾಜ್‌ಘಾಟ್‌ನಲ್ಲಿ ನಡೆಯಿತು. ಸರ್ವೋದಯ ಚಿಂತನೆಯ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಹುತಾತ್ಮರಾದ ಜನವರಿ 30ರ ದಿನವನ್ನು ರಾಷ್ಟ್ರೀಯ ಸರ್ವೋದಯ ದಿನವಾಗಿ ಆಚರಿಸಲಾಗುತ್ತಿದೆ.



ವಾರಭವಿಷ್ಯ

29.1.2023 ರಿಂದ 4.02.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕುಂಭ, ಚಂದ್ರ-ವೃಷಭ, ಮಿಥುನ, ಕಟಕ, ಕುಜ-ವೃಷಭ, ಬುಧ-ಮಕರ, ಕುಂಭ, ಗುರು-ಮೀನ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಉಚ್ಚ ಚಂದ್ರನ ಫಲವಾಗಿ ವಾರದಾರಂಭವು ಆನಂದದಾಯಕವಾಗಿರುತ್ತದೆ. ಬಾಳ ಸಂಗಾತಿಯೊಂದಿಗೆ ಇದ್ದ ಮುನಿಸು ಕೊನೆಗೊಳ್ಳುವ ಲಕ್ಷಣವಿದೆ. ಹಿರಿಯರಿಂದ ಧನ ಸಹಾಯ ಒದಗಿ ನಿಮಗೆ ಅನುಕೂಲವಾಗುವುದು. ವಾರ ಮಧ್ಯಾನಂತರ ವ್ಯಾಪಾರ ವ್ಯವಹಾರಗಳಲ್ಲಿ ಸ್ವಲ್ಪ ಹಿನ್ನಡೆ ಕಂಡುಬರುವುದು. ಮಾನಸಿಕ ಒತ್ತಡದಿಂದ ಖಿನ್ನತೆಯನ್ನು ಅನುಭವಿಸುವಿರಿ. ನರ ಸಂಬಂಧಿ ಸೆಳೆತ ಕಾಡಬಹುದು.

ಶ್ರೀ ವಿನಾಯಕ ಪೂಜೆ. ಶುಭ ಸಂಖ್ಯೆ-4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಜನ್ಮರಾಶಿ ಸ್ಥಿತ ಕೇತುವಿನಿಂದ ನಿಮಗೆ ಜೀವನದ ಬಗ್ಗೆ ವೈರಾಗ್ಯ ಮೂಡಬಹುದು. ಇದು ತಾತ್ಕಾಲಿಕವಾದದ್ದು. ಧನಾದಾಯ ಮಂದಗತಿಯಲ್ಲಿ ಇರುತ್ತದೆ. ಆಸ್ತಿ ಸಂಬಂಧ ವಿಚಾರಗಳು ನಿಮಗೆ ಅನುಕೂಲಕರವಾಗಿರುವುದಿಲ್ಲ. ದಾಯಾದಿಗಳೊಡನೆ ಕಲಹಗಳು ಉಂಟಾಗಬಹುದು. ಅನ್ಯ ಸ್ತ್ರೀಯರನ್ನು ಆದರದಿಂದ ಕಾಣಿ ಅನ್ಯಥಾ ವಿಕೋಪ ಪರಿಸ್ಥಿತಿ ಉಂಟಾಗಬಹುದು. ಉದರ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ಲಲಿತಾ ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-5.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದ ಆದಿಗೆ ನಿಮ್ಮ ರಾಶಿಯಲ್ಲಿ ಸಂಚರಿಸುವ ಉಚ್ಚ ಚಂದ್ರನಿಂದ ನಿಮ್ಮಲ್ಲಿ ಕಾರ್ಯೋತ್ಸಾಹ ಜಾಸ್ತಿ ಇರುತ್ತದೆ. ಧನದಾಯವೂ ನಿಮ್ಮ ನಿರೀಕ್ಷೆಯನ್ನು ಮೀರಿಯೇ ಇರುತ್ತದೆ. ಬಂಧು-ಬಾಂಧವರ ವಿಶ್ವಾಸ ನಂಬಿಕೆಗಳಿಗೆ ಪಾತ್ರರಾಗುವಿರಿ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯಲಿವೆ. ಪುಣ್ಯಕ್ಷೇತ್ರ ದರ್ಶನ ಯೋಗವೂ ಇದೆ. ಸ್ಥಿರಾಸ್ತಿ ಕ್ರಯ-ವಿಕ್ರಯಗಳು ನಡೆಯುವುದು. ಹರಿತವಾದ ಆಯುಧಗಳಿಂದ ಎಚ್ಚರವಾಗಿರಿ.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-2.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)

ಈ ವಾರ ನಿಮ್ಮ ಧೀಶಕ್ತಿ ಉನ್ನತ ಮಟ್ಟದ್ದಾಗಿರುತ್ತದೆ. ಗುರು-ಚಂದ್ರ ಸಂಯೋಜನೆಯಿಂದ ಧನ ಆದಾಯವು ನಿಮ್ಮ ನಿರೀಕ್ಷೆಯನ್ನು ಮೀರಿ ಇರುತ್ತದೆ. ಸ್ಥಿರಾಸ್ತಿ ಹೊಂದಲು ಗುರುಬಲ ಉತ್ತಮವಾಗಿದೆ. ಬ್ಯಾಂಕ್ ಸಾಲವೂ ದೊರೆತೀತು. "ಪ್ರಯತ್ನ ಪುರುಷಾಥೀ ಫಲ ದೈವಾಧೀನ". ನಿಮಗಾಗದವರು ನಿಮ್ಮ ಮಿತ್ರತ್ವ ಬಯಸಿ ಬರಬಹುದು, ನಿರಾಕರಿಸದಿರಿ. ವಾರಾಂತ್ಯಕ್ಕೆ ವಿಪರೀತ ಖರ್ಚುಗಳು ಎದುರಾಗುವುದು.

ಶ್ರೀ ರಾಹು-ಕೇತು ಸ್ತೋತ್ರ ಜಪ. ಶುಭ ಸಂಖ್ಯೆ-6.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸಮಾಜದಲ್ಲಿ ಗೌರವಾದರಗಳಿಗೆ ಭಾಜನರಾಗುವಿರಿ. ವೃತ್ತಿಯಲ್ಲಿ ಶ್ರದ್ಧೆ ತೋರುವುದರಿಂದ ಧನಾದಾಯದಲ್ಲಿ ಹೆಚ್ಚಳವಾಗುವುದು. ಬೃಹತ್ ಉದ್ದಿಮೆ ನಡೆಸುವವರು ಕೆಲಸಗಾರರನ್ನು ಒಲಿಸಿಕೊಂಡು ತಮ್ಮ ಕಾರ್ಯ ಸಾಧನೆಯಲ್ಲಿ ಯಶಸ್ವಿಯಾಗುವರು. ಬಂಧುಗಳಲ್ಲಿ ಹಾಗೂ ನೆರೆಹೊರೆಯಲ್ಲಿ ಉತ್ತಮ ಬಾಂಧವ್ಯವನ್ನು ಹೊಂದಿರಲು ಪ್ರಯತ್ನಿಸಿ. ಕೆಲವರಿಗೆ ವಿದೇಶಕ್ಕೆ ಪ್ರಯಾಣ ಮಾಡುವ ಯೋಗವಿದೆ.

ಶ್ರೀರಾಮ ರಕ್ಷಾಸ್ತೋತ್ರ ಪಠಿಸಿ. ಶುಭ ಸಂಖ್ಯೆ-7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಾಡೇಸಾತಿ ಶನಿ ಬಿಟ್ಟಿದೆ ಆದರೂ ಮನಸ್ಸಿಗೆ ನಿರಾಳತೆ ಇಲ್ಲ. ನಿಮ್ಮ ಅಗತ್ಯಕ್ಕೆ ತಕ್ಕಷ್ಟು ಹಣ ಒದಗಿ ಬರಲಿದೆ. ಸರ್ಕಾರಿ ಸಂಸ್ಥೆಗಳ ಸಾಲವೂ ದೊರೆಯಲಿದೆ. ರಿಯಲ್ ಎಸ್ಟೇಟ್ ವ್ಯವಹಾರ ನೀವಂದುಕೊಂಡಂತೆ ಸಾಗದು. ವಿದ್ಯಾರ್ಥಿಗಳು ಆಲಸಿಗರಾಗುವರು, ನಿಮ್ಮ ವ್ಯಕ್ತಿತ್ವಕ್ಕೆ ತಕ್ಕಂತೆ ಹಿರಿಯರ ಮಾರ್ಗದರ್ಶನದ ಅಗತ್ಯವಿದೆ. ವಾರಾಂತ್ಯಕ್ಕೆ ಪೀಠೋಪಕರಣ ವ್ಯಾಪಾರಿಗಳಿಗೆ ಅತಿಶಯ ಧನ ಲಾಭವಾಗುವುದು.

ಶ್ರೀದತ್ತ ಉಪಾಸನೆ. ಶುಭ ಸಂಖ್ಯೆ-8.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಈ ವಾರದಲ್ಲಿ ಎಲ್ಲಾ ಕೆಲಸಗಳನ್ನು ಲವಲವಿಕೆಯಿಂದ ಮಾಡುವಿರಿ. ನಿಮ್ಮ ಮಾನಸಿಕ ದೃಢತೆಯೂ ಹೆಚ್ಚಿರುತ್ತದೆ. ಹಣದ ಒಳ ಹರಿವು ಚೆನ್ನಾಗಿರುತ್ತದೆ. ಅದರಂತೆಯೇ ಖರ್ಚುಗಳೂ ಕೂಡ. ಎಲೆಕ್ಟ್ರಾನಿಕ್ ವಸ್ತು ವ್ಯಾಪಾರಿಗಳಿಗೆ ದೊಡ್ಡ ಮೊತ್ತದ ಆರ್ಡರ್ ದೊರೆಯುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುವುದು. ಸ್ತ್ರೀಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣ ವ್ಯಯಿಸುವರು.

ಶ್ರೀದೇವಿ ಉಪಾಸನೆ. ಶುಭ ಸಂಖ್ಯೆ-1.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಶ್ರೀ ಶನೇಶ್ವರ ಮುಂದಿನ ರಾಶಿಗೆ ಹೋದರೂ ರಾಮೇಶ್ವರಕ್ಕೆ ಹೋದರೂ ಶನೇಶ್ವರ ಬಿಡ ಎಂಬ ಗಾದೆಯಂತೆ ಆಗಿದೆ ನಿಮ್ಮ ಪರಿಸ್ಥಿತಿ. ಆಸ್ತಿ ಮಾರಾಟ ವಿಚಾರದಲ್ಲಿ ಕುಟುಂಬದಲ್ಲಿ ದ್ವಂದ್ವವಿರುತ್ತದೆ. ಕೃಷಿಕರಿಗೆ ಉತ್ತಮ ಫಸಲು ಬಂದರೂ ಸೂಕ್ತ ಬೆಲೆ ದೊರೆಯದು. ವಿದ್ಯಾರ್ಥಿಗಳು ಅಧ್ಯಯನದಲ್ಲಿ ಹಿಂದೆ ಬೀಳುವರು. ವಾರಾಂತ್ಯಕ್ಕೆ ಹೋಟೆಲ್ ಕೆಟರಿಂಗ್ ವ್ಯವಹಾರಗಳಿಗೆ ಹೇರಳ ಧನಲಾಭವಾಗುವುದು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-3.

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)

ಈ ಸಪ್ತಾಹದಲ್ಲಿ ಇದ್ದುದರಲ್ಲಿ ತೃಪ್ತಿಪಟ್ಟುಕೊಂಡು ಇದ್ದರೆ ಒಳಿತಾಗುವುದು. ಆಸ್ತಿ ವಿಚಾರದಲ್ಲಿ ಸ್ವಲ್ಪ ಮುನ್ನಡೆಯನ್ನು ಸಾಧಿಸಬಹುದು. ಕೃಷಿ ಕೆಲಸಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳುವ ಆಸಕ್ತಿ ಮೂಡುವುದು. ಕಂಟ್ರಾಕ್ಟರುಗಳಿಗೆ ಕೆಲಸದವರಿಂದ ತೊಂದರೆ ಉಂಟಾಗುವುದು. ದಾನ-ಧರ್ಮ ಬುದ್ಧಿಯಿಂದ ಪ್ರಸಿದ್ಧಿಗೆ ಬರುವಿರಿ. ಮಕ್ಕಳ ಆರೋಗ್ಯದ ವಿಚಾರದ ಬಗ್ಗೆ ಹೆಚ್ಚಿನ ಚಿಂತೆ ಉಂಟಾಗುತ್ತದೆ. ವಾತರೋಗ ಕಾಡಬಹುದು.

ಶ್ರೀ ದಕ್ಷಿಣಾಮೂರ್ತಿ ಸ್ತುತಿ. ಶುಭ ಸಂಖ್ಯೆ-9.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ನಿರೀಕ್ಷೆ ಫಲ ದೊರೆಯಬೇಕಿದ್ದರೆ ವೃತ್ತಿಯಲ್ಲಿ ಬಹಳ ಶ್ರದ್ಧೆಯನ್ನು ತೋರಬೇಕಾಗುತ್ತದೆ. ಸುವರ್ಣ, ರಜತ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ಗೃಹಲಕ್ಷ್ಮಿಯ ಸಲಹೆಯಂತೆ ನಡೆಯುವುದರಿಂದ ಹೆಚ್ಚಿನ ಲಾಭವಿದೆ. ಜಾತ್ರೆ, ಉತ್ಸವಾದಿಗಳಲ್ಲಿ ಭಾಗವಹಿಸಿ ಧನ್ಯತಾಭಾವವನ್ನು ಹೊಂದುವಿರಿ. ಉದ್ಯೋಗಾಕಾಂಕ್ಷಿಗಳಿಗೆ ಸೂಕ್ತ ಉದ್ಯೋಗ ದೊರೆಯಲು ಗುರುಕೃಪೆ ಇದೆ. ವಾತರೋಗ ಕಾಡಬಹುದು.

ಶ್ರೀ ವಿಷ್ಣು ಅರ್ಚನೆ. ಶುಭ ಸಂಖ್ಯೆ-2.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದ ಆದಿಗೆ ವ್ಯಾಪಾರ ವ್ಯವಹಾರಗಳಲ್ಲಿ ಧನ ಸಂಪಾದನೆ ಚೆನ್ನಾಗಿದೆ. ವಿವಾಹಾಕಾಂಕ್ಷಿಗಳಿಗೆ ಉತ್ತಮ ಬಾಳ ಸಂಗಾತಿ ದೊರೆಯುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಕ್ರಿಯಾಶಕ್ತಿ, ಜ್ಞಾನ ಶಕ್ತಿಗಳು ಉತ್ತಮವಾಗಿರುತ್ತದೆ. ಕೃಷಿಕರಿಗೆ ಉತ್ತಮ ಬೆಳೆ ಹಾಗೂ ಬೆಲೆ ದೊರೆಯುವುದು. ರಾಹು-ಕೇತುಗಳು ಅಶುಭರಿದ್ದು ಅಪರಿಚಿತರನ್ನು ನಂಬಿ ಯಾವ ಕೆಲಸವನ್ನೂ ಮಾಡಬೇಡಿ. ರಕ್ತ ಸಂಚಲನೆಯಲ್ಲಿ ವ್ಯತ್ಯಯ ಉಂಟಾಗಬಹುದು.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-4.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)


ವಾರದಾರಂಭಕ್ಕೆ ಕೆಲವೊಂದು ಗ್ರಹಗಳ ಶುಭ ಸಂಚಾರದಿಂದ ಮನಸ್ಸಿಗೆ ನೆಮ್ಮದಿ ತರುವಂತಹ ವಿಚಾರಗಳು ಘಟಿಸುತ್ತವೆ. ಹೊಸ ವಸ್ತ್ರಾಭರಣಗಳನ್ನು ಕೊಳ್ಳುವಿರಿ. ಮಿತ್ರವೃಂದದವರ ಭೇಟಿಯಿಂದ ಮನಃಸಂತೋಷ ಹಾಗೂ ಪಾನಕೂಟಗಳು ನಡೆಯಲಿವೆ. ಅಷ್ಟಮ ಕೇತು ನಿಮ್ಮನ್ನು ವಿಚಾರ ಹೀನರಂತೆ ವರ್ತಿಸಲು ಪ್ರೇರೇಪಿಸುವನು. ದ್ವಿತೀಯ ರಾಹುವಿನ ಕಾರಣ ಸಟ್ಟಾ, ರೇಸುಗಳಿಂದ ನಷ್ಟವಾಗುವುದು.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-5.

ಮಕ್ಕಳ ಚಿತ್ರಕಥೆ

'ಹೇ ಪ್ರಭು... ನನ್ನನ್ನೇ ಆಯ್ದುಕೊಳ್ಳಿ...!!'

-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ತಿ.ನರಸೀಪುರ ಪುರಸಭೆ ಸಾಮಾನ್ಯ ಸಭೆ

ಅಭಿವೃದ್ಧಿ ಕಾಮಗಾರಿಗಳಿಗೆ ಸದಸ್ಯರಿಂದ ಅನುಮೋದನೆ

ಅಕ್ರಮ ಬಾರ್, ವೈನ್‌ಸ್ಟೋರ್, ಕಾಂಗ್ರೆಸ್ ಕಚೇರಿ ತೆರವುಗೊಳಿಸಿ: ಸದಸ್ಯ ಅರ್ಜುನ್ ಒತ್ತಾಯ

ತಿ.ನರಸೀಪುರ, ಜ.28– ಪುರಸಭಾ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿ, ಹೈಮಾಸ್ಟ್ ದೀಪ ದುರಸ್ತಿ, ಕಂಪ್ಯೂಟರ್ ಮತ್ತು ಪ್ರಿಂಟರ್ ಖರೀದಿ ಸೇರಿದಂತೆ ವಿವಿಧ ಟೆಂಡರ್ ಹಾಗೂ ಹುದ್ದೆಗಳ ನೇಮಕಾತಿಗೆ ಪುರಸಭಾ ಸದಸ್ಯರು ಸರ್ವಾನುಮತದ ಅನುಮೋದನೆ ನೀಡಿದರು.



ಪುರಸಭಾಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚೆ ನಡೆಸಿದ ಸದಸ್ಯರು, ಸರ್ವ ಸಮ್ಮತದಿಂದ ಒಪ್ಪಿಗೆ ಸೂಚಿಸಿ ತ್ವರಿತವಾಗಿ ಕಾಮಗಾರಿ ಕೈಗೊಳ್ಳುವಂತೆ ಒತ್ತಾಯಿಸಿದರು.

ಸದಸ್ಯ ಅರ್ಜುನ್ ಮಾತನಾಡಿ, ಪಟ್ಟಣದಲ್ಲಿ ಅಕ್ರಮವಾಗಿ ತಲೆ ಎತ್ತಿರುವ ಬಾರ್ ಮತ್ತು ವೈನ್‌ಸ್ಟೋರ್ ತೆರವುಗೊಳಿಸುವಂತೆ ಒತ್ತಾಯಿಸಿದರು. ಲಿಂಕ್ ರಸ್ತೆಯ ಪುರಸಭೆ ಕಟ್ಟಡದಲ್ಲಿ ಪುರಸಭೆ ಅನುಮತಿ ಪಡೆಯದೇ ರಾಜು ಬಾರ್‌ನವರು ಕಟ್ಟಡದ ಮೇಲೆ ಮತ್ತೊಂದು ಕಟ್ಟಡ ನಿರ್ಮಿಸಿ ಬಾರ್ ಮಾಡಿಕೊಂಡು ಅಕ್ರಮ ವ್ಯಾಪಾರ ನಡೆಸುತ್ತಿದ್ದಾರೆ. ಕೊಳ್ಳೇಗಾಲ–ಚಾಮರಾಜನಗರ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿ ಸಹ ಅಕ್ರಮವಾಗಿ ನಿರ್ಮಾಣಗೊಂಡಿದೆ. ಕಚೇರಿಯನ್ನು 39x25ರ ಅಳತೆಯಲ್ಲಿ ನಿರ್ಮಿಸಲು ಖಾತೆ ಮಾಡಿಕೊಡಲಾಗಿದೆ. ಆದರೆ ಅವರು ಅಕ್ರಮವಾಗಿ 85x25ರ ಅಳತೆಯಲ್ಲಿ ನಿರ್ಮಿಸಿದ್ದು, ಕೂಡಲೇ ಅತಿಕ್ರಮಣ ತೆರವುಗೊಳಿಸಿ ಪುರಸಭೆ ವಶಕ್ಕೆ ಪಡೆಯಬೇಕೆಂದು ಒತ್ತಾಯಿಸಿದರು. ಅಲ್ಲದೇ ಎಸ್‌ಎಂಆರ್ ಮಿಲ್‌ನವರು ಹೆಚ್ಚುವರಿ ಜಾಗ ಅತಿಕ್ರಮಿಸಿಕೊಂಡಿದ್ದಾರೆ ಎಂದರು.

ಪಟ್ಟಣದ ಶ್ರೀರಾಮಪುರ ಬಡಾವಣೆಯಲ್ಲಿ ಸೋಮಸುಂದರ್ ರೈಸ್‌ಮಿಲ್‌ನವರು ಅಕ್ರಮವಾಗಿ ನಿವೇಶನ ನಿರ್ಮಿಸಿಕೊಂಡಿದ್ದಾರೆ ಎಂದು ದೂರಿದ 22ನೇ ವಾರ್ಡ್ ಸದಸ್ಯ ವಿ.ಮೋಹನ್ ಕೂಡಲೇ ಅಲ್ಲಿಗೆ ನೀಡುತ್ತಿರುವ ಮೂಲ ಸೌಕರ್ಯ ರದ್ದುಪಡಿಸುವಂತೆ ಒತ್ತಾಯಿಸಿದರಲ್ಲದೇ, ಲಾಲ್ ಬಹದ್ದೂರ್ ಶಾಸ್ತ್ರಿ ಕಾಲೋನಿಯಲ್ಲಿ ನಿವೇಶದ ಹಕ್ಕುಪತ್ರ ಕೆಲವರಿಗೆ ಕೊಟ್ಟಿಲ್ಲ. ಅಲ್ಲದೇ ದೊಡ್ಡಿಮನೆ ಸುತ್ತಮುತ್ತಲ ಜಾಗ ಒತ್ತುವರಿಯಾಗಿದ್ದು, ಹದ್ದುಬಸ್ತ್ ಮಾಡಿ ಒತ್ತುವರಿ ತೆರವುಗೊಳಿಸುವಂತೆ ಆಗ್ರಹಿಸಿದರು.

ಸದಸ್ಯ ತುಂಬಲ ಪ್ರಕಾಶ್ ಮಾತನಾಡಿ, ಪಟ್ಟಣದಲ್ಲಿ ಅನೇಕ ವರ್ಷಗಳಿಂದ 10 ರೂ. ನೆಲ ಬಾಡಿಗೆ ಪಡೆಯಲಾಗುತ್ತಿದ್ದು, ಸುಂಕ ಹೆಚ್ಚು ಮಾಡುವಂತೆ ಹಾಗೂ ಫಿಲ್ಟರ್ ಹೌಸ್‌ನಲ್ಲಿರುವ ಹಳೇ ನಿರುಪಯುಕ್ತ ವಸ್ತುಗಳನ್ನು ಹರಾಜು ಮಾಡುವಂತೆ ಸಲಹೆ ನೀಡಿದರು.

ಸರ್ವೆ ನಂ.131 ಹಾಗೂ 132ರ ಕೃಷಿ ಭೂಮಿಗೆ ಅಕ್ರಮವಾಗಿ ಖಾತೆ ಮಾಡಲಾಗಿದ್ದು, ಖಾತೆ ವಜಾಗೊಳಿಸಿ ಸರ್ಕಾರಕ್ಕೆ ಬರಬೇಕಾದ ಹಣ ಪಡೆಯುವಂತೆ ಸದಸ್ಯೆ ಬೇಬಿ ಒತ್ತಾಯಿಸಿದರು. ಹೊಲಿಗೆ ಯಂತ್ರ ತರಬೇತಿ ಪಡೆದ ಫಲಾನುಭವಿಗಳಿಗೆ ಯಂತ್ರ ಕೊಡಿಸುವಂತೆ ಅಧ್ಯಕ್ಷರಲ್ಲಿ ಮನವಿ ಮಾಡಿದರು.

ಮಾಜಿ ಉಪಾಧ್ಯಕ್ಷೆ ಪ್ರೇಮಾ ಮರಯ್ಯ ಒತ್ತಾಯದ ಮೇರೆಗೆ ವಾರ್ಡ್ ನಂ.3ರಲ್ಲಿ, ದಲಿತರ ಸ್ಮಶಾನದ ಬಳಿಯ ಸೋಪಾನ ಕಟ್ಟೆ ಕಾಮಗಾರಿ ಭಾಗಶಃ ಮುಗಿದಿದ್ದು, ಉಳಿದ ಕಾಮಗಾರಿಯನ್ನು ಉಳಿತಾಯ ಹಣದಲ್ಲಿ ಪೂರ್ಣಗೊಳಿಸಲಾಗುತ್ತದೆ. ಗೋಪಾಲಪುರದಲ್ಲಿ ಗ್ರಂಥಾಲಯ ನಿರ್ಮಾಣ ಮಾಡಲು 30 ಲಕ್ಷ ರೂ. ತೆಗೆದಿರಿಸಲಾಗಿದ್ದು ಸದಸ್ಯರು ಒಪ್ಪಿಗೆ ಸೂಚಿಸಿದ್ದಾರೆ ಎಂದು ಅಧ್ಯಕ್ಷ ನಂಜುಂಡಸ್ವಾಮಿ ತಿಳಿಸಿದರು.

ಟುಲಿಪ್ ಇಂಟರ್ನ್‌ಶಿಪ್ ಕಾರ್ಯಕ್ರಮದಡಿ ಪುರಸಭೆಗೆ ಅವಶ್ಯವಿರುವ ಇಂಟರ್ನ್‌ಗಳನ್ನು ನೇಮಕಾತಿ ಮಾಡಿಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆದು ಬಿಇ ಪದವೀಧರರನ್ನು 3 ತಿಂಗಳ ಅವಧಿಗೆ 5 ಸಾವಿರ ರೂ. ಗೌರವ ಧನ ನೀಡಿ ನೇಮಕ ಮಾಡಿಕೊಳ್ಳಲು ತೀರ್ಮಾನಿಸಲಾಯಿತು. ಪುರಸಭಾ ವ್ಯಾಪ್ತಿಯ ಹೈಮಾಸ್ಟ್ ದೀಪಗಳನ್ನು ದುರಸ್ತಿಗೊಳಿಸುವ ಬಗ್ಗೆ, 23 ವಾರ್ಡ್‌ಗಳಲ್ಲಿ ಬೀದಿ ದೀಪಗಳ ವಾರ್ಷಿಕ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ ಟೆಂಡರ್ ಅನುಮೋದಿಸುವ ಬಗ್ಗೆ, 10 ಮಂದಿಯನ್ನು 30 ದಿನಗಳವರೆಗೆ ಜಂಗಲ್ ಕಟಿಂಗ್ ಮಾಡಿಸುವ ಕೆಲಸಕ್ಕೆ ತಾತ್ಕಾಲಿಕವಾಗಿ ದಿನಗೂಲಿ ಆಧಾರದ ಮೇಲೆ ನೇಮಿಸಿಕೊಳ್ಳುವ ಬಗ್ಗೆ, ಹೊಸ ಕಟ್ಟಡ ನಿರ್ಮಿಸಲು ಕಟ್ಟಡ ಪರವಾನಗಿ ಪಡೆಯುವ ಸಂದರ್ಭದಲ್ಲೇ ಯುಜಿಡಿ ಸಂಪರ್ಕ ಕಲ್ಪಿಸುವ ಶುಲ್ಕವನ್ನು 5 ರಿಂದ 10 ಸಾವಿರ ರೂ. ಹೆಚ್ಚಿಸುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದು ಸದಸ್ಯರೆಲ್ಲರೂ ಒಪ್ಪಿಗೆ ಸೂಚಿಸಿದರು.

ಸ್ಥಾಯಿ ಸಮಿತಿ ಅಧ್ಯಕ್ಷ ಸೈಯದ್ ಅಹ್ಮದ್, ಉಪಾಧ್ಯಕ್ಷೆ ನಾಗರತ್ನ ಮಾದೇಶ್, ಮಾಜಿ ಅಧ್ಯಕ್ಷ ಎಸ್.ಮದನ್‌ರಾಜ್, ಸೋಮು, ಸದಸ್ಯರಾದ ಎಸ್.ಕೆ.ಕಿರಣ್, ಆರ್.ನಾಗರಾಜ್, ಎಲ್.ಮಂಜುನಾಥ್, ಸಿಸ್ಟಮ್ ಸಿದ್ದು, ಪ್ರೇಮಾ ಮರಯ್ಯ, ತೇಜಸ್ವಿನಿ, ರಾಜೇಶ್ವರಿ, ರೂಪಾ ಪರಮೇಶ್, ಮಹದೇವಮ್ಮ, ತೇಜಸ್ವಿನಿ, ಬೇಬಿ, ವಸಂತ, ನಾಮ ನಿರ್ದೇಶಿತ ಸದಸ್ಯರಾದ ಲೋಕೇಶ್, ನಂಜುಂಡಸ್ವಾಮಿ, ಗಣೇಶ್, ಚಿಕ್ಕ ಮಹದೇವ, ಸರ್ವಮಂಗಳ, ಮುಖ್ಯಾಧಿಕಾರಿ ಎಚ್.ಆರ್.ಬಸವರಾಜು, ಆರೋಗ್ಯಾಧಿಕಾರಿ ಲೋಕೇಶ್ವರಿ, ಕಾರ್ಯನಿರ್ವಾಹಕ ಅಭಿಯಂತರ ನಿಂಗಯ್ಯ, ಜೆಇ ಸಿದ್ದಯ್ಯ, ಸಮುದಾಯ ಸಂಘಟಕ ಮಹದೇವ್ ಇತರರಿದ್ದರು.

ಸದಸ್ಯರ ದೂರುಗಳನ್ನು ಆಲಿಸಿದ ಅಧ್ಯಕ್ಷ!

ಕೆಲವೊಂದು ದೂರಿಗೆ ಸಂಬಂಧಪಟ್ಟಂತೆ ಪತ್ರದ ಮೂಲಕ ತಿಳುವಳಿಕೆ ನೀಡಲಾಗುತ್ತದೆ. ಸದಸ್ಯರು ತಿಳಿಸಿರುವ ದೂರಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸಿ ಅಕ್ರಮವಾಗಿದ್ದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತದೆ. ಈಗಾಗಲೇ ಪಟ್ಟಣದಾದ್ಯಂತ ಕೆಟ್ಟು ನಿಂತಿದ್ದ ಬೀದಿ ದೀಪಗಳ ಸರಿಪಡಿಸಿ ಕತ್ತಲಿಂದ ಬೆಳಕಿನೆಡೆಗೆ ತರಲು ಕ್ರಮ ಕೈಗೊಳ್ಳಲಾಗಿದೆ. ಇನ್ನೊಂದು ವಾರದೊಳಗೆ ಪಟ್ಟಣದ ಹದಗೆಟ್ಟಿರುವ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗುತ್ತದೆ.

-ಟಿ.ಎಂ.ನಂಜುಂಡಸ್ವಾಮಿ, ಪುರಸಭೆ ಅಧ್ಯಕ್ಷ

ರೌಡಿಶೀಟರ್ ವಾಸಿಂಗೆ ಒಂದು ವರ್ಷ ಜೈಲು ಶಿಕ್ಷೆ

ಹುಣಸೂರು, ಜ.28– ನಗರದ ಪೊಲೀಸ್ ಠಾಣೆಯಲ್ಲಿ ರೌಡಿ ಶೀಟರ್ ವಾಸಿಂ ಅಲಿಯಾಸ್ ವೀಲ್ ವಾಸಿಂ ವಿರುದ್ಧ 12 ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ಹೈಕೋರ್ಟ್ ಸಲಹಾ ಮಂಡಳಿ ಆತನನ್ನು 1 ವರ್ಷ ಗಡಿಪಾರು ಮಾಡಿ ಬಂಧನದಲ್ಲಿರಿಸಲು ಆದೇಶ ಹೊರಡಿಸಿದೆ.



ನಗರದ ಮುಸ್ಲಿಂ ಬ್ಲಾಕ್ ನಿವಾಸಿ ಅಕ್ರಂ ಪಾಷ ಅವರ ಪುತ್ರ ರೌಡಿಶೀಟರ್ ವಾಸಿಂ ವಿರುದ್ಧ ದೊಂಬಿ, ಮಹಿಳೆಯರ ಮೇಲೆ ದೌರ್ಜನ್ಯ, ಪೊಲೀಸರ ಮೇಲೆ ಹಲ್ಲೆ, ಕೊಲೆ ಯತ್ನ, ಮಾರಕಾಸ್ತ್ರಗಳಿಂದ ಹಲ್ಲೆ ಯತ್ನ ಸೇರಿದಂತೆ ಹುಣಸೂರು ಠಾಣೆಯಲ್ಲಿ 12 ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ಗೂಂಡಾ ಕಾಯ್ದೆಯಡಿ ಮುಂದಿನ 1 ವರ್ಷಗಳ ಕಾಲ ಆತನನ್ನ ಗಡಿಪಾರು ಮಾಡಿ ಹಿಂಡಲಗ ಕಾರಾಗೃಹದಲ್ಲಿ ಬಂಧನದಲ್ಲಿರಿಸಲು ಹೈಕೋರ್ಟ್ ಸಲಹಾ ಮಂಡಳಿ ಆದೇಶಿಸಿದೆ. ಮೈಸೂರು ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್ ಸಲಹಾ ಸಮಿತಿ ಮುಂದೆ ಹಾಜರಾಗಿ, ವಾಸಿಂ ಬಂಧನದ ಸಾಕಷ್ಟು ಕಾರಣಗಳನ್ನು ದಾಖಲೆಗಳ ಸಮೇತ ಮಂಡಿಸಿದ್ದರು. ಪ್ರಸ್ತಾವನೆ ತಯಾರು ಮಾಡಲು ಶ್ರಮಿಸಿದ ಪೇದೆ ಎಸ್.ಎ.ಮನೋಹರ ಕಾರ್ಯವನ್ನು ಮೇಲಾಧಿಕಾರಿಗಳು ಶ್ಲಾಘಿಸಿದ್ದಾರೆ.

ಬಿಜೆಪಿ ವಿರುದ್ಧ ಹಗುರವಾಗಿ ಮಾತನಾಡುವುದನ್ನು ನಿಲ್ಲಿಸಿ

ಕಾಂಗ್ರೆಸ್, ಜೆಡಿಎಸ್ ನಾಯಕರಿಗೆ ಮಿರ್ಲೆ ಶ್ರೀನಿವಾಸ್‌ಗೌಡ ಎಚ್ಚರಿಕೆ

ಭೇರ್ಯ, ಜ.28– ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಬಿಜೆಪಿ ವಿರುದ್ಧ ಹಗುರವಾಗಿ ಮಾತನಾಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದಲ್ಲಿ ಹಳ್ಳಿ ಹಳ್ಳಿಗಳಲ್ಲಿ ನಿಮ್ಮ ಜಾತಕ ಸಮೇತ ತೇಜೋವಧೆ ಮಾಡಲಾಗುವುದು ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಎಚ್ಚರಿಕೆ ನೀಡಿದರು.



ಇಲ್ಲಿಗೆ ಸಮೀಪದ ಗಂಧನಹಳ್ಳಿಯಲ್ಲಿ ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಮಾಜಿ ಸಿಎಂ ಸಿದ್ದರಾಮಯ್ಯನವರು ಪ್ರಧಾನಿ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಬಗ್ಗೆ ಟೀಕಿಸುವ ಭರದಲ್ಲಿ ಮಾಡುವ ಪದಬಳಕೆ ಸರಿ ಇಲ್ಲ. ನಿಮಗೆ ಇದು ಶೋಭೆ ತರುವುದಿಲ್ಲ ಎಂದರು.

ಕಾಂಗ್ರೆಸ್‌ನವರು ಹತಾಶರಾಗಿದ್ದಾರೆ. ಅವರ ಗ್ಯಾರಂಟಿ ಯೋಜನೆಯಲ್ಲಿ ಸೋಲು ಗ್ಯಾರಂಟಿ. ಬಿಜೆಪಿ ಪಕ್ಷ 2023ರಲ್ಲಿ ಮತ್ತೆ ಅಧಿಕಾರಕ್ಕೆ ಬರುತ್ತದೆ. ದೇಶದಲ್ಲಿ ಕರ್ನಾಟಕ ನಂಬರ್ 1 ಸ್ಥಾನಕ್ಕೇರುತ್ತದೆ. ಲೋಕಾಯುಕ್ತದಲ್ಲಿ ನಿಮ್ಮ ವಿರುದ್ಧ 59 ಕೇಸ್‌ಗಳಿದ್ದವು. ಆದರೆ ಕೇಸ್ ಮುಚ್ಚಿಹಾಕಲು ಲೋಕಾಯುಕ್ತವನ್ನೇ ಮುಚ್ಚಿ ಹಾಕಿದ್ದೀರಿ. ನ್ಯಾಯಾಲಯದ ಆದೇಶದ ಮೇರೆಗೆ ಈಗ ನಾವು ಮತ್ತೆ ಲೋಕಾಯುಕ್ತ ಆರಂಭಿಸಿದ್ದು, ನಿಮ್ಮ 59 ಕೇಸ್‌ಗಳನ್ನು ಲೋಕಾಯುಕ್ತ ತನಿಖೆಗೆ ವಹಿಸಲಾಗುವುದು. ನಿಮ್ಮ ಬಣ್ಣ ಬಯಲಾಗಲಿದೆ. ನಿಮ್ಮ ಭ್ರಷ್ಟಾಚಾರ ಎಲ್ಲರಿಗೂ ಗೊತ್ತಾಗುತ್ತದೆ. ಜನರ ಮುಂದೆ ನಿಮ್ಮ ಮುಖವಾಡ ಕಳಚಲಿದೆ ಎಂದರು.


ಜೆಡಿಎಸ್ ಯಾವುದೇ ಕಾರಣಕ್ಕೂ ಅಧಿಕಾರಕ್ಕೆ ಬರಲ್ಲ ಸ್ಯಾಂಟ್ರೋ ರವಿ ಹಿಂದೆ ಬಿಜೆಪಿ ನಾಯಕರು ಇದ್ದಾರೆ ಎನ್ನುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಅವರೇ ಮೊದಲು ಸ್ಯಾಂಟ್ರೋ ರವಿ ಪರಿಚಯಿಸಿದ್ದು ಎಂದು ಲೇವಡಿ ಮಾಡಿದ ಅವರು ಪರ್ಸಂಟೇಜ್ ಸರ್ಕಾರ ಮಾಡಿದ್ದು ಕುಮಾರಸ್ವಾಮಿ ಅವರು ನಮ್ಮ ಸರ್ಕಾರ ಅಲ್ಲ ಎಂದರು.

ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ ಮಾಡಿದರೆ ಜೆಡಿಎಸ್‌ನವರು ಪಂಚರತ್ನ ಯಾತ್ರೆ ಮಾಡುತ್ತಿದ್ದಾರೆ. ಎರಡು ಪಕ್ಷಗಳದು ಬೋಗಸ್ ಯಾತ್ರೆ ಎಂದು ವ್ಯಂಗ್ಯವಾಡಿದರು.

ಈ ವೇಳೆ ಬಿಜೆಪಿ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ವೆಂಕಟೇಶ್, ಜಿಲ್ಲಾ ಬಿಜೆಪಿ ಮಾಧ್ಯಮ ವಕ್ತಾರ ಹೆಚ್.ಪಿ.ಗೋಪಾಲ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಪ್ರಭಾಕರ್ ಜೈನ್, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಸ್ವಪ್ನ, ತಾಲೂಕು ಬಿಜೆಪಿ ಓಬಿಸಿ ಅಧ್ಯಕ್ಷ ಚಿಕ್ಕೇಗೌಡ, ಪ್ರಧಾನ ಕಾರ್ಯದರ್ಶಿ ಕೃಷ್ಣೇಗೌಡ, ತಾಲೂಕು ಪ್ರಧಾನ ಕಾರ್ಯದರ್ಶಿ ಅನಿಲ್, ಪುರಸಭೆ ನಾಮನಿರ್ದೇಶಿತ ಸದಸ್ಯ ಉಮಾಶಂಕರ್, ಗಂಧನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ದೇವರಾಜ್, ಮುಖಂಡರಾದ ಮಾರ್ಕಂಡೇಯ, ಪ್ರಕಾಶ್, ಪ್ರಕಾಶ್, ಚೇತನ್, ರಾಮಕೃಷ್ಣ, ಮಧು, ಕೆ.ಆರ್. ಮಂಜು, ಮಲ್ಲಿಕಾರ್ಜುನಪ್ಪ ಶಿವರಾಮು, ಮಹೇಂದ್ರ, ಸಂತೋಷ್, ಮಹೇಂದ್ರ ತಿಲಕ್ ಸೇರಿದಂತೆ ಅನೇಕರಿದ್ದರು.

ಸಂವಿಧಾನ ರಾಷ್ಟ್ರದ ಎಲ್ಲಾ ಧರ್ಮ, ಜಾತಿಗೆ ಸೇರಿದ್ದು

ತಿ.ನರಸೀಪುರ, ಜ.28– ಸರ್ವರಿಗೂ ಸಮಾನತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಕಲ್ಪಿಸಿರುವ ಸಂವಿಧಾನ ರಾಷ್ಟ್ರದ ಎಲ್ಲಾ ಧರ್ಮ ಮತ್ತು ಜಾತಿ ಜನರಿಗೆ ಸೇರಿದ್ದು ಎಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹಿರಿಯ ಉಪನ್ಯಾಸಕ ಡಾ.ಎಸ್.ಮಂಗಳಮೂರ್ತಿ ತಿಳಿಸಿದರು.



ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ತಾಲೂಕು ದಲಿತ ಸಂಘಟನೆಗಳ ಒಕ್ಕೂಟದಿಂದ ಸಂವಿಧಾನ ದಿನಾಚರಣೆ ಅಂಗವಾಗಿ ಸಂವಿಧಾನ ಯಾರಿಗೆ ಸೇರಿದ್ದು? ಚರ್ಚಾ ಕಾರ್ಯಕ್ರಮದಲ್ಲಿ ವಿಚಾರ ಮಂಡಿಸಿ ಮಾತನಾಡಿದ ಅವರು ಸಮಾನತೆಯಲ್ಲಿ ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಿರುವ ಸಂವಿಧಾನ ಜಾರಿಯಾದ ದಿನವನ್ನು ದೇಶದ ಸರ್ವಧರ್ಮೀಯರು ಗಣರಾಜ್ಯೋತ್ಸವವಾಗಿ ಆಚರಣೆ ಮಾಡುತ್ತಿರುವುದು ವಾಡಿಕೆಯಾಗಿದೆ ಎಂದರು.

ಶೋಷಿತರಿಗಷ್ಟೇ ಅಲ್ಲ, ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಜನರಿಗೂ ಮೀಸಲಾತಿ ಕೊಡುವ ಪ್ರಬುದ್ಧ ಭಾರತದ ಕಲ್ಪನೆಯೊಂದಿಗೆ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ರಚನೆ ಮಾಡಿದ್ದರಿಂದ ಸ್ವಾತಂತ್ರ್ಯ ನಂತರದ ಭಾರತದಲ್ಲಿ ರಾಜಪ್ರಭುತ್ವ ಕೊನೆಗೊಂಡು, ಪ್ರಜಾಪ್ರಭುತ್ವ ಜಾರಿಗೆ ಬಂದಿತು. ಸಾಂವಿಧಾನಿಕವಾಗಿರುವ ಮೀಸಲಾತಿ ಎಸ್ಸಿ/ಎಸ್ಟಿ ಜನರಿಗಷ್ಟೇ ಸಿಗುತ್ತಿದೆ ಎಂಬ ತಪ್ಪು ಭಾವನೆ ಕೆಲವರಲ್ಲಿ ಇನ್ನೂ ಇದೆ. ಸಾಮಾಜಿಕ ಮತ್ತು ಶೈಕ್ಷಣಿಕ ಮಾನದಂಡದಡಿ ಶೇ.50ರಷ್ಟು ಜನರು ಮೀಸಲಾತಿ ಫಲಾನುಭವಿಗಳಾಗಿದ್ದಾರೆ. ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆಯಾಗದಂತೆ ಕಾಲ ಕಾಲಕ್ಕೆ ಕೆಲವನ್ನು ಬದಲಾವಣೆ ಮಾಡಲಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ನಳಂದ ಬುದ್ಧ ವಿಹಾರದ ಬೋಧಿರತ್ನ ಭಂತೇಜಿ, ಒಕ್ಕೂಟದ ಸಂಚಾಲಕ ಎಸ್.ಆರ್. ಶಶಿಕಾಂತ್ ಸೋಸಲೆ ಸೇರಿದಂತೆ ನಾಯಕರ ಸಂಘದ ಅಧ್ಯಕ್ಷ ಬನ್ನೂರು ಚಿಕ್ಕಯ್ಯ, ಗಾಣಿಗರ ಸಂಘದ ಅಧ್ಯಕ್ಷ ಆಲಗೂಡು ರಾಮಚಂದ್ರ ಹಾಗೂ ಇನ್ನಿತರರು ಸಂವಿಧಾನದ ಮಹತ್ವದ ಬಗ್ಗೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಂವಿಧಾನದ ಪ್ರತಿಜ್ಞಾವಿಧಿ ಭೋಧಿಸಲಾಯಿತು.

ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಮಡಿವಾಳರ ಸಂಘದ ಅಧ್ಯಕ್ಷ ಮಹದೇವಸ್ವಾಮಿ ಕುರುಬೂರು, ಬಾಬೂಜಿ ಸಂಘದ ಅಧ್ಯಕ್ಷ ಪುಟ್ಟಯ್ಯ, ಉಪ್ಪಾರ ಮಹಾಸಭಾದ ಸಿದ್ದಪ್ಪಸ್ವಾಮಿ, ಅಹಿಂದ ಅಧ್ಯಕ್ಷ ರವೀಂದ್ರ, ಭಾರತೀಯ ಪರಿವರ್ತನಾ ಸಂಘದ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ, ದಸಂಸ ಜಿಲ್ಲಾಧ್ಯಕ್ಷ ತುಂಬಲ ಮಂಜುನಾಥ್, ಎಸ್.ಆರ್. ರಾಜಶೇಖರಮೂರ್ತಿ, ಮುಖ್ಯಶಿಕ್ಷಕ ಸಿ.ಪುಟ್ಟಸ್ವಾಮಿ, ಮುಖಂಡರಾದ ಡಾ.ಆಲಗೂಡು ಎಸ್.ಚಂದ್ರಶೇಖರ್, ಕೆಬ್ಬೇಹುಂಡಿ ನಿಂಗರಾಜು, ಅಲಗೂಡು ಶಿವಣ್ಣ, ಎಸ್.ನಂಜುಂಡಯ್ಯ, ಕನ್ನಾಯಕನಹಳ್ಳಿ ಮರಿಸ್ವಾಮಿ, ಗಣಗನೂರು ಮಹೇಶ್, ಸೋಮನಾಥಪುರ ಗಣೇಶ್, ಕೆಂಚಪ್ಪ, ಗವಿಸಿದ್ದಯ್ಯ, ಧರ್ಮರತ್ನ ಕುಮಾರ, ಮಹದೇವ, ಕೆ.ಎಂ.ಕಾಂತರಾಜು, ಕೆ.ಎಂ.ಶಿವಕುಮಾರ್ ಇನ್ನಿತರರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಸುಂಡವಾಳು ಗ್ರಾಮದಲ್ಲಿ 45 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಚಾಲನೆ ನೀಡಿದರು. ಈ ವೇಳೆ ಜೆಡಿಎಸ್ ಮುಖಂಡ ವೆಂಕಟೇಶ್, ಬಾಲು, ಹಾರಂಗಿ ನೀರಾವರಿ ಇಲಾಖೆ ಅಧಿಕಾರಿಗಳಾದ ನವೀನ್, ಶಿವಕುಮಾರ್ ಹಾಗೂ ಗ್ರಾಮಸ್ಥರಿದ್ದರು.

ರಥಸಪ್ತಮಿ ಹಿನ್ನೆಲೆ 108 ಸಾಮೂಹಿಕ ಸೂರ್ಯ ನಮಸ್ಕಾರ



ನಂಜನಗೂಡು, ಜ.28– ರಥಸಪ್ತಮಿ ಅಂಗವಾಗಿ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಶನಿವಾರ ಮುಂಜಾನೆ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಪ್ರಾಂಗಣದಲ್ಲಿ ಯೋಗಾಸಕ್ತರಿಂದ 108 ಸಾಮೂಹಿಕ ಸೂರ್ಯ ನಮಸ್ಕಾರ ಯಜ್ಞ ನಡೆಯಿತು.

ಸಮಿತಿ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ಮಾರ್ಗದರ್ಶನದಲ್ಲಿ 300ಕ್ಕೂ ಹೆಚ್ಚು ಯೋಗಬಂಧುಗಳು ಸಮವಸ್ತ್ರಧಾರಿಗಳಾಗಿ 3 ಹಂತದಲ್ಲಿ 50 ನಿಮಿಷ 108 ಬಾರಿ ಆಸನ ಪ್ರದರ್ಶಿಸುವ ಮೂಲಕ ಸೂರ್ಯ ದೇವನಿಗೆ ಭಕ್ತಿ ಪೂರ್ವ ನಮನ ಸಲ್ಲಿಸಿದರು. ಅಲ್ಲದೇ 3 ಹಂತದಲ್ಲಿ ತಲಾ 36 ಸೂರ್ಯ ನಮಸ್ಕಾರ ಮಾಡಿದರು. 5 ನಿಮಿಷ ವಿರಾಮದ ವೇಳೆ ಯೋಗಪಟುಗಳಿಗೆ ದಣಿವು, ಆಯಾಸ ನೀಗಿಸಲು ಕಲ್ಲು ಸಕ್ಕರೆ, ಬೆಲ್ಲ ವಿತರಿಸಲಾಯಿತು.

ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಕಾರ್ಯದರ್ಶಿ ಎನ್.ಆರ್.ಗಣೇಶ್‌ಮೂರ್ತಿ ಮಾತನಾಡಿ, 108 ಸೂರ್ಯ ನಮಸ್ಕಾರ ಮಾಡಲು ಮಾನಸಿಕ ಹಾಗೂ ದೈಹಿಕವಾಗಿ ಸದೃಢರಾಗಿರಬೇಕು. ಸೂರ್ಯದೇವನ ಕೃಪೆಯಿದ್ದರೆ ಸರಳವಾಗಿ ಮಾಡಬಹುದು ಎಂಬುದಕ್ಕೆ ನಮ್ಮ ಯೋಗಬಂಧುಗಳೇ ಸಾಕ್ಷಿ ಎಂದರು. ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ, ನಂಜನಗೂಡು ಯೋಗ ಫೌಂಡೇಶನ್ ಅಧ್ಯಕ್ಷ ಪ್ರಕಾಶ್ ಸೇರಿದಂತೆ ಶಾಖಾ ಪ್ರಮುಖರು ಹಾಗೂ ಯೋಗಶಿಕ್ಷಕರು ಭಾಗವಹಿಸಿದ್ದರು.

ಹುಣಸೂರಲ್ಲಿ ಭತ್ತ, ರಾಗಿ ಖರೀದಿ ಕೇಂದ್ರಕ್ಕೆ ಚಾಲನೆ

ಹುಣಸೂರು, ಜ.28– ನಗರದ ಎಪಿಎಂಸಿ ಆವರಣದಲ್ಲಿ ಬೆಂಬಲ ಬೆಲೆ ಯೋಜನೆಯಡಿ ಆರಂಭಿಸಿರುವ ಭತ್ತ, ರಾಗಿ ಖರೀದಿ ಕೇಂದ್ರಕ್ಕೆ ಶಾಸಕ ಹೆಚ್.ಪಿ. ಮಂಜುನಾಥ್ ಚಾಲನೆ ನೀಡಿದರು.



ನಂತರ ಮಾತನಾಡಿದ ಶಾಸಕರು, ಸರ್ಕಾರ ಈ ಬಾರಿ ಸಿರಿಧಾನ್ಯ ವರ್ಷ ಘೋಷಿಸಿರುವುದರಿಂದಾಗಿ ರಾಗಿ ಬೆಳೆದಿರುವ ರೈತರಿಗೆ ಆಶಾದಾಯಕವಾಗಿದೆ. ಭತ್ತವನ್ನು 2040 ರಿಂದ 2060 ರೂ.ಗೆ ಖರೀದಿಸುವುದರಿಂದ ರೈತರಿಗೆ ನಷ್ಟ ಉಂಟಾಗಲಿದ್ದು, ಮರು ಪರಿಶೀಲನೆ ಅಗತ್ಯವಿದ್ದು, ಈ ಬಗ್ಗೆ ಸದನದಲ್ಲಿ ಚರ್ಚಿಸುವುದಾಗಿ ತಿಳಿಸಿದರು.

ಖರೀದಿ ಕೇಂದ್ರಗಳಲ್ಲಿ ರೈತರು ತರುವ ರಾಗಿ ಮತ್ತು ಭತ್ತ ಪರಿಶೀಲಿಸಿ, ಚೀಲ ಬದಲಾಯಿಸುತ್ತಿರುವುದು ಸರಿ. ಆದರೆ ಇದಕ್ಕಾಗಿ ರೈತರಿಂದ ಯಾವುದೇ ಹಣ ವಸೂಲಿ ಮಾಡಬಾರದು. ಇಲ್ಲಿ ಮಧ್ಯವರ್ತಿಗಳಿಗೆ ಅವಕಾಶ ನೀಡಬಾರದು. ನಿಗದಿತ ದಿನದೊಳಗೆ ರೈತರ ಖಾತೆಗೆ ಹಣ ಪಾವತಿಯಾಗುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕು. ವಹಿವಾಟು ಸಂದರ್ಭ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕೆಂದು ಸೂಚಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ಸರ್ಕಾರದ ಮೇಲೆ ಎಷ್ಟೇ ಒತ್ತಡ ಹಾಕಿದರೂ ಖರೀದಿ ಕೇಂದ್ರ ತಡವಾಗಿ ಆರಂಭಿಸುತ್ತಿರುವುದರಿಂದ ರೈತರಿಗೆ ನಷ್ಟವಾಗಿದೆ. ರೈತರಿಗೆ ಅನುಕೂಲವಾಗುವಂತೆ ಹೋಬಳಿ ಕೇಂದ್ರಗಳಲ್ಲಿ ಖರೀದಿ ಕೇಂದ್ರ ತೆರೆಯಬೇಕಿತ್ತು ಇದರಿಂದ ಸಾಗಾಟ ವೆಚ್ಚ ಕಡಿಮೆಯಾಗಲಿದೆ. ಈಗಾಗಲೇ ಸಾಕಷ್ಟು ರೈತರು ಭತ್ತ ಮಾರಾಟ ಮಾಡಿದ್ದು, ಕೆಲ ರೈತರಿಗೆ ಮಾತ್ರ ನೆರವಾಗಲಿದೆ ಎಂದರು.

ರಾಜ್ಯ ಕೃಷಿ ಮಾರಾಟ ಮಂಡಳಿ ಜಂಟಿ ನಿರ್ದೇಶಕಿ ಎಂ.ವಾಣಿಶ್ರೀ ಮಾತನಾಡಿ, ಸರ್ಕಾರ 5 ಲಕ್ಷ ಮೆಟ್ರಿಕ್ ಟನ್ ರಾಗಿ ಹಾಗೂ 2 ಲಕ್ಷ ಮೆಟ್ರಿಕ್ ಟನ್ ಭತ್ತ ಖರೀದಿಗೆ ಅವಕಾಶ ಕಲ್ಪಿಸಿದೆ. ಹುಣಸೂರು ಕೇಂದ್ರದಲ್ಲಿ ರಾಗಿಗೆ 5301 ಹಾಗೂ ರತ್ನಪುರಿ ಕೇಂದ್ರದಲ್ಲಿ 1850 ಮಂದಿ ಸೇರಿದಂತೆ 7151 ಮಂದಿ ಒಟ್ಟು 1.18 ಲಕ್ಷ ಕ್ವಿಂಟಾಲ್ ಹಾಗೂ ಭತ್ತಕ್ಕೆ ಹುಣಸೂರು ಕೇಂದ್ರದಲ್ಲಿ 848 ಮಂದಿ, ರತ್ನಪುರಿಯಲ್ಲಿ 173 ಮಂದಿ ಸೇರಿದಂತೆ 1021 ರೈತರು 32 ಸಾವಿರ ಕ್ವಿಂಟಾಲ್ ಮಾರಾಟ ಮಾಡಲು ನೋಂದಾಯಿಸಿದ್ದಾರೆ. ರೈತರು ಇನ್ನೂ ನೋಂದಾಯಿಸಿಕೊಳ್ಳಲು ಅವಕಾಶವಿದ್ದು, ಕೃಷಿಕರು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ರಾಗಿ, ಭತ್ತ ಪೂರೈಸುವ ರೈತರ ಖಾತೆಗೆ 10 ದಿನಗಳಲ್ಲಿ ಹಣ ಜಮೆಯಾಗಲಿದ್ದು, ರೈತರಿಗೆ ಅನುಕೂಲವಾಗುವ ರೀತಿ ಕಾರ್ಯ ನಿರ್ವಹಿಸಲಾಗುವುದು ಎಂದರು.

ಖರೀದಿ ಕೇಂದ್ರಕ್ಕೆ ಪ್ರಥಮವಾಗಿ ರಾಗಿ ಪೂರೈಸಿದ ನಲ್ಲೂರು ಪಾಲದ ರೈತ ಮಹಿಳೆ ಸಾಕಮ್ಮ, ಉಯಿಗೌಡನಹಳ್ಳಿ ದಿನೇಶ್‌ರಿಗೆ ಶಾಸಕ ಮಂಜುನಾಥ್ ರಸೀತಿ ವಿತರಿಸಿದರು.

ಈ ವೇಳೆ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷೆ ಶ್ವೇತಾ, ಸದಸ್ಯೆ ಪ್ರಿಯಾಂಕ, ಖರೀದಿ ಕೇಂದ್ರದ ಅಧಿಕಾರಿಗಳಾದ ಸೋಮಣ್ಣ, ನಿತಿನ್ ನಾಯಕ್, ಆಹಾರ ಇಲಾಖೆ ಶಿರಸ್ತೇದಾರ್ ರಾಮಚಂದ್ರ, ಎಪಿಎಂಸಿ ಕಾರ್ಯದರ್ಶಿ ಹಂಪಣ್ಣ, ರೈತ ಸಂಘಧ ತಾಲೂಕು ಅಧ್ಯಕ್ಷ ಜಯರಾಂ, ಮುಖಂಡರಾದ ಪ್ರಭಾಕರಾರಾಧ್ಯ, ನಟರಾಜ್, ಸೇರಿದಂತೆ ಅನೇಕ ರೈತರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪಠಾಣ್ (ಹಿಂ): ಬೆ.10ಕ್ಕೆ, ಮ.1.1.0ಕ್ಕೆ, ರಾ.7.25ಕ್ಕೆ, ರಾ.10.15ಕ್ಕೆ, ಕ್ರಾಂತಿ (ಕ): ಸಂ.4.05ಕ್ಕೆ.
ಸ್ಕ್ರೀನ್ 2	ಗಾಂಧಿ ಗೋಡ್ಸೆ ಏಕ್ ಯುದ್ (ಹಿಂ): ಬೆ.11ಕ್ಕೆ, ಸಂ.4.30ಕ್ಕೆ, ವಾರಿಸು (ತ): ಮ.1.15ಕ್ಕೆ, ಕ್ರಾಂತಿ (ಕ): ಸಂ.6.50ಕ್ಕೆ, ಅಲೋನ್ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಕ್ರಾಂತಿ (ಕ): ಬೆ.9.45ಕ್ಕೆ, ಮ.12.55ಕ್ಕೆ, ರಾ.10ಕ್ಕೆ, ಪಠಾಣ್ (ಹಿಂ): ಸಂ.4.15ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 4	ಕ್ರಾಂತಿ (ಕ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕ್ರಾಂತಿ (ಕ): ಬೆ.8ಕ್ಕೆ, ಬೆ.11.20ಕ್ಕೆ, ಮ.2.40ಕ್ಕೆ, ಸಂ.6ಕ್ಕೆ, ರಾ.9.20ಕ್ಕೆ, ಆರ್ ಸಿ ಬ್ರದರ್ಸ್ (ಕ): ಸಂ.4.10ಕ್ಕೆ.
ಸ್ಕ್ರೀನ್ 2	ಪಠಾಣ್ (ಹಿಂ): ಬೆ.9.45ಕ್ಕೆ, ಮ.12.45ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 3	ಕ್ರಾಂತಿ (ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 4	ಪಠಾಣ್ (ಹಿಂ): ಬೆ.10.45ಕ್ಕೆ, ರಾ.9.15ಕ್ಕೆ, ಗಾಂಧಿ ಗೋಡ್ಸೆ ಏಕ್ ಯುದ್ (ಹಿಂ): ಮ.1.45ಕ್ಕೆ, ಸಂ.6.50ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.11.25ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.30ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1.20ಕ್ಕೆ, ನಾನು ಅದು ಮತ್ತು ಸರೋಜ (ಕ): ರಾ.7.25ಕ್ಕೆ, ಪದವಿ ಪೂರ್ವ (ಕ): ಸಂ.4.30ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.6.25ಕ್ಕೆ, ಸರ್ಕಸ್ (ಹಿಂ): ಮ.12ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (ಇಂ): ಮ.2.45ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕ್ರಾಂತಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೇದ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪಠಾಣ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕ್ರಾಂತಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪಠಾಣ್ (ಹಿ)	4 ಪ್ರದರ್ಶನಗಳು
ರಾಜ್‌ಕಮಲ್	
ಕ್ರಾಂತಿ (ಕ)	4 ಪ್ರದರ್ಶನಗಳು
ಸಂಗಂ	
ವಾಲ್ಟರ್ ವೀರಯ್ಯ (ತೆ)	2 ಪ್ರದರ್ಶನಗಳು
ವಾರಿಸು (ತ)	2 ಪ್ರದರ್ಶನಗಳು
ಲಿಡೋ	
ವೀರಸಿಂಹ ರೆಡ್ಡಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ತುನಿವು (ತ)	4 ಪ್ರದರ್ಶನಗಳು
ಪ್ರಭಾ	
ಪಠಾಣ್ (ಹಿ)	2 ಪ್ರದರ್ಶನಗಳು

ಕೆರೆ ಹೂಳೆತ್ತುವ ಕಾಮಗಾರಿಗೆ ಗುದ್ದಲಿ ಪೂಜೆ

ಹೆಚ್.ಡಿ.ಕೋಟೆ, ಜ.28– ತಾಲೂಕಿನ ರಾಮೇನಹಳ್ಳಿಯಲ್ಲಿ ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದಡಿ 471ನೇ ಕೆರೆ ಹೂಳೆತ್ತುವ ಕಾಮಗಾರಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೈಸೂರು ಪ್ರಾದೇಶಿಕ ವಿಭಾಗದ ಪ್ರಾದೇಶಿಕ ನಿರ್ದೇಶಕ ಬಿ. ಜಯರಾಮ ನೆಲ್ಲಿತಾಯ ಗುದ್ದಲಿ ಪೂಜೆ ನೆರವೇರಿಸಿದರು.



ಬಳಿಕ ಮಾತನಾಡಿದ ಅವರು, ಇಡೀ ಜಗತ್ತೇ ಭೂಮಿ ತಾಯಿ. ಅವಳೊಬ್ಬಳು ತಂಪಾಗಿದ್ದರೆ ಇಡೀ ಜೀವ ಸಂಕುಲ ತಂಪಾಗಿರುತ್ತದೆ. ನಮಗೆ ಹೇಗೆ ಗಾಳಿ, ನೀರು, ಆಹಾರ ಬೇಕು ಹಾಗೆ ಭೂಮಿ ತಾಯಿಗೆ ಜಲಬೇಕು. ನಮ್ಮ ಪೂರ್ವಜರು ಪ್ರತಿ ಗ್ರಾಮದಲ್ಲಿ ದೇವಸ್ಥಾನ, ಕೆರೆ, ಶಾಲೆ ನಿರ್ಮಾಣ ಮಾಡುತ್ತಿದ್ದರು. ಆದರೆ ಅದನ್ನು ನಾವು ಉಳಿಸಿಕೊಳ್ಳುವಲ್ಲಿ ವಿಫಲರಾಗಿದ್ದೇವೆ ಎಂದರು.

ರಾಮೇನಹಳ್ಳಿ ಕೆರೆ 6.20 ಎಕರೆ ವಿಸ್ತೀರ್ಣ ಹೊಂದಿದ್ದು, ಗ್ರಾಮದ 400 ಕುಟುಂಬಗಳಿಗೆ ಇದರಿಂದ ನೆರವಾಗಲಿದೆ. ಕೆರೆ ಹೂಳೆತ್ತುವ ಕಾಮಗಾರಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 11.14 ಲಕ್ಷ ಅನುದಾನ ಮಂಜೂರಾಗಿದ್ದು, ಗ್ರಾಮಸ್ಥರ ಪಾಲು ಅಂದರೆ 9.59 ಲಕ್ಷ ಸೇರಿದಂತೆ ಒಟ್ಟು 20.73 ಲಕ್ಷದ ಯೋಜನೆಯಾಗಿದೆ.

ಗ್ರಾಮಸ್ಥರು 800 ಟ್ರಾಕ್ಟರ್ ಲೋಡ್ ಮಣ್ಣನ್ನು ತೆಗೆದುಕೊಂಡು ಹೋಗಲು ಆಸಕ್ತಿ ತೋರಿದ್ದಾರೆ. ಈ ಕೆರೆಯಿಂದ 800 ಎಕರೆ ಕೃಷಿ ಜಮೀನಿಗೆ ಉಪಯೋಗವಾಗಲಿದೆ. 1300 ಜಾನುವಾರುಗಳಿಗೆ ಕುಡಿಯುವ ನೀರನ್ನು ಒದಗಿಸುತ್ತದೆ. ಈ ಕೆರೆ ಅಭಿವೃದ್ಧಿಯಿಂದ ಅಂತರ್ಜಲ ಮಟ್ಟ ಹೆಚ್ಚಿ ಕೊಳವೆ ಬಾವಿಗಳು ರಿಚಾರ್ಜ್ ಆಗುತ್ತದೆ. ಇದರಿಂದ ಕೃಷಿ ಭೂಮಿಗೆ ಸಮಯಕ್ಕೆ ಸರಿಯಾಗಿ ನೀರು ಒದಗಿಸಲು ಸಹಾಯವಾಗಲಿದೆ ಎಂದರು.


ಈ ವೇಳೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೈಸೂರು ಜಿಲ್ಲಾ ನಿರ್ದೇಶಕ ಲಕ್ಷ್ಮಣ್, ತಾಲೂಕು ಯೋಜನಾಧಿಕಾರಿ ಶಶಿಧರ್, ಸಮಿತಿ ಅಧ್ಯಕ್ಷ ಚಂದ್ರನಾಯಕ, ಗ್ರಾಪಂ ಸದಸ್ಯರಾದ ಉಮೇಶ್, ಕೆರೆ ಅಭಿಯಂತರಾದ ಸುರೇಶ್, ಕೃಷಿ ಮೇಲ್ವಿಚಾರಕ ಜಯರಾಮ, ಮೇಲ್ವಿಚಾರಕರಾದ ಕೃಷ್ಣಮೂರ್ತಿ, ಪ್ರಕಾಶ್, ಶೇಖರ್, ಬಸವರಾಜು, ತಿಮ್ಮಶೆಟ್ಟಿ, ಸೇವಾ ಪ್ರತಿನಿಧಿ ಸಚಿನ್, ಸಮಿತಿ ಪದಾಧಿಕಾರಿಗಳು, ಊರಿನ ಮುಖಂಡರು, ರೈತರು, ಗ್ರಾಮಸ್ಥರು ಹಾಜರಿದ್ದರು.

ನೇಮಕ



ತಿ.ನರಸೀಪುರ, ಜ.28– ಪಟ್ಟಣದ ತ್ರಿವೇಣಿ ನಗರದ ನಿವಾಸಿ ಮುದ್ದುಕೃಷ್ಣ (ಕಿಟ್ಟಿ) ಅವರನ್ನು ಬಿಜೆಪಿ ಜಿಲ್ಲಾ ಎಸ್‌ಟಿ ಮೋರ್ಚಾ ಉಪಾಧ್ಯಕ್ಷರನ್ನಾಗಿ ಜಿಲ್ಲಾ ಗ್ರಾಮಾಂತರ ಎಸ್‌ಟಿ ಮೋರ್ಚಾ ಅಧ್ಯಕ್ಷ ಕೆ.ಎಸ್.ಅಣ್ಣಯ್ಯ ನಾಯಕ್ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಸಿ.ಬಿ.ವಿಜಯ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದೇಶ ಪ್ರವಾಸ



ಕೆಂಪಯ್ಯನಹುಂಡಿ ಮಹದೇವಣ್ಣ

ಟಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರು
ಹಾಗೂ ಕಾಸ್ಕರ್ಡ್ ಬ್ಯಾಂಕಿನ ರಾಜ್ಯ ನಿರ್ದೇಶಕರು

ಜನವರಿ 30,2023 ರಂದು ವಿದೇಶ ಪ್ರವಾಸಕ್ಕೆ ತೆರಳುತ್ತಿರುವ
ಇವರ ಪ್ರಯಾಣ ಸುಖಕರವಾಗಿರಲಿ ಎಂದು ಹಾರೈಸುವ
ಪಿ.ಎಲ್.ಡಿ ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರು,
ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗ

L & L Developers
BUY A SITE @
LAKSHMI ENCLAVE
30X40 | 30X50
PLOTS AVAILABLE
ATTACHED TO RT NAGAR
MUDA APPROVED
BANK LOANS UP TO 80%
READY FOR REGISTRATION
9986781316 | 8660331880
www.landldevelopers.com
#155, 1st Floor, CH-13/2,12th Cross, 2nd Main, Jayanagar, Mysore-14

HIRING CIVIL ENGINEERS
Location: Mysore
- Senior Engineer - 1 Post
- Site Engineer - 2 Post
JD: Candidate must be proficient in
1. Layout Development
2. Construction of Apartments and Villas
3. Preparing BOQ
4. Experience handling - Multiple location projects, Team, Billing, Civil associate softwares, Microsoft Office tools.
Salary upto 50,000/-
Send resume to:
acc@indianestate.net
WhatsApp to: 9449294777
Interview Date: 1st Feb 2023
Venue - # 17, 2nd Floor, Satya Complex, Indian Estate, Kalidasa Road, Mysore
Time - 9:30 am to 1:00pm

SITE FOR SALE
Near Devegowda Circle
Bannur Road
30x40, 40x60, 50x80
Contact: 7022252235

ಮೈಸೂರು ಮಿತ್ರ 43
ಜಾಹೀರಾತಿಗಾಗಿ ಸಂಪರ್ಕಿಸಿ:
Ph:0821-2496522 / 23
Email:ad@mysurumithra.com

WANTED
For Reputed Restaurant In Mysore
Chef - South Indian, North Indian Chinese, Tandoori, Dosa Master, Tea, Coffee and Juice Master
Helpers, Waiters, Captain's Cashier's
+918088865803

INDIA'S BIGGEST HANDICRAFT AND HANDLOOM EXHIBITION
SHHA
SAHARA ART AND CRAFTS SHOPPING FESTIVAL ÷ 2022 - 23
EXHIBITION CUM SALE
ENTRY AND PARKING FREE



Artisans and weavers displaying and selling their handicrafts and handlooms products under one roof from all over India.
16th DEC 2022 TO 19th FEB 2023.
ADDRESS ÷ SCOUT & GUIDE GROUND, BEHIND D C OFFICE, *MYSORE* - 570005.
@Sahara art and crafts
@saharaartsandcrafts
@Sahara art and crafts
WE ACCEPT VISA DEBIT & CREDIT
Paytm Accepted Here
MOB ÷ 9880903786/ 9590018133/ 8892138769
Regd. by : O/o. D. C. (Handicrafts) Ministry of Textile, Govt. of India

SITES At
Mysore - Madikeri NH 275
CC Road, All Round Compound, Ready to Build
100% Loan Avbl
PRM/KA/RERA/1268/378/PR /200205/003247
Yesh 9538885511

Nakhsha HOMES
ಕನಸಿನ ಮನೆ ನಿರ್ಮಾಣ @
₹1899*
Per Sq. Ft.
(Including Taxes & Interiors)
*T&C Apply
www.nakhshahomes.com
Contact :- 70221 24411 / 96069 66266

SITE FOR SALE
30X40
MUDA APPROVED
at R T Nagar
Call: 99458 57017

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

6ನೇ ವರ್ಷದ ಸವಿನೆನಪು



ದೊಡ್ಡಟ್ಟಿ ಶ್ರೀ ಸೋಮಣ್ಣ

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ನಮ್ಮ ಹೃದಯದಲ್ಲಿ ಸದಾ ನೆಲೆಸಿದ್ದೀರಿ, ಭಗವಂತ ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ,

ದುಃಖತಪ್ತರು:
ತಾಯಿ-ದೇವಮ್ಮ ಹಾಗೂ ಧರ್ಮಪತ್ನಿ ಪದ್ಮ, ಮಕ್ಕಳು, ಅಳಿಯಂದಿರು, ದೊಡ್ಡಟ್ಟಿ ಮರೀಗೌಡರು ಕುಟುಂಬವರ್ಗ, ಕುಂಬಾರ ಕೊಪ್ಪಲು, ಮೈಸೂರು.

Exchange Offer from
SAI SOFA MAKERS
Change your Old Sofa to Brand New Luxury Sofa
7760787625

ಹಸಿರು ನಮ್ಮ ಉಸಿರು

COMPARE OUR PRICE BEFORE YOU BUY
Biggest furniture expo of Mysore is back
WHOLESALE PRICE FURNITURE MARKET
FEBRUARY, 2023
3 4 5 & 6
10.30 am to 8.30 pm
JAYAMMA GOVINDEGOWDA KALAYANA MANTAPA
MYSORE, KARNATAKA



BOOK YOUR STALL NOW
9886665857 / 8122111433
Event by TURNKEY EVENTS Key to success



Garden* VARELI
ಹಬ್ಬದ ಸಂಭ್ರಮಕ್ಕೆ ಕಳೆ ನೀಡಲು ಇಲ್ಲಿದೆ ಇನ್ನೂ ಒಂದು ಕಾರಣ !
ಪ್ರೇರಕ ಡಿಸೈನ್‌ಗಳು.
ಮನಮೋಹಕ ಪ್ರಿಂಟ್‌ಗಳು !
40%ರ ತನಕ ಡಿಸ್ಕೌಂಟ್
ಸೆಕೆಂಡ್ ಸೇಲ್
ಮಾರಾಟ ಈಗ ಲೈವ್ ಆಗಿದೆ | ಸಮಯ- ಬೆಳಗ್ಗೆ ಗಂಟೆ 10.00 ರಿಂದ ರಾತ್ರಿ ಗಂಟೆ 8.00 (ರವಿವಾರವೂ ತೆರೆದಿರುತ್ತದೆ)
ಸೀರೆಗಳು ₹ 395 ರಿಂದ ಆರಂಭ | ಡ್ರೆಸ್ ಮೆಟೀರಿಯಲ್ ₹ 74 / ಮೀ.ನಿಂದ ಆರಂಭ | ಸ್ಪೆಷಲ್ ಕೌಂಟರ್‌ನಿಂದ ₹ 790 ರಲ್ಲಿ ಯಾವುದೇ 2 ಸೀರೆಗಳನ್ನು ಖರೀದಿಸಿರಿ.
ಆನಂದ್ ವಿಹಾರ್ ಕಲ್ಯಾಣ ಮಂಟಪ, ಕಲ್ಯಾಣ್ ಜ್ಯುವೆಲರ್ಸ್ ಹಿಂದೆ, 2930/1a, ಚರ್ಚ್ ರಸ್ತೆ, ಬೆಂಗಳೂರು ನೀಲಗಿರಿ ರಸ್ತೆ, ಮೈಸೂರು-570001.

THIRUMALA PUBLIC SCHOOL
(Affiliated to CBSE, New Delhi,Aff.No:831085)
96, Sardar Vallabhbhai Patel Nagar, TN Pura Road, Mysore-28
Applications are invited from qualified ,experienced and competent candidates for the following posts.

POST	QUALIFICATION
TGT English	- M.A. (Eng) With B.Ed
PRT Hindi	- M.A./B.A (Hindi) With B.Ed
Primary Teachers	- B.A./B.Sc./B.Com with D.Ed/B.Ed
Kindergarten Teachers	- Graduate with NTT or Montessori Training

* Candidate should be fluent in communicative English & well versed in computer.
* Salary will commensurate with qualification & experience

Apply within 15 days at the address above or by
Email: career@thirumalapublicschool.org, Ph: 9148102123

